ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 10 | ಸಂಚಿಕೆ 10 | ಪುಟ 16

ಮಾರ್ಚ್ 6, 2016 ರೂ. 10/-

web: www.janashakthi.co.in

e-mail : js_weekly@yahoo.com

‘ಕ್ಯುಂಕಿ ಮಿನಿಸ್ಟರ್ ಕಭಿ ಸ್ಟುಡೆಂಟ್ ನಹಿ ಥಿ’





‘ಯೂಸೂಫ್ ಶೇಖ್’ ‘ಸೋನಿ ಸೂರಿ’ಗಳ ಸಾಂವಿಧಾನಿಕ ಹಕ್ಕುಗಳನ್ನು ರಕ್ಷಿಸಿ: ಎಡಪಕ್ಷಗಳು



ಪಂಚಾಯತ್ ಫೈಟ್ : ಗೆದ್ದವರು ಯಾರು?

ಬಣ್ಣದ ಮಾತುಗಳ ಹೇಳುವ ರೈಲ್ವೆ ಬಜೆಟ್

ಆರೋಗ್ಯ ಕವಚ ಕಾರ್ಮಿಕರ ಬಾಳಲ್ಲಿ ಕಾರ್ಮೋಡ



ಪಂಚವಾದ್ಯದ ಕಲೆಗೆ ಆವರಿಸಿದ ಜಾತಿ ಮೋಡ







ನಾಗರಿಕರ ಮೇಲೆ ಯದ್ವಾತದ್ವಾ ಹಲ್ಲೆಗಳನ್ನು ನಿಲ್ಲಿಸಿ

ಕೇವಲ ಬಿಜೆಪಿಯ ಪ್ರಧಾನಿಯಲ್ಲ, ಇಡೀ ದೇಶದ ಪ್ರಧಾನಿ ಎಂದು ತೋರಿಸಿ

–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಜೆಎನ್‌ಯು ವಿದ್ಯಾರ್ಥಿ ಸಂಘದ ಅ ಧ್ಯಕ್ಷ ಕನ್ಹೈಯ ಕುಮಾರ್ ಅವರನ್ನು ಪಾಟಿಯಾಲ ಹೌಸ್ ಕೋರ್ಟ್‌ನ ಮುಂದೆ ಹಾಜರು ಪಡಿಸಲು ಒಯ್ಯುತ್ತಿದ್ದಾಗ ಆತನ ಮೇಲೆ, ಮತ್ತು ಜೆಎನ್‌ಯು ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಪತ್ರಕರ್ತರ ಮೇಲೆ ಹಿಂಸಾಚಾರ ಹರಿಯು ಬಿಟ್ಟ ನಂತರ ಕಳೆದೆರಡು ದಿನಗಳಲ್ಲಿ ಮತ್ತೆರಡು ಇಂತಹ ತಮಗಿಂತ ಭಿನ್ನವಾದ ಅಭಿಪ್ರಾಯಗಳನ್ನು ಹೊಂದಿರುವವರನ್ನು ದ್ವೇಷಿಸುವ, ಅವರನ್ನು ಬೆದರಿಸಲು ಹಿಂಸಾಚಾರ ನಡೆಸುವ ಘಟನೆಗಳು ವರದಿಯಾಗಿವೆ.

ಛತ್ತೀಸ್‌ಗಡದ ದಾಂತೆವಾಡದಲ್ಲಿ ಸಾಮಾಜಿಕ ಕಾರ್ಯಕರ್ತೆ ಮತು ಎಎಪಿ ಮುಖಂಡರಾಗಿರುವ ಸೋನಿ ಸೊರಿಯವರ ಮೇಲೆ ಅಸಿಡ್ ದಾಳಿ ನಡೆದಿದೆ. ಮಹಾರಾಷ್ಟ್ರದ ಲಾತೂರ್‌ನಲ್ಲಿ ಬಲಪಂಥೀಯ ಗುಂಪೊಂದು ಪೊಲಿಸ್‌ಪಡೆಯ ಸಿಬ್ಬಂದಿ ಯುಸುಫ್ ಶೇಖ್‌ನಿಂದ ಬಲವಂತವಾಗಿ ಕೇಸರೀ ಬಾವುಟವನ್ನು ನೆಡಿಸಿದೆ.

ಕೇಂದ್ರ ಸರಕಾರ , ಮತ್ತು ವಿಶೇಷವಾಗಿ, ತಾನು ಬಿಜೆಪಿ ಪ್ರಧಾನ ಮಂತ್ರಿಯಲ್ಲ, ಇಡೀ ದೇಶದ ಪ್ರಧಾನ ಮಂತ್ರಿ ಎಂದು ಹೇಳಿಕೊಂಡಿರುವ ಪ್ರಧಾನ ಮಂತ್ರಿ ಮುಂದೆ ಬಂದು ಇಂತಹ ಕುಕೃತ್ಯಗಳ ವಿರುದ್ಧ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಸೋನಿ ಸೊರಿಯವರ ಮೇಲೆ ಆಸಿಡ್ ದಾಳಿ ಆಘಾತಕಾರಿ. ಆಕೆಯನ್ನು ತುರ್ತು ವೈದ್ಯಕೀಯ ಚಿಕಿತ್ಸೆಗೆ ದಿಲ್ಲಿಗೆ ಒಯ್ಯಬೇಕಾಗಿ ಬಂದಿದೆ.

ಇನ್ನುಲಾತೂರ್‌ನ ಹಿಂಸಾಚಾರವಂತೂ ಆಕ್ರೋಶ ಉಂಟು ಮಾಡುವಂತದ್ದು. ನಗರದ ಒಂದು ಸೂಕ್ಷ್ಮ ಪ್ರದೇಶವಾದ ಅಂಬೇಡ್ಕರ್ ಚೌಕದಲ್ಲಿ ಕೇಸರೀ ಬಾವುಟ ಸ್ಥಾಪಿಸುವ ಬಲಪಂಥೀಯ ಪಡೆಗಳ ಕೃತ್ಯ ಕಾನೂನು–ಸುವ್ಯವಸ್ಥೆಯ ಪ್ರಶ್ನೆಗಳನ್ನು ಉಂಟು ಮಾಡಬಹುದಿತ್ತು. ಹಾಗಾಗದಂತೆ ತಡೆಯಲು ಹೋದ ಯೂಸುಫ್ ಶೇಖ್‌ನ ಕೈಯಲ್ಲಿ ಬಲವಂತವಾಗಿ ಕೇಸರೀ ಬಾವುಟವನ್ನು ಹಿಡಿಸಿ ಮೆರವಣಿಗೆ ನಡೆಸಲಾಯಿತು.

ಅವರು ಪರಿಸ್ಥಿತಿಯನ್ನು ಕಂಡು ರೆನಾಪೂರ್ ಪೋಲೀಸ್ ಠಾಣೆಯ ಉಸ್ತುವಾರಿ ವಹಿಸಿದ್ದ ಅಧಿಕಾರಿಗೆ ಪರಿಸ್ಥಿತಿಯನ್ನು ತಹಬಂದಿಗೆ ತರಲು ಇನ್ನಷ್ಟು ಪೋಲೀಸ್ ಪಡೆಗಳನ್ನು ಕಳಿಸಬೇಕು ಎಂದು ಮೊಬೈಲ್ ಕರೆ ಮಾಡಿದರೂ ಅದು ಬಂದ್ದು ಬಹಳ ತಡವಾಗಿ ಈ ನಡುವೆ ಆ ಜನಜಂಗುಳಿ ತನ್ನ ಮೇಲೆ ಅಮಾನುಷ ಹಲ್ಲೆ ಮಾಡಿ ಸಾರ್ವಜನಿಕವಾಗಿ ಅವಮಾನ ಮಾಡಿತು ಎಂದು ಈ ಪೊಲಿಸ್ ಸಿಬ್ಬಂದಿ ದೂರು ನೀಡಿದ್ದಾರೆ.

ಈ ಘಟನೆಗಳಲ್ಲಿನ ಆತಂಕಕಾರಿ ಸಂಗತಿಯೆಂದರೆ ಕಾನೂನುಪಾಲನೆಯ ಹೊಣೆಯಿರುವ ಪಡೆಗಳು ನಿಷ್ಕ್ರಿಯುವಾಗಿರುವುದು, ಅಥವ ಹಿಂಸಾಚಾರ ನಡೆಸುವವರೊಂದಿಗೇ ಶಾಮೀಲಾಗಿರುವುದು. ಈ ರೀತಿ ಶಾಮೀಲಾಗದಿರುತ್ತಿದ್ದರೆ, ಈ ನಾಡಿನ ಕಾನೂನುಗಳ ಬಗ್ಗೆ ಅತ್ಯಂತ ನಿರಾದರವನ್ನು ಪ್ರದರ್ಶಿಸುವ ಇಂತಹ ನಗ್ನ ದುಷ್ಕೃತ್ಯಗಳು ತ್ವರಿತವಾಗಿ ಹರಡಲು ಅವಕಾಶವಾಗುತ್ತಿರಲಿಲ್ಲ ಎಂಬುದು ಸ್ಪಷ್ಟ. ದೇಶದಲ್ಲಿ ಉಂಟಾಗಿರುವ ಅಸಹಿಷ್ಣುತೆಯ, ದ್ವೇಷದ ಮತ್ತು ಧ್ರುವೀಕರಣದ ವಾತಾವರಣ ಇಂತಹ ದುಷ್ಟ ಕೃತ್ಯಗಳನ್ನೆಸಗುವವರಿಗೆ ಭಂಡತನ ಪ್ರದರ್ಶಿಸುವ ಧೈರ್ಯ ಕೊಟ್ಟಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖೇದ ವ್ಯಕ್ತಪಡಿಸಿದೆ. ತಾವು ಇಡೀ ದೇಶದ ಪ್ರಧಾನ ಮಂತ್ರಿ ಎನ್ನುವವರು ಸಂವಿಧಾನವನ್ನು ಮುರಿಯಲು ಬಿಡುವದಿಲ್ಲ ಎಂದು ನಾಗರಿಕರಲ್ಲಿ ಭರವಸೆ ಮೂಡಿಸಬೇಕಾಗಿದೆ ಎಂದು ಸಿಪಿಐ(ಎಂ) ಹೇಳಿದೆ.

ಜೆಎನ್‌ಯು ವಿದ್ಯಾರ್ಥಿಗಳ ಹೋರಾಟ: ಮಧ್ಯಪ್ರವೇಶಿಸಲು ರಾಷ್ಟಪತಿಗಳಿಗೆ ಮನವಿ

'ರಾಷ್ಟ್ರ–ವಿರೋಧಿ' ಎಂಬ ಸುಳ್ಳು ಆಪಾದನೆಗಳ ಮೂಲಕ ಆರೆಸ್ಸೆಸ್–ಬಿಜೆಪಿ ದೇಶದ ಎಡ, ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯಾತೀತ ಶಕ್ತಿಗಳ ಮೇಲೆ ಜೆಎಎನ್‌ಯು ಪ್ರಸಂಗವನ್ನು ಬಳಸಿಕೊಂಡು ದಾಳಿ ಆರಂಭಿಸಿದೆ. ಅದು ಈ ಅಪಾಯಕಾರಿ ಮಾರ್ಗವನ್ನು ತ್ಯಜಿಸುವಂತೆ ರಾಷ್ಟ್ರಪತಿಗಳು ಮಧ್ಯಪ್ರವೇಶಿಸಬೇಕು ಎಂದು ಅವರನ್ನು ಫೆಬ್ರುವರಿ 18ರಂದು ಭೇಟಿಯಾದ ಎಡಪಕ್ಷಗಳು, ಮತ್ತು ಜೆಡಿ(ಯು), ಆರ್‌ಜೆಡಿ ಹಾಗೂ ಎನ್‌ಸಿಪಿ ಮುಖಂಡರ ನಿಯೋಗ ಆಗ್ರಹಿಸಿದೆ.

ಜೆಎನ್‌ಯು ಮೇಲೆ ಆರೆಸ್ಸೆಸ್ ದಾಳಿ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಕೃಪಾಪೋಷಣೆಯಲ್ಲೇ ನಡೆದಿದೆ. ನಾವು ಇದನ್ನು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ನಡೆಸಬೇಕೆಂದಿರುವ ಕೋಮುವಾದಿ ಶಕ್ತಿಗಳ ಇನ್ನೂ ದೊಡ್ಡ ಅಜೆಂಡಾದ ಭಾಗವಾಗಿ ಕಾಣುತ್ತೇವೆ ಎಂದು ನಿಯೋಗ ಸಲ್ಲಿಸಿದ ಮನವಿ ಪತ್ರದಲ್ಲಿ ಹೇಳಲಾಗಿದೆ. ಇದು ಪುಣೆಯ ಎಫ್ಟಿಐಐನಲ್ಲಿ, ಚೆನ್ನೈನ ಐಐಟಿಯಲ್ಲಿ, ಹೈದರಾಬಾದ್ ವಿವಿಯಲ್ಲಿ ಹಾಗೂ ಈಗ ಜಾದವ್‌ಪುರ್ ವಿವಿಯಲ್ಲಿ ಕಾಣ ಬರುತ್ತದೆ ಎಂದು ಅದು ಹೇಳಿದೆ.

ಆರೆಸ್ಸೆಸ್–ಬಿಜೆಪಿ ಜನತೆಯ ಪ್ರಜಾಪ್ರಭುತ್ವ ಮತ್ತು ಸಂವಿಧಾನಿಕ ಹಕ್ಕುಗಳ ಮೇಲೆ ದಾಳಿ ನಡೆಸಿದೆ ಎಂಬುದು ಸ್ಪಷ್ಟ. ಇವು ದೇಶದಲ್ಲಿ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಅದರ ಪ್ರಯತ್ನಗಳ ಭಾಗ.

ಕನ್ಹೈಯ ಕುಮಾರ್ ಬಿಡುಗಡೆ ಮಾಡಬೇಕು, ಮತ್ತು ಎಲ್ಲ ವಿದ್ಯಾರ್ಥಿಗಳ ಮೇಲೆ ಹಾಕಿರುವ ರಾಜದ್ರೋಹದ ಕೇಸನ್ನು ಹಿಂತೆಗೆದುಕೊಳ್ಳಬೇಕು ಎಂದು ರಾಷ್ಟ್ರಪತಿಗಳನ್ನು ಆಗ್ರಹಿಸಿರುವ ಮನವಿ ಕಿರುಕುಳ ಮತ್ತು ಬೇಟೆಗೆ ಅವಕಾಶ ಕೊಡಬಾರದು ಎಂದಿದೆ. ಸರಕಾರ ಒದಗಿಸಿರುವ ಸಾಕ್ಷ್ಯಗಳಲ್ಲಿ ಹೆಚ್ಚಿನವು ಸುಳ್ಳು ಎಂಬ ಸತ್ಯ ಹೊರಬರುತ್ತಿದೆ. ಈ ಸುಳ್ಳು ಸಾಕ್ಷ್ಯಗಳನ್ನು ಸೃಷ್ಟಿಸಿದವರು ಮತ್ತು ಅದನ್ನು ಪ್ರಚಾರ ಮಾಡಿದವರನ್ನು ಶಿಕ್ಷಿಸಬೇಕು .

"ಇಂದು ಜನಗಳ ಸಂವಿಧಾನಿಕ ಹಕ್ಕುಗಳನ್ನು ತುಳಿದು ಹಾಕುತ್ತಿರುವಾಗ ಅವನ್ನು ರಕ್ಷಿಸಲು ಸಂವಿಧಾನದ ರಕ್ಷಕರಾಗಿ ತಾವು ತುರ್ತಾಗಿ ಮಧ್ಯಪ್ರವೇಶಿಸಬೇಕು' ಎಂದು ಮನವಿ ಪತ್ರ ಕೋರಿದೆ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಎಸ್.ಸುಧಾಕರ ರೆಡ್ಡಿ, ಜನತಾದಳ (ಯು)ನ ಸಂಸತ್ ಸದಸ್ಯ ಪವನ್ ವರ್ಮ, ಆರ್‌ಜೆಡಿ ಸಂಸದ ಪ್ರೇಮಚಂದ್ ಗುಪ್ತ, ಎನ್‌ಸಿಪಿಯ ಡಿ.ಪಿ. ತ್ರಿಪಾಠಿ ಹಾಗೂ ಎಡಪಕ್ಷಗಳ ಸಂಸತ್ ಸದಸ್ಯರಾದ ಡಿ.ರಾಜ(ಸಿಪಿಐ) ಮತ್ತು ಮಹಮ್ಮದ್ ಸಲೀಂ(ಸಿಪಿಐ–ಎಂ) ಈ ನಿಯೋಗದಲ್ಲಿದ್ದರು.

ಮುಂಬರುವ ವಿಧಾನಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) ಕಾರ್ಯತಂತ್ರ

ಫೆಬ್ರುವರಿ 17–18ರಂದು ದಿಲ್ಲಿಯಲ್ಲಿ ಸಭೆ ಸೇರಿದ ಸಿಪಿಐ(ಎಂ) ಕೇಂದ್ರ ಸಮಿತಿ ಮುಂಬರುವ ಐದು ರಾಜ್ಯಗಳ ವಿಧಾನ ಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) ಹೇಗೆ ಭಾಗವಹಿಸಬೇಕು ಎಂದು ಚರ್ಚಿಸಿ ನಿರ್ಧರಿಸಿದೆ.

ಪಶ್ಚಿಮ ಬಂಗಾಲ:

ಇಲ್ಲಿ ತೃಣಮೂಲ ಕಾಂಗ್ರೆಸ್ ಸರಕಾರವನ್ನು ಪದಚ್ಯುತಗೊಳಿಸಿ ಪ್ರಜಾಪ್ರಭುತ್ವವನ್ನು ಮತ್ತೆ ತರುವುದು ಮತ್ತು ರಾಜ್ಯದಲ್ಲಿ ಧ್ರುವೀಕರಣವನ್ನು ತರುವ ಕೋಮುವಾದಿಗಳ ಆಕ್ರಮಣಕಾರೀ ಪ್ರಯತ್ನಗಳನ್ನು ವಿಫಲಗೊಳಿಸುವುದು ಪ್ರಧಾನ ಕಾರ್ಯಭಾರ. ಆದ್ದರಿಂದ ತೃಣಮೂಲ ಕಾಂಗ್ರೆಸನ್ನು ಸೋಲಿಸಲು ಹಾಗೂ ಬಿಜೆಪಿ ಮತ್ತು ಅದರ ಹುನ್ನಾರಗಳನ್ನು ದೂರವಾಡಲು ಜನತೆಯು ಐಕ್ಯತೆಯುನ್ನು ಬಲಗೊಳಿಸುವುದಕ್ಕೆ ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳ ಸಹಕಾರವನ್ನು ಸಿಪಿಐ(ಎಂ) ಕೋರುತ್ತದೆ.

ಕೇರಳ:

ಎಲ್‌ಡಿಎಫ್ ಈ ರಾಜ್ಯದಲ್ಲಿ ಯುಡಿಎಫ್‌ನ್ನು ಸೋಲಿಸಲು ಸಿದ್ಧತೆಗಳನ್ನು ಅಂತಿಮಗೊಳಿಸುತ್ತಿದೆ. ವ್ಯಾಪಕ ಪ್ರಮಾಣದ ಭ್ರಷ್ಟಾಚಾರ ಮತ್ತು ದುರಾಡಳಿತ ಕಾಂಗ್ರೆಸ್ ನೇತೃತ್ವದ ಯುಡಿಎಫ್‌ಗೆ ಬಹಳಷ್ಟು ಅಪಕೀರ್ತಿ ತಂದಿದೆ. ಕೇರಳದ ಜನತೆ ತಮ್ಮ ಪ್ರಗತಿಪರ ಮತ್ತು ಪ್ರಜಾಪ್ರಭುತ್ವವಾದಿ ಪರಂಪರೆಯನ್ನು ಎತ್ತಿ ಹಿಡಿದು ಎಲ್‌ಡಿಎಫ್‌ಗೆ ಒಂದು ನಿರ್ಣಾಯಕ ಬಹುಮತವನ್ನು ಕೊಡಬೇಕು ಎಂದು ಕೇಂದ್ರ ಸಮಿತಿ ಮನವಿ ಮಾಡಿದೆ.

ತಮಿಳುನಾಡು ಮತ್ತು ಪುದುಚೇರಿ:

ತಮಿಳುನಾಡಿನಲ್ಲಿ ಸಿಪಿಐ(ಎಂ), ಸಿಪಿಐ, ಎಂಡಿ–ಎಂಕೆ ಮತ್ತು ವಿಸಿಕೆ ಸೇರಿಕೊಂಡು 'ಜನತಾಕಲ್ಯಾಣ ರಂಗ'ವನ್ನು ರಚಿಸಿವೆ. ಈ ರಂಗ ಜನತೆಯ ಜ್ವಲಂತ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳುತ್ತಿದೆ. ಈಗ ಈ ಚುನಾವಣೆಗಳಲ್ಲಿ ಒಂದು ಮೈತ್ರಿಕೂಟವಾಗಿ ಸ್ಪರ್ಧಿಸಲು ನಿರ್ಧರಿಸಿದೆ, ಒಂದು ಸಮಾನ ಕನಿಷ್ಟ ಕಾರ್ಯಕ್ರಮವನ್ನು ಅಂಗೀಕರಿಸಲಾಗಿದೆ. ಪುದುಚೇರಿಯಲ್ಲೂ ಈ ರಂಗ ಒಂದು ಮೈತ್ರಿಕೂಟವಾಗಿ ಚುನಾವಣೆಗಳಲ್ಲಿ ಸ್ಪರ್ಧಿಸುತ್ತದೆ.

ಅಸ್ಸಾಂ

ಇಲ್ಲಿ ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್), ಆರ್‌ಎಸ್‌ಪಿ, ಎಸ್‌ಯುಸಿಐ(ಸಿ) ಮತ್ತು ಆರ್‌ಸಿಪಿಐ ಒಂದಾಗಿ ಸ್ಪರ್ಧಿಸಲು ನಿರ್ಧರಿಸಿವೆ. "ಕಾಂಗ್ರೆಸನ್ನು ಅಧಿಕಾರದಿಂದ ಇಳಿಸಿ, ಬಿಜೆಪಿಯನ್ನು ಸೋಲಿಸಿ ಮತ್ತು ಐಕ್ಯತೆ, ಸಮಗ್ರತೆ, ಶಾಂತಿ ಮತ್ತು ಅಸ್ಸಾಂನ ಸರ್ವತೋಮುಖ ಅಭಿವೃದ್ಧಿಗಾಗಿ ಎಡ ಮತ್ತು ಪ್ರಜಾಪ್ರಭುತ್ವವ ಶಕ್ತಿಗಳನ್ನು ಬಲಪಡಿಸಿ' ಎಂಬ ಘೋಷಣೆಯ ಮೇಲೆ ಸ್ಪರ್ಧಿಸಲಾಗುವುದು.

ಸರ್ವಾಧಿಕಾರಶಾಹಿ ದಾಳಿಗಳ ವಿರುದ್ಧ ಮತ್ತೆರಡು ರ್‍ಯಾಲಿಗಳು

ಜೆಎನ್‌ಯು ವಿದ್ಯಾರ್ಥಿಗಳ ಹೋರಾಟಕ್ಕೆ ಬೆಂಬಲವಾಗಿ ಫೆಬ್ರುವರಿ 18 ರ ಬೃಹತ್ ಮತಪ್ರದರ್ಶನದ ನಂತರ, ಈ ಹಿಂದೆಯೇ ದೇಶದ ಕೇಂದ್ರೀಯ ವಿವಿಗಳ ವಿದ್ಯಾರ್ಥಿಗಳು ರಚಿಸಿಕೊಂಡಿರುವ ಸಾಮಾಜಿಕ ನ್ಯಾಯದ ಜಂಟಿ ಕ್ರಿಯಾ ಸಮಿತಿಯ ನೇತೃತ್ವದಲ್ಲಿ ಫೆಬ್ರುವರಿ 23 ರ 'ದಿಲ್ಲಿ ಚಲೋ' ಮೆರವಣಿಗೆಯಲ್ಲಿ ದೇಶದ ವಿವಿಧೆಡೆಗಳಿಂದ ಬಂದಿದ್ದ ಸಾವಿರಾರು ವಿದ್ಯಾರ್ಥಿಗಳು ಭಾಗವಹಿಸಿ ರೋಹಿತ್ ವೆಮುಲಾಗೆ ನ್ಯಾಯ ದೊರಕಿಸಬೆಕೆಂದು ಒತ್ತಾಯಿಸಿದರು, ಶೈಕ್ಷಣಿಕ ಸಂಸ್ಥೆಗಳಲ್ಲಿ ಜಾತಿ ತಾರತಮ್ಯ ನಿಲ್ಲಿಸಲು 'ರೋಹಿತ್ ಕಾನೂನು' ತರಬೇಕು, ರೋಹಿತ್‌ನ 'ಸಾಂಸ್ಥಿಕ ಕೊಲೆ'ಗೆ ಕಾರಣರಾದ ಬಂಡಾರು ದತ್ತಾತ್ರೇಯ, ಸ್ಮೃತಿ ಇರಾನಿ ಮುಂತಾದವರನ್ನು ಶಿಕ್ಷಿಸಬೇಕು, ಹೈದರಾಬಾದ್ ವಿವಿ ಉಪಕುಲಪತಿ ಅಪ್ಪಾರಾವ್ ವಜಾ ಮಾಡಬೇಕೆಂದು ಆಗ್ರಹಿಸಿದರು. ಇದರಲ್ಲಿ ರೋಹಿತ್ ತಾಯಿ ಭಾಗವಹಿಸಿದರು. ವಿದ್ಯಾರ್ಥಿಗಳನ್ನು ಉದ್ದೇಶಿಸಿ ಸೀತಾರಾಂ ಯೆಚೂರಿ, ಬೃಂದಾಕಾರಟ್, ಸುಧಾಕರ ರೆಡ್ಡಿ , ವಿ.ಶ್ರೀನಿವಾಸ ರಾವ್, ಮೇಧಾ ಪಾಟ್ಕರ್, ಯೋಗೇಂದ್ರ ಯಾದವ್ ಮತ್ತಿತರರು ಮಾತಾಡಿದರು.

ಫೆಬ್ರುವರಿ 24ರಂದು ಸಾವಿರಾರು ರೈತರು, ಕೃಷಿಕೂಲಿಕಾರರು, ಆದಿವಾಸಿಗಳು, ದಲಿತರು, ಮೀನುಗಾರರು ಮತ್ತು ಇತರ ಶ್ರಮಜೀವಿಗಳು ತಮ್ಮ ಮೇಲೆ ಮೋದಿ ಸರಕಾರದ ದಾಳಿಗಳ ವಿರುದ್ಧ ಮತಪ್ರದರ್ಶನ ನಡೆಸಿದರು, ಜನಗಳ ಮೇಲೆ ನವ–ಉದಾರವಾದಿ ದಾಳಿಗಳನ್ನು ಪ್ರತಿಭಟಿಸಿ ನಡೆದ ಈ ರ್‍ಯಾಲಿಯಲ್ಲಿ ರೈತ ಮತ್ತು ಕೃಷಿಕೂಲಿಕಾರರ ಸಂಘಟನೆಗಳ ಮುಖಂಡರಲ್ಲದೆ ಅಲಹಾಬಾದ್ ವಿವಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷೆ ರಿಚಾ ಸಿಂಗ್ ಕೂಡ ಮಾತಾಡಿದರು. ರೋಹಿತ್ ವೆಮುಲಾಗೆ ನ್ಯಾಯದ ಹೋರಾಟ, ಮತ್ತು ಜೆಎನ್‌ಯು ಹೋರಾಟಕ್ಕೆ ಸೌಹಾರ್ದ ವ್ಯಕ್ತಗೊಂಡಿತು.





ಬಾಹ್ಯಾಕಾಶದಿಂದ ಭೂಮಿಯ ಮೇಲಿನ ಕೇವಲ ಎರಡು ಮಾತ್ರ ಮನುಷ್ಯ ನಿರ್ಮಿತ ಸಂಗತಿಗಳು ಗೋಚರಿಸುತ್ತವಂತೆ. ಒಂದು ಚೇನಾದ ಗೋಡೆ. ಇನ್ನೊಂದು ಟೈಮ್ಸ್ ನೌ ಚಾನೆಲಿನ ಅರ್ನಬ್ ಗೋಸ್ವಾಮಿಯ 'ನೇಶನ್ ವಾಂಟ್ಸ್ ಟು ನೋ..' ಎಂಬ ಅರಚಾಟ

– ಫೇಸ್ ಬುಕ್ಕಿನಲ್ಲಿ ಹರಿದಾಡುತ್ತಿರುವ ಅರ್ನಬ್ ಗೋಸ್ವಾಮಿ ಜೋಕುಗಳಲ್ಲಿ ಒಂದು

ಪಂಚಾಯತ್ ಚುನಾವಣೆಯಲ್ಲಿ ಗೆದ್ದವರ್ಯಾರು?

ಸಂಪಾದಕೀಯ

ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಗೆದ್ದವರು ಯಾರು ಎಂದು ಹಲವು ಕೋನಗಳಿಂದ ನೋಡಬಹುದು. ಮೊದಲನೆಯದಾಗಿ, ಎಷ್ಟು ಜಿಲ್ಲಾ/ತಾಲೂಕು ಪಂಚಾಯತುಗಳಲ್ಲಿ ಬಹುಮತ ಪಡೆಯಲು ಸಾಧ್ಯವಾಯಿತು. ಇನ್ನೊಂದು ಎಷ್ಟು ಒಟ್ಟು ಜಿಲ್ಲಾ/ತಾಲೂಕು ಪಂಚಾಯತು ಸೀಟುಗಳನ್ನು ಗೆದ್ದಿತು ಎಂಬುದು. ಮತ್ತೊಂದು ಯಾವ ಪಕ್ಷ ಎಷ್ಟು ಶೇಕಡಾವಾರು ಮತ ಪಡೆಯಿತು ಎಂಬುದನ್ನು ಆಧರಿಸಿ. ಈ ಮೂರು ಅಂಶಗಳಲ್ಲೂ 2011 ಜಿಲ್ಲಾ/ತಾಲೂಕು ಪಂಚಾಯತುಗಳಿಗೆ ಹೋಲಿಸಿದರೆ ಯಾವ ಪಕ್ಷಕ್ಕೆ ಎಷ್ಟು ಮುನ್ನಡೆ/ಹಿನ್ನಡೆ ಆಗಿದೆ ಎಂಬುದನ್ನು ನೋಡಬಹುದು. ಅದರಲ್ಲೂ ಆಗಿನ ಆಳುವ/ವಿರೋಧ ಪಕ್ಷದ ಸಾಧನೆ ಜತೆ ಈಗಿನ ಆಳುವ/ವಿರೋಧ ಪಕ್ಷದ ಸಾಧನೆಯನ್ನು ಹೋಲಿಸಬಹುದು. ಕಳೆದ ವಿಧಾನಸಭೆಯ ಫಲಿತಾಂಶಗಳಿಗೆ ಹೋಲಿಸಿದರೆ ಯಾವ ಪಕ್ಷಕ್ಕೆ ಮುನ್ನಡೆ/ಹಿನ್ನಡೆ ಆಗಿದೆ ಎಂತಲೂ ನೋಡಬಹುದು. ಆದರೆ ಜಿಲ್ಲಾ/ತಾಲೂಕು ಪಂಚಾಯತು ಚುನಾವಣೆಗಳಲ್ಲಿ ಗಣನೀಯ ಜನಸಂಖ್ಯೆ ಇರುವ ನಗರ ಪ್ರದೇಶಗಳ ಜನ ಭಾಗವಹಿಸುವುದಿಲ್ಲವಾದ್ದರಿಂದ ಅದು ಅಷ್ಟು ಅರ್ಥಪೂರ್ಣ ಆಗುವುದಿಲ್ಲ.

ಜಿಲ್ಲಾ ಪಂಚಾಯತುಗಳಲ್ಲಿ ಬಹುಮತದ ದೃಷ್ಟಿಯಿಂದ ನೋಡಿದರೆ 'ಅತಂತ್ರ ಪಕ್ಷ'ವೇ ಮೊದಲ ಸ್ಥಾನ ಗಳಿಸಿದೆ ಎಂಬುದು ಬಹುಶಃ ಅಭೂತಪೂರ್ವ! 2011ಕ್ಕೆ ಹೋಲಿಸಿದರೆ 'ಅತಂತ್ರ'ತೆ 10ರಿಂದ 11ಕ್ಕೇರಿದೆ. ಕಾಂಗ್ರೆಸ್ 4 ರಿಂದ 10ಕ್ಕೆ ಏರಿದೆ. ಬಿಜೆಪಿ 12ರಿಂದ 7ಕ್ಕೆ ಕುಸಿದಿದೆ. ಜೆಡಿ(ಎಸ್) 4 ರಿಂದ 2 ಕ್ಕೆ ಕುಸಿದಿದೆ. ಕಾಂಗ್ರೆಸ್ ಕಳೆದ ಬಾರಿ ಗೆದ್ದ 4 ರಲ್ಲಿ 2 (ಚಾಮರಾಜನಗರ, ಚಿಕ್ಕಬಳ್ಳಾಪುರ) ಜಿ.ಪಂ.ಗಳನ್ನು ಉಳಿಸಿಕೊಂಡಿದೆ. 2 (ಯಾದಗಿರಿ, ಬೆಂಗಳೂರು ನಗರ) ಜಿ.ಪಂ.ಗಳನ್ನು ಅತಂತ್ರಕ್ಕೆ ಕಳೆದುಕೊಂಡಿದೆ. 5(ಉ.ಕ., ಬೀದರ, ಹಾವೇರಿ, ಗದಗ, ಕೊಪ್ಪಳ) ಜಿ.ಪಂ.ಗಳನ್ನು ಬಿಜೆಪಿಯಿಂದ ಕಸಿದುಕೊಂಡಿದೆ. ರಾಮನಗರ ಜಿ.ಪಂ.ನ್ನು ಜೆಡಿ(ಎಸ್)ನಿಂದ ಕಸಿದುಕೊಂಡಿದೆ. ಎರಡು (ಚಿತ್ರದುರ್ಗ, ಬೆಂ.ಗ್ರಾಮಾಂತರ) ಅತಂತ್ರ ಜಿ.ಪಂ.ಗಳನ್ನು ತನ್ನದಾಗಿಸಿದೆ. ಬಿಜೆಪಿ ಕಳೆದ ಬಾರಿಯ 12ರಲ್ಲಿ 4(ದ.ಕ., ಉಡುಪಿ, ಚಿಕ್ಕಮಗಳೂರು, ಕೊಡಗು) ಜಿ.ಪಂ.ಗಳನ್ನು ಮಾತ್ರ ಉಳಿಸಿಕೊಂಡಿದೆ ಈಗಾಗಲೇ ನೋಡಿದಂತೆ 5 ಜಿ.ಪಂ.ಗಳನ್ನು ಕಾಂಗ್ರೆಸಿಗೆ ಕಳೆದುಕೊಂಡಿದೆ. 3 ಅತಂತ್ರ (ಗುಲ್ಬರ್ಗ, ದಾವಣಗೆರೆ, ಬಳ್ಳಾರಿ) ಜಿ.ಪಂ.ಗಳನ್ನು ಗೆದ್ದಿದೆ. 4(ಶಿವಮೊಗ್ಗ, ಧಾರವಾಡ, ಬೆಳಗಾವಿ, ಬಾಗಲಕೋಟೆ) ಜಿ.ಪಂ.ನ್ನು ಅತಂತ್ರಕ್ಕೆ ಕಳೆದುಕೊಂಡಿದೆ. ಜೆಡಿ(ಎಸ್) 2 (ಹಾಸನ, ಮಂಡ್ಯ) ಜಿ.ಪಂ.ಗಳನ್ನು ಉಳಿಸಿಕೊಂಡಿದೆ. 1 ಜಿ.ಪಂ.ನ್ನು (ರಾಮನಗರ) ಕಾಂಗ್ರೆಸಿಗೆ ಮತ್ತು 2 (ತುಮಕೂರು, ಕೋಲಾರ) ಜಿ.ಪಂ.ನ್ನು ಅತಂತ್ರಕ್ಕೆ ಕಳೆದುಕೊಂಡಿದೆ. ಅತಂತ್ರ ಜಿ.ಪಂ.ಗಳ ಸಂಖ್ಯೆ ಸ್ಥಗಿತವಾದಂತೆ ಕಂಡರೂ ಜಿಲ್ಲೆಗಳು ಬದಲಾಗಿವೆ. 2011ರ 5 ಅತಂತ್ರ ಜಿ.ಪಂ.ಗಳು ಕಾಂಗ್ರೆಸ್, ಬಿಜೆಪಿ(2+3) ಪಾಲಾಗಿವೆ. 8 ಜಿ.ಪಂ.ಗಳು ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್)ಗಳಿಂದ (2+4+2) ಹೊಸದಾಗಿ ಅತಂತ್ರವಾಗಿದೆ. 3 (ವಿಜಯಪುರ, ಮೈಸೂರು ರಾಯಚೂರು) ಜಿ.ಪಂ.ಗಳು ಅತಂತ್ರವಾಗಿ ಮುಂದುವರೆದಿವೆ.

ಕಾಂಗ್ರೆಸ್ ಈ ಬಾರಿ ಒಟ್ಟು 1083 ಜಿಲ್ಲಾ ಪಂಚಾಯತ್ ಸೀಟುಗಳಲ್ಲಿ 498 ಸೀಟುಗಳನ್ನು (ಶೇ. 46) ಗೆದ್ದಿದೆ. 2011ರ 1013 ರಲ್ಲಿ ಅದು ಗಳಿಸಿದ 353 (ಶೇ. 34.8) ಕ್ಕಿಂತ ಹೆಚ್ಚು ಸೀಟು ಗಳಿಸಿದೆ. ಮಾತ್ರವಲ್ಲ, ಆಗ ಆಳುವ ಪಕ್ಷವಾಗಿದ್ದ ಬಿಜೆಪಿಯ 1013 ರಲ್ಲಿ 441 (ಶೇ. 43.5) ಸೀಟಿನ ಪ್ರಮಾಣಕ್ಕಿಂತ ಹೆಚ್ಚು ಗಳಿಸಿದೆ. ಬಿಜೆಪಿ ಈ ಬಾರಿ 408 (ಒಟ್ಟು 1083ರಲ್ಲಿ) ಸೀಟು (ಶೇ. 37.7) ಗೆದ್ದು ತನ್ನದೇ 2011ರ (ಶೇ. 43.5) ಗಳಿಕೆಗಿಂತ ಕುಸಿದಿದೆ. ಆದರೆ ಈಗಿನ ವಿರೋಧ ಪಕ್ಷವಾಗಿ 2011ರ 'ವಿರೋಧ ಪಕ್ಷ'ವಾಗಿದ್ದ (ಅದು ಒಂದು ಗೆಲ್ಲಲು ತೊಡಕು ಎನ್ನುವುದಾದರೆ) ಕಾಂಗ್ರೆಸಿಗಿಂತ ಹೆಚ್ಚು ಸೀಟು ಗಳಿಕೆ ಮಾಡಿದೆ. ಸಾಮಾನ್ಯವಾಗಿ ಸಮರ್ಥ ವಿರೋಧ ಪಕ್ಷಕ್ಕೆ ಉತ್ತಮ ಸಾಧನೆ ಮಾಡದ ಆಳುವ ಪಕ್ಷದ ವಿರುದ್ಧ ಇದೊಂದು ಹೆಚ್ಚುಗಾರಿಕೆ ಆಗಬೇಕು. ಜೆಡಿ(ಎಸ್) 2011ರ 180 ಸೀಟುಗಳಿಂದ (ಶೇ. 17.8) 148 (ಶೇ. 13.7) ಕ್ಕೆ ಕುಸಿದಿದೆ.

ಆದ್ದರಿಂದ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಕನಿಷ್ಟ ಅರ್ಧದಷ್ಟು ಜಿಲ್ಲಾ ಪಂಚಾಯತುಗಳಲ್ಲಿ ಸ್ಪಷ್ಟ ಬಹುಮತ ಪಡೆಯದೆ ಮತ್ತು ಅರ್ಧದಷ್ಟು ಸೀಟುಗಳನ್ನು ಪಡೆಯದೆ ಕಾಂಗ್ರೆಸ್ ಗೆದ್ದಿದೆ ಎನ್ನುವಂತಿಲ್ಲ. ಮೊದಲ ಸ್ಥಾನದಲ್ಲಿದ್ದು ಮತ್ತು ಬಿಜೆಪಿಯೊಂದಿಗೆ ದೊಡ್ಡ ಅಂತರ ಕಾದುಕೊಂಡಿದ್ದು ಪರಾಭವಗೊಂಡಿದೆ ಎನ್ನುವಂತೆಯೂ ಇಲ್ಲ. ಬಿಜೆಪಿ ಒಂದು ವಿರೋಧ ಪಕ್ಷವಾಗಿ, ಇತ್ತೀಚೆಗೆ ಲೋಕಸಬಾ ಚುನಾವಣೆಯಲ್ಲಿ ಜಯಭೇರಿ ಹೊಡೆದಿದ್ದು ಸೀಟು ಗಳಿಕೆಯಲ್ಲಿ ಸೋತಿದೆ ಎಂದೇ ಹೇಳಬೇಕು. ಜೆಡಿ(ಎಸ್) ಮಾತ್ರ ಎಲ್ಲ ರೀತಿಯಲ್ಲೂ ಪರಾಭವ ಹೊಂದಿದೆ ಎನ್ನಬಹುದು. ಇತರ ಪಕ್ಷಗಳು ಮತ್ತು ಪಕ್ಷೇತರರ ಸೀಟು ಗಳಿಕೆ ಸಹ 39ರಿಂದ 29ಕ್ಕೆ ಕುಸಿದಿದೆ.

ತಾಲೂಕು ಪಂಚಾಯತಿಗೆ ಬಂದರೆ ಕಾಂಗ್ರೆಸಿನ ಸೋಲು ಇನ್ನಷ್ಟು ಢಾಳಾಗಿ ಕಾಣುತ್ತದೆ. 175 ತಾ.ಪಂ.ಗಳಲ್ಲಿ ಕಾಂಗ್ರೆಸ್ ಕೇವಲ 55ರಲ್ಲಿ (ಶೇ. 31.4) ಬಹುಮತ ಪಡೆದಿದೆ. ಬಿಜೆಪಿ ಸಹ 55ರಲ್ಲಿ ಬಹುಮತ ಪಡೆದಿದೆ. ಎರಡೂ ಅರ್ಧದ ಹತ್ತಿರಕ್ಕೂ ಬರದೆ ಸೋತಿವೆ. 45 ತಾ.ಪಂ.ಗಳಲ್ಲಿ ಅತಂತ್ರ ಸ್ಥಿತಿ ನಿರ್ಮಾಣವಾಗಿದ್ದು, ಜೆಡಿ(ಎಸ್) 20 (ಶೇ. 11.4) ತಾ.ಪಂ.ಗಳಲ್ಲಿ ಬಹುಮತ ಪಡೆದಿದೆ. ಕಾಂಗ್ರೆಸ್ ತನ್ನ 2011 ಸ್ಥಿತಿಗೆ (31) ಹೋಲಿಸಿದರೆ ಮುನ್ನಡೆ ಸಾಧಿಸಿದೆ. ಬಿಜೆಪಿ 68ರಿಂದ 55ಕ್ಕೆ, ಜೆಡಿ(ಎಸ್) 29ರಿಂದ 20ಕ್ಕೆ ಕುಸಿದಿದೆ. 2011ಕ್ಕಿಂತ (48) ತಾ.ಪಂ.ಗಳಲ್ಲಿ ಅತಂತ್ರ ಸ್ಥಿತಿ ಸ್ವಲ್ಪ ಕಡಿಮೆ ಆಗಿದೆ.

ಒಟ್ಟು 3884 ತಾ.ಪಂ. ಸೀಟುಗಳಲ್ಲಿ ಕಾಂಗ್ರೆಸ್ ಸೀಟು ಗಳಿಕೆ 1705 (ಶೇ. 43.9), 2011ರ 1224 (ಶೇ. 33.4) ಕ್ಕಿಂತ ಉತ್ತಮಗೊಂಡಿದೆ. ಬಿಜೆಪಿಯ ಈ ಬಾರಿಯ ಸೀಟು ಗಳಿಕೆ 1362 (ಶೇ. 35), 2011ರ 1501 (ಶೇ. 41)ಕ್ಕಿಂತ ಗಮನಾರ್ಹವಾಗಿ ಕಡಿಮೆ ಆಗಿದೆ. 'ಆಳುವ' ಕಾಂಗ್ರೆಸ್ ತಾ.ಪಂ. ಸೀಟು ಗಳಿಕೆ ಹಿಂದಿನ 'ಆಳುವ' ಬಿಜೆಪಿಗಿಂತಲೂ ಹೆಚ್ಚಿದೆ. ಆದರೆ 'ವಿರೋಧಿ' ಬಿಜೆಪಿ 'ವಿರೋಧಿ' ಕಾಂಗ್ರೆಸಿಗಿಂತ ಸೀಟು ಗಳಿಕೆಯಲ್ಲಿ ಮುಂದಿದೆ. ಜೆಡಿ(ಎಸ್) ಸೀಟು ಗಳಿಕೆ 2011ರ 742(ಶೆ. 20.3) ರಿಂದ 610(15.7)ಕ್ಕೆ ಇಳಿದಿದೆ. ಇತರ ಪಕ್ಷಗಳ ಮತ್ತು ಪಕ್ಷೇತರರ ಸೀಟು ಗಳಿಕೆ 2011ರ 192 (ಶೇ. 5.2) ರಿಂದ 207 (ಶೇ. 5.3)ಕ್ಕೆ ಒಟ್ಟು ಸೀಟು ಏರಿಕೆಯ ಜತೆ ಸ್ವಲ್ಪ ಏರಿದೆ.

ಚುನಾವಣಾ ಕಮಿಶನ್ ಇನ್ನೂ ಗೆದ್ದ ಮತ್ತು ಎರಡನೇ ಸ್ಥಾನದ ಅಭ್ಯರ್ಥಿಗಳ ಮತಗಳಿಕೆ ಮತ್ತು ಒಟ್ಟು ಮತ ವಿವರಗಳನ್ನು ಮಾತ್ರ ಕ್ಷೇತ್ರವಾರಾಗಿ ಬಿಡುಗಡೆ ಮಾಡಿದೆ. ಆದರೆ ಇದರ ಆಧಾರದ ಮೇಲೆನೇ 'ದಿ ಹಿಂದೂ' ಪತ್ರಿಕೆ ಪಕ್ಷಗಳ ಶೇಕಡಾವಾರು ಮತಗಳಿಕೆ ಅಂದಾಜು ಮಾಡಿದೆ. ಅದರ ಪ್ರಕಾರ ಜಿಲ್ಲಾ ಪಂಚಾಯತ್ ಚುನಾವಣೆಗಳಲ್ಲಿ ಕಾಂಗ್ರೆಸ್ ಶೇ. 46.88 ಮತ ಗಳಿಸಿದೆ ಎಂದಿದೆ. ಬಿಜೆಪಿ ಶೇ. 34.83 ಮತ ಗಳಿಸಿ ದೂರದ ಎರಡನೇ ಸ್ಥಾನದಲ್ಲಿದೆ. ಜೆಡಿ(ಎಸ್) ಶೇ. 15.71 ಮತ ಗಳಿಸಿ 3ನೇ ಸ್ಥಾನದಲ್ಲಿದೆ. ಇತರರು ಶೇ, 2.6 ಮತ ಗಳಿಸಿದ್ದಾರೆ. ಮತ ಗಳಿಕೆಯಲ್ಲಿ ಮಾತ್ರ ಕಾಂಗ್ರೆಸ್ ಬಿಜೆಪಿಗಿಂತ ಬಹಳ ಮುಂದಿದೆ.

ಹೀಗೆ ಯಾವುದೇ ದೃಷ್ಟಿಯಿಂದ ನೋಡಿದರೂ ಕಾಂಗ್ರೆಸ್ ಗೆದ್ದಿಲ್ಲ. ಪರಾಭವನೂ ಕಂಡಿಲ್ಲ. ಕಾಂಗ್ರೆಸಿನ ಒಳಜಗಳಗಳು ಹಲವು ಕಡೆ ಅದರ ಸೋಲಿಗೆ ಕಾರಣವಾಗಿದೆ. ಕಾಂಗ್ರೆಸ್ ಆಡಳಿತದ ಬಗ್ಗೆ ಜನಕ್ಕೆ ತೀವ್ರ ಅತೃಪ್ತಿ ಇರುವುದು ಕಂಡು ಬರುತ್ತದೆ. ಆದರೆ ಬಿಜೆಪಿಯ ಬಗೆಗೂ ಜನ ಹೆಚ್ಚಿನ ಒಲವೇನೂ ತೋರಿಲ್ಲ. ಬಿಜೆಪಿ ಉತ್ತರ ಕರ್ನಾಟಕದಲ್ಲಿ ಗಮನಾರ್ಹ ಹಿನ್ನಡೆ ಕಂಡಿದೆ. ಬಹುಶಃ ಮಹದಾಯಿ ವಿವಾದ ಹೆಚ್ಚಿನ ದುಷ್ಪರಿಣಾಮ ಬೀರಿರಬಹುದು. ಜೆಡಿ(ಎಸ್) ಸಹ ತನ್ನ ಪ್ರಭಾವಿ ಪ್ರದೇಶಗಳನ್ನು ಕಳೆದುಕೊಂಡಿದೆ. ಅಪ್ಪ–ಮಗ ಪಕ್ಷ ಮಾತ್ರವಲ್ಲದೆ ಒಂದು ಗಂಭೀರ ರಾಜಕೀಯ ಪಕ್ಷವಾಗಿ ಅದು ತನ್ನ ಸ್ಥಾನಕಳೆದುಕೊಳ್ಳುತ್ತಿರುವಂತೆ ಕಾಣುತ್ತದೆ.

ಹಾಗಾದರೆ ಈ ಜಿಲ್ಲಾ/ತಾಲೂಕು ಪಂಚಾಯತ್ ಚುನಾವಣೆಗಳಲ್ಲಿ ಗೆದ್ದವರ್ಯಾರು? ಬಹುಶಃ ಯಾರೂ ಇಲ್ಲ. ಚುನಾವಣೆಯಲ್ಲಿ ಹಣದ ಹರಿವು, ಮೂರು ಪ್ರಮುಖ ಪಕ್ಷಗಳಲ್ಲೂ ಕುಟುಂಬ ರಾಜಕೀಯ ನೋಡಿದರೆ, ಜನತೆಯೂ ಸೋತಿದ್ದಾರೆ ಅನ್ನಿಸುತ್ತದೆ. ಮೂರನೇಯ ಶಕ್ತಿಯಾಗಿ ಜೆಡಿ(ಎಸ್) ಕುಂದುತ್ತಿರುವುದು, ಎಡ ಪಕ್ಷಗಳಿಗೆ ಜನ ಇನ್ನೂ ಒಲವು ತೋರಿಸದೆ ಇರುವುದು ರಾಜ್ಯದ ರಾಜಕೀಯದ ಮೇಲೆ ಗಂಭಿರ ಪರಿಣಾಮ ಬೀರಲಿದೆ. ಎಡ ಪಕ್ಷಗಳು ಅರ್ಥಪೂರ್ಣ ರಾಜಕೀಯ ಬದಲಿ ಒದಗಿಸಲು ಜನತೆಯ ರಾಜಕೀಯ ಒಲವು ಗಳಿಸಲು ಇನ್ನಷ್ಟು ತೀವ್ರವಾಗಿ ಪ್ರಯತ್ನಗಳನ್ನು ಮಾಡಬೇಕಾಗಿದೆ.

ಕುವೆಂಪು ವಿ.ವಿ. ಪ್ರಾಧ್ಯಾಪಕರ ವಜಾ, ಬಂಧನಕ್ಕೆ ಬಿಜೆಪಿ ಯುವ ಮೋರ್ಚಾದ ದುರಾಗ್ರಹದ ಖಂಡನೆ

– ಸಿಪಿಐ(ಎಂ) ರಾಜ್ಯ ಸಮಿತಿ ಹೇಳಿಕೆ


ಜೆ.ಎನ್.ಯು. ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ಹಯ್ಯ ಕುಮಾರ್ ಬಂಧನದ ವಿರುದ್ಧ ದೇಶದಲ್ಲಿ ಬಂದಿರುವ ತೀವ್ರ ಪ್ರತಿರೋಧದಿಂದ ಆರೆಸ್ಸೆಸ್–ಬಿಜೆಪಿ ಗಾಬರಿಗೊಂಡಿದೆ. ವಿ.ವಿ.ಗಳಲ್ಲಿ 'ದೇಶ–ವಿರೋಧಿ' ಚಟುವಟಿಕೆಗಳು ನಡೆಯುತ್ತಿರುವ ಹುಸಿ ಆಪಾದನೆಯೊಂದಿಗೆ ದೇಶವ್ಯಾಪಿ ಅಭಿಯಾನ ಆರಂಭಿಸಿದೆ. ಈ ಅಭಿಯಾನದ ಭಾಗವಾಗಿ ಫೆ. 18ರಂದು ಶಿವಮೊಗ್ಗದಲ್ಲಿ ಪ್ರತಿಭಟನೆ ಸಂಘಟಿಸಿದ ಬಿಜೆಪಿ ಯುವ ಮೋರ್ಚಾ ಜಿಲ್ಲಾ ಘಟಕ ಒಂದು ಹೆಜ್ಜೆ ಮುಂದೆ ಹೋಗಿದೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ.

ಕುವೆಂಪು ವಿ.ವಿ.ದ ಏಳು ಪ್ರಾಧ್ಯಾಪಕರನ್ನು ಹೆಸರಿಸಿ ಅವರನ್ನು ಕೆಲಸದಿಂದ ವಜಾ ಮಾಡಬೇಕು ಮತ್ತು ದೇಶದ್ರೋಹದ ಆಪಾದನೆಯಲ್ಲಿ ಬಂಧಿಸಬೇಕೆಂದು ಅದು ಆಗ್ರಹಿಸಿದೆ. ಈ ಬಗ್ಗೆ ಜಿಲ್ಲಾ ಆಡಳಿತದ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದೆ. ಫೆ. 16ರಂದು ರೊಹಿತ್ ವೆಮುಲಾ ಆತ್ಮಹತ್ಯೆಗೆ ಕಾರಣವಾದ ಪರಿಸ್ಥಿತಿ ಮತ್ತು ಜೆ.ಎನ್.ಯು. ಮೇಲೆ ದಾಳಿ ಖಂಡಿಸಿ ವಿ.ವಿ. ವಿದ್ಯಾರ್ಥಿಗಳು ನಡೆಸಿದ ಪ್ರತಿಭಟನೆಯಲ್ಲಿ ಪಾಲುಗೊಳ್ಳಲು ವಿದ್ಯಾರ್ಥಿಗಳನ್ನು 'ಪ್ರಚೋದಿಸಿದ್ದು' ಮತ್ತು ಪಾಲುಗೊಂಡದ್ದು – ಬಿಜೆಪಿ ಯುವ ಮೋರ್ಚಾದ ಪ್ರಕಾರ ಅವರ 'ದೇಶ–ದ್ರೋಹ'ವಾಗಿದೆ. ಕುವೆಂಪು ವಿ.ವಿ.ಯ ಪ್ರಾಧ್ಯಾಪಕರುಗಳಾದ – ರಾಜೇಂದ್ರ ಚೆನ್ನಿ, ಜಗನ್ನಾಥ ಡಾಂಗೆ, ಕೇಶವಯ್ಯ, ಸಣ್ಣಪ್ಪ, ಚೆನ್ನಪ್ಪ, ಕೇಶವ ಶರ್ಮ, ಡಿ.ಎಸ್.ಪೂರ್ಣಾನಂದ – ಅವರನ್ನು ಮನವಿಯಲ್ಲಿ ಹೆಸರಿಸಲಾಗಿದೆ ಎಂದು ಹಲವು ಪತ್ರಿಕೆಗಳಲ್ಲಿ ವರದಿಯಾಗಿದೆ.

ಸಾರ್ವಜನಿಕ ಹಿತಾಸಕ್ತಿಯ, ದೇಶದ ಜನತೆಗೆ ಸಂಬಂಧಿಸಿದ ಮತ್ತು ಯಾವುದೇ ವಿಷಯದ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತ ಪಡಿಸುವುದು, ಪ್ರಸಾರ ಮಾಡುವುದು, ಆ ಬಗೆಗಿನ ಚರ್ಚೆ–ಚಳುವಳಿಗಳಲ್ಲಿ ಭಾಗವಹಿಸುವುದು ಎಲ್ಲಾ ನಾಗರಿಕರರಿಗೆ ಭಾರತದ ಸಂವಿಧಾನ ಕೊಟ್ಟಿರುವ ಮೂಲಭೂತ ಹಕ್ಕು. ಅದರಲ್ಲೂ ವಿ.ವಿ.ಗಳ ಸ್ವಾಯತ್ತತೆಯಂತಹ ವಿಷಯದ ಬಗ್ಗೆ ಚರ್ಚೆಯಲ್ಲಿ ಭಾಗವಹಿಸುವುದು ವಿ.ವಿ. ಪ್ರಾಧ್ಯಾಪಕರ ಮತ್ತು ವಿದ್ಯಾರ್ಥಿಗಳ ಹಕ್ಕು ಮಾತ್ರವಲ್ಲ, ಕರ್ತವ್ಯ ಕೂಡಾ. ಇದು ಪ್ರಜಾಪ್ರಭುತ್ವದ ಪ್ರಾಥಮಿಕ ಸಂಗತಿ.

ಕುವೆಂಪು ವಿ.ವಿ.ದ ಏಳು ಪ್ರಾಧ್ಯಾಪಕರು ತಮ್ಮ ಈ ಮೂಲಭೂತ ಹಕ್ಕನ್ನು ಚಲಾಯಿಸಿದ್ದಾರೆ. ಆದ್ದ–ರಿಂದ ಶಿವಮೊಗ್ಗ ಬಿಜೆಪಿ ಯುವ ಮೋರ್ಚಾದ ಈ ದುರಾಗ್ರಹ ಪ್ರಜಾಪ್ರಭುತ್ವ–ವಿರೋಧಿ, ಸಂವಿಧಾನ–ವಿರೋಧಿ. ಇದನ್ನು ಸಿಪಿಐ(ಎಂ) ಬಲವಾಗಿ ಖಂಡಿಸುತ್ತದೆ. ಬಿಜೆಪಿ ಯುವ ಮೋರ್ಚಾದ ಪ್ರಜಾಪ್ರಭುತ್ವ–ವಿರೋಧಿ ದುರಾಗ್ರಹದ ವಿರುದ್ಧ ಪ್ರತಿಭಟನೆ ಮಾಡಬೇಕು. ಕುವೆಂಪು ವಿ.ವಿ.ಯ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳ ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲಭೂತ ಹಕ್ಕನ್ನು ಎತ್ತಿ ಹಿಡಿಯಬೇಕು ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಎಲ್ಲಾ ಪ್ರಜಾಪ್ರಭುತ್ವವಾದಿಗಳಿಗೆ ಕರೆ ನೀಡುತ್ತದೆ.

PEÃ½ZÀÄÝ



ಪ್ರಭುತ್ವಕ್ಕೆ ಬೇಡವಾದ ವಿಚಾರವನ್ನು
ಯಾರೂ ಮಾತನಾಡುವಂತಿಲ್ಲ ಎಂಬ
ವಾತಾವರಣ ನಿರ್ಮಾಣವಾಗಿದೆ.
ಪ್ರಭುತ್ವ ಹಾಗೂ ಅವರ ಸಿದ್ಧಾಂತ
ವಿರೋಧಿಸುವವರ ಬಗೆಗೆ ಅಸಹನೆ
ಹೆಚ್ಚುತ್ತಿದೆ. ಇದು ಅಹಿಷ್ಣುತೆಗೇ
ಕಾರಣವಾಗುತ್ತಿದೆ.
ಇದರಿಂದ ದೇಶದಲ್ಲಿ ತಾಲಿಬಾನ್,
ಹಿಟ್ಲರ್ ಸಂಸ್ಕೃತಿ ಹುಟ್ಟಿಕೊಳ್ಳುತ್ತಿದೆ.

– ದೇವನೂರ ಮಹಾದೇವ



● ಎಸ್. ವರಲಕ್ಷ್ಮಿ

ಇತ್ತೀಚೆಗೆ ಸತತ ಹೋರಾಟದಿಂದಾಗಿ ಸುದ್ದಿಯಲ್ಲಿರುವ '108 ಆರೋಗ್ಯ ಕವಚ' ಕಾರ್ಮಿಕರ ಬದುಕು, ಸಮಸ್ಯೆಗಳು ಮತ್ತು ಹೋರಾಟಗಳ ಬಗ್ಗೆ ಸಿಐಟಿಯು ಕರ್ನಾಟಕ ರಾಜ್ಯ ಸಮಿತಿಯ ಉಪಾಧ್ಯಕ್ಷರಾದ ಎಸ್. ವರಲಕ್ಷ್ಮಿ ಅವರು ಹೆಚ್ಚಿನ ಬೆಳಕು ಚೆಲ್ಲಿದ್ದಾರೆ ಈ ಲೇಖನದಲ್ಲಿ.



ರಾಜ್ಯದ ಸಾಧನೆ ಗರಿ ಮೂಡಿಸಿದ 108 ಆರೋಗ್ಯ ಕವಚ ನೌಕರರ ಬಾಳಲ್ಲಿ ಕಾರ್ಮೋಡ

ಒಂದು ವಾರದ ಹಿಂದೆ ಖಾಸಗಿ ಟಿ.ವಿ ಚಾನಲ್‌ವೊಂದರಲ್ಲಿ ಒಂದು ಸುದ್ದಿ ಬಿತ್ತರವಾಗುತ್ತಿತ್ತು. ರಸ್ತೆಯಲ್ಲಿ ಬೆಳಗಿನ ಜಾವ ಆಕ್ಸಿಡೆಂಟ್ ಆಗಿ ಹರೀಶ್ ಎನ್ನುವವರ ದೇಹ 2 ತುಂಡಾಗಿತ್ತು. ಸಾರ್ವಜನಿಕರು ಯಾರು ಅಲ್ಲಿ ಹೋಗಿ ಅಪಘಾತಕ್ಕೊಳಗಾದವರನ್ನು ಎತ್ತಿರಲಿಲ್ಲ. 108 ಅಂಬ್ಯೂಲೆನ್ಸ್ ಸ್ಥಳಕ್ಕೆ ಕೆಲವೇ ನಿಮಿಷಗಳಲ್ಲಿ ತಲುಪಿ ದೇಹದ ಕೋರಿಕೆಯಂತೆ ಆತನ ಕಣ್ಣನ್ನು ದಾನ ಮಾಡಲು ಆಸ್ಪತ್ರೆ ಸಾಗಿಸಿ ಯಶಸ್ವಿಯಾಗಿದ್ದರು. ಈ ಯಶಸ್ವಿಗೆ ಕಾರಣವಾಗಿದ್ದು ಯಾರು ಗೋತ್ತೇ? 108 ಆಂಬ್ಯೂಲೆನ್ಸ್‌ನ ಪೈಲಟ್ ಮತ್ತು ಇ.ಎಮ್.ಟಿ ಬ್ರದರ್.

2011–12ರಲ್ಲಿ ಯಡಿಯೂರಪ್ಪರವರು ಮುಖ್ಯ ಮಂತ್ರಿಯಾಗಿ ಭ್ರಷ್ಟಾಚಾರದಲ್ಲಿ ಲೋಕಾಯುಕ್ತಕ್ಕೆ ಸಿಕ್ಕಿ ಬಂಧನವಾದರು. ಬಂಧನವಾದಾಗ ಆರೋಗ್ಯ ತಪಾಸಣೆಗೆ ಹೋಗಿದ್ದು ಇದೇ 108.

2012ರಲ್ಲಿ ಮಾಜಿ ಸಚಿವರಾದ ಸಿ.ಸಿ.ಪಾಟೀಲ್‌ರಿಗೆ ಗುಂಡೇಟು ಬಿದ್ದಾಗ ಅವರ ಜೀವ ರಕ್ಷಣೆ ಮಾಡಿದ್ದು 108. ರಾಜ್ಯಪಾಲರು, ಮುಖ್ಯಮಂತ್ರಿಗಳು ಇತರ ಪ್ರತಿಷ್ಠಿತ ಜನರಿಗೆ ಎಸ್ಕಾರ್ಟ್ ಆಗಿ ಹೋಗುವಂತಹವರು 108.

ಕರ್ನಾಟಕ ರಾಜ್ಯದ ಯಾವುದೇ ಪ್ರದೇಶದಲ್ಲಿ ಯಾರಾದರೂ ವಿಷ ಸೇವಿಸಿದರೆ, ಸುಟ್ಟುಕೊಂಡರೆ, ಹಾವು ಕಚ್ಚಿದರೆ, ಅಕಾಲಿಕ ಕಾಯಿಲೆಗಳಿಗೆ ತುತ್ತಾದ–ರೆ, ಹೃದಯಾಘಾತವಾದರೆ, ಗರ್ಭಿಣಿಯರ ಹೆರಿಗೆ, ಅಪಘಾತಗಳಾದರೆ ಅಂತಹ ಜೀವಗಳನ್ನು ರಕ್ಷಿಸಲು ತಮ್ಮ ಜೀವಗಳನ್ನು ಮುಡಿಪಾಗಿಟ್ಟು ಕೆಲವೇ ನಿಮಿಷಗಳಲ್ಲಿ ಕಾಪಾಡುವವರೇ 108 ಪೈಲಟ್ ಮತ್ತು ಇ.ಎಮ್.ಟಿ ಬ್ರದರ್.

108 ಪೈಲಟ್ ಮತ್ತು ಇ.ಎಮ್.ಟಿ ಅದರೆ ಯಾರು?

ಉದಾರೀಕರಣ ನೀತಿಗಳ ಭಾಗವಾಗಿ ಸರ್ಕಾರದಡಿಯಲ್ಲಿ ಇದ್ದ ಆರೋಗ್ಯ ವ್ಯವಸ್ಥೆ, ಖಾಸಗಿ ಉದ್ದಿಮೆಗಳನ್ನು ಪ್ರೋತ್ಸಾಹಿಸಲು ಸರ್ಕಾರ–ಖಾಸಗಿ ಸಹಭಾಗಿತ್ವದಲ್ಲಿ ನಡೆಯುತ್ತಿದೆ. ಸರ್ಕಾರಿ ಆರೋಗ್ಯ ಕ್ಷೇತ್ರ ಸಂಪೂರ್ಣ ದಿವಾಳಿಯ ಅಂಚಿನಲ್ಲಿದೆ. ಕೋಟಿಗಟ್ಟಲೆ ದೇಶದ ಜನತೆ ಸರ್ಕಾರಿ ಆರೋಗ್ಯವನ್ನು ನೆಚ್ಚಿಕೊಂಡಿದ್ದಾರೆ. ಆರೋಗ್ಯ ಬಜೆಟ್‌ನಲ್ಲಿ ಸರ್ಕಾರ ದಿನೇ ದಿನೇ ಅನುದಾನ ಕಡಿತ ಮಾಡುತ್ತಿದೆ. ಸರ್ಕಾರ ನೀತಿಯನ್ನು ಮರೆಮಾಚಿಕೊಳ್ಳುವ ದಿಕ್ಕಿನಲ್ಲಿ NRHM (ರಾಷ್ಟ್ರೀಯ ಆರೋಗ್ಯ ಅಭಿಯಾನ) ಯೋಜನೆ ಜಾರಿಗೆ ಬಂದಿದೆ. ಈ ಯೋಜನೆಯಲ್ಲಿ 108 ಆರೋಗ್ಯ ಕವಚದ ಯೋಜನೆಯಲ್ಲಿ ಪೈಲಟ್ ಮತ್ತು ಇ.ಎಮ್.ಟಿ ಎಂಬ ಹುದ್ದೆಗಳಿಗೆ ಜನರನ್ನು ಸರ್ಕಾರ ಹೊರಗುತ್ತಿಗೆಯ ಮುಖಾಂತರ ಕೆಲಸಕ್ಕೆ ತೆಗೆದುಕೊಂಡಿದೆ.

22 ವರ್ಷದಿಂದ 25 ವರ್ಷದೊಳಗೆ ನರ್ಸಿಂಗ್ ಕೋರ್ಸ್ ಮುಗಿಸಿದ ಆಗಷ್ಟೇ ಶ್ರಮಿಕರಾಗಿ ಪರಿವರ್ತನೆಗೊಳ್ಳುತ್ತಿರುವ ಉತ್ಸಾಹಿ ಯುವಕ ಯುವತಿಯರನ್ನು 2008ರಲ್ಲಿ ಕೇವಲ 5500 ರೂಗಳಿಗೆ ನೇಮಿಸಿಕೊಂಡಿದ್ದಾರೆ. ಇವರನ್ನು ಇಎಖಿ **(Emergency Medical Technicians)** ಎಂದು ಕರೆಯುತ್ತಾರೆ 25 ರಿಂದ 30 ವರ್ಷದೊಳಗಿನ ಯುವಕರನ್ನು 4500 ರೂಗಳಿಗೆ ಡ್ರೈವರ್‌ಗಳಾಗಿ ನೇಮಿಸಿಕೊಂಡು ಅವರನ್ನು Pilot ಅನ್ನುತ್ತಾರೆ.

200 ಮಹಿಳೆಯರನ್ನೊಳಗೊಂಡಂತೆ ಇಂದು ರಾಜ್ಯದಾದ್ಯಂತ 700 ಅಂಬ್ಯೂಲೆನ್ಸ್‌ಗಳಲ್ಲಿ 3000 ಜನರು ಕೆಲಸ ಮಾಡುತ್ತಿದ್ದಾರೆ. ಜಿಲ್ಲೆಗಳ ಗಡಿಯನ್ನು ಲೆಕ್ಕಿಸದೇ 8 ವರ್ಷಗಳಿಂದ ಕೆಲಸಕ್ಕೋಸ್ಕರ ಬೇರೆ ಜಿಲ್ಲೆಗಳಿಗೆ ಹೋಗಿ ದುಡಿಯುತ್ತಾರೆ. ಆದರೆ ಇವರ ಈಗಿನ ಸಂಬಳ ಮಾತ್ರ ಇನ್ನು 10 ಸಾವಿರ ದಾಟಿಲ್ಲ. ಜಿ.ಎನ್.ಎಮ್ ನರ್ಸಿಂಗ್ ಕೋರ್ಸ್‌ನ್ನು ಮಾಡಿರುವ ವಿದ್ಯಾವಂತ ಯುವಕ ಯುವತಿಯರು ಬೇರೆಡೆ ದುಡಿಯಲು ಹೋದರೆ ಅಥವಾ ಸರ್ಕಾರ ಜಿ.ಎನ್.ಎಮ್‌ಗಳ ಸಂಬಳ ಕನಿಷ್ಠ 25 ರಿಂದ 30 ಸಾವಿರವಿದೆ. ಆದರೆ ಇವರು ಇಂದಲ್ಲ ನಾಳೆ ನಮಗೆ ಸರ್ಕಾರ ನ್ಯಾಯ ಕೊಡುತ್ತದೆ ಎಂಬ ಭರವಸೆಯೊಂದಿಗೆ ದುಡಿಯುತ್ತಿದ್ದಾರೆ.

ಇಲ್ಲಿರುವ ಮಹಿಳೆಯರಿಗೆ ಹೆರಿಗೆ ಭತ್ಯೆ ಇಲ್ಲ. ಎಲ್ಲಾ ನೌಕರರಿಗೆ ವಿಶ್ರಾಂತಿ ಕೊಠಡಿ ಇಲ್ಲ, ಎಮರ್ಜೆನ್ಸಿ ಸರ್ವಿಸ್ ಆಗಿರೋದ್ದರಿಂದ 12 ಗಂ–ಟೆ ರಾತ್ರಿ ಹಗಲು ಅಂಬ್ಯೂಲೆನ್ಸ್ ಇವರಿಗೆ ಮನೆ. ರಾತ್ರಿವೇಳೆ ಅಂಬುಲೆನ್ಸ್ ನಲ್ಲಿಯೇ ಮಲಗಬೇಕು. ಇ.ಎಸ್.ಐ, ಪಿಎಫ್ ಇದೆ. ಆದರೆ ಈ ಸವಲತ್ತುಗಳು ಸಕಾಲಿಕವಾಗಿ ದೊರೆಯುತ್ತಿಲ್ಲ. ಇವರಿಗೂ ಕೂಡಾ ಅಪಘಾತ ಸೌಲಭ್ಯವಿದೆ. 10 ರಿಂದ 15 ಜನರು ಮೃತರಾಗಿದ್ದಾರೆ, ಅಂಗವಿಕಲರಾಗಿದ್ದರೂ ಕೂಡಾ ಇವರಿಗಿನ್ನು ಅಪಘಾತ ಸೌಲಭ್ಯ ಇನ್ನು ಸಿಕ್ಕಿಲ್ಲ.

10–15 ಜನ ಮೃತರಾಗಿದ್ದಾರೆ ಎಂದಿದ್ದಕ್ಕೆ ಗಾಬರಿಯಾಗಬೇಡಿ, ಸ್ನೇಹಿತರೇ! ಇದು ಸತ್ಯ ಸಂಗತಿ. ಸ್ವಲ್ಪ ಇವರ ಕೆಲಸದ ಸ್ವರೂಪದ ಬಗ್ಗೆ ಗಮನ ಹರಿಸೋಣ.

ಡಾಕ್ಟರ್ ನಿಂದ ವಾರ್ಡ್‌ಬಾಯ್ ತನಕ ಎಲ್ಲಾ ಕೆಲಸ

24 ಗಂಟೆ ಎಮರ್ಜೆನ್ಸಿ ಸೇವೆ ಆಗಿರುವುದರಿಂದ ಒಂದು ಶಿಫ್ಟ್‌ನಲ್ಲಿ 12 ಗಂಟೆ ಕೆಲಸ. ಒಂದು ಅಂಬ್ಯೂಲೆನ್ಸಿಗೆ 30 ಕಿ.ಮೀ ವ್ಯಾಪ್ತಿ ಇರುತ್ತದೆ. ಕರೆ ಬಂದ ಕೂಡಲೇ ಧಾವಿಸಬೇಕು. ಗರ್ಭಿಣಿ ಮಹಿಳೆ ಹೆರಿಗೆಯ ಹಂತದಲ್ಲಿದ್ದರೆ ಹೆರಿಗೆ ಮಾಡಿಸಬೇಕು! ವಿಷಕುಡಿದಿದ್ರೆ ವಾಂತಿ ಮಾಡಿಸಬೇಕು! ನೇಣು ಹಾಕಿಕೊಂಡಿದ್ದರೆ ಪ್ರಾಥಮಿಕ ಚಿಕಿತ್ಸೆ ಕೊಡಬೇಕು! ಬೆಂಕಿಯ ಅಪಘಾತ ಅಥವಾ ಅವರೇ ಸುಟ್ಟು–ಕೊಂಡಿದ್ದರೆ ಇವರೇ ಎಲ್ಲವನ್ನು ಸ್ವಚ್ಚಗೊಳಿಸಿ ಚಿಕಿತ್ಸೆ ನೀಡಬೇಕು! ಹೃದಯಾಘಾತವಾಗಿದ್ದರೆ ಕೂಡಲೇ ಇ.ಸಿ.ಜಿ ಮಾಡಿ ಪ್ರಾಥಃಮಿಕ ಚಿಕಿತ್ಸೆ ಕೊಡಬೇಕು! ಅಪಘಾತಗಳಾದರೆ ರಕ್ತದಲ್ಲೇ ಇರುವ ಗಾಯಾಳುಗಳ ದೇಹಗಳನ್ನು ಎತ್ತಿಕೊಂಡು ಚಿಕಿತ್ಸೆ ಕೊಡಬೇಕು. ಹೀಗೆ ಪಟ್ಟಿ ಉದ್ದ ಬೆಳೆಯುತ್ತದೆ. ಇವರ ಸೇವೆಗೆ ಸೂರ್ಯ ಚಂದ್ರರ, ಹೆಣ್ಣು–ಗಂಡುಗಳು, ಜಾತಿ, ಧರ್ಮ, ಭಾಷೆಗಳನ್ನು ಮೀರಿದಂತಹ ಸೇವೆಯನ್ನು ಈ ಯುವಕ–ಯುವತಿಯರು ರಾಜ್ಯಕ್ಕೆ ನೀಡುತ್ತಿದ್ದಾ–ರೆ. ಅಂದರೆ ಡಾಕ್ಟರ್ ನಿಂದ ವಾರ್ಡ್‌ಬಾಯ್ ತನಕ ಎಲ್ಲಾ ತರಹದ ಕೆಲಸಗಳನ್ನು ಮಾಡುತ್ತಾರೆ.

ಒಂದು ತಿಂಗಳಿಗೆ ಕನಿಷ್ಠ ಒಂದು ಶಿಫ್ಟ್‌ನಲ್ಲಿ 150 ರಿಂದ 300 ಕೇಸುಗಳು ಬರುತ್ತವೆ. ಅವುಗಳಲ್ಲಿ ಆತ್ಮಹತ್ಯೆ ಮತ್ತು ಅಪಘಾತ ಕೇಸುಗಳೇ ಜಾಸ್ತಿ. ಇವರು ಇಷ್ಟು ಕೆಲಸ ಮಾಡಿದರೂ ಇವರ ಮೇಲೆ ಕಳ್ಳತನದ ಆರೋಪಗಳನ್ನು ಹೊರಿಸಲಾಗುತ್ತದೆ. ಉದಾ: ಬೀದರ್‌ನ ನೌಬಾದ್ ಬಳಿಯಿರುವ ವಸಂತ ಸ್ಕೂಲ್ ನರ್ಸಿಂಗ್ ಬಳಿ ಅಪಘಾತವಾಗಿ ಅಂಬ್ಯೂಲೆನ್ಸ್ ಹೋಗುವ ಮೊದಲೇ ಆ ಕುಟುಂಬ ಮರಣ ಹೊಂದಿದೆ. (ಅಪಘಾತದಲ್ಲಿ ಮರಣ ಹೊಂದಿದರೆ ಅಲ್ಲಿಯ ಸಂಬಂಧಿಕರ, ಪೋಲಿಸ್‌ನವರ ವಿನಂತಿಯಿದ್ದರೆ ಮಾತ್ರ ಅವರನ್ನು ಆಸ್ಪತ್ರೆಗೆ ಸಾಗಿಸುತ್ತಾರೆ). ನಂತರ ಇವರಿಗೆ ಪೋಲಿಸ್‌ನವರು ವಿನಂತಿಸಿದ ಮೇರೆಗೆ ಅಲ್ಲೇ ಪೋಟೋ ತೆ–ಗೆದು ಅವರ ಮೇಲಿದ್ದ ಒಡವೆ ಮತ್ತು ಇತರೆ ವಸ್ತುಗಳ ಪೋಟೋ ತೆಗೆದು ಅವರನ್ನು ಅಲ್ಲಿಯ ಸರ್ಕಾರಿ ಆಸ್ಪತ್ತೆಗೆ ಸಾಗಿಸಿ, ಅಲ್ಲಿಯ ವೈದ್ಯಕೀಯ ಮೇಲ್ವಿಚಾರಕರಿಗೆ ಅದನ್ನು ಒಪ್ಪಿಸಿದ್ದಾರೆ.

ನಂತರ ಮಾರನೇ ದಿನ ಬೆಳಿಗ್ಗೆ ಪೋಲೀಸರು 2 Pilot ಮತ್ತು ಒಬ್ಬ ಇಎಖಿ ಯನ್ನು ಅರೆಸ್ಟ್ ಮಾಡಿ 3 ದಿನ ಬಂಧನದಲ್ಲಿರಿಸಿ ಕಿರುಕುಳ ಕೊಟ್ಟಿದ್ದಾರೆ. ಸತ್ತ ಕುಟುಂಬದವರು 10 ತೊಲಾ ಚಿನ್ನ ಕಳುವಾಗಿದೆ ಎಂದು ದೂರು ನೀಡಿದ್ದಾ–ರೆ. ನಂತರ ಸಂಘಟನೆಯವರು ಮಧ್ಯಪ್ರವೇಶಿಸಿ ಇದು ಸುಳ್ಳುಕೇಸು ಎಂದು ಸಾಬೀತು ಪಡಿಸಿ ಬಿಡಿಸಿಕೊಂಡು ಬಂದಿದ್ದಾರೆ. ರೋಗಿ ಇರುವ ಮನೆಯತನಕ ಕೆಲವೊಮ್ಮೆ ಸರಿಯಾದ ರಸ್ತೆಯಿಲ್ಲದೆ ಅಂಬ್ಯೂಲೆನ್ಸ್ ಹೋಗದೆ ವಿಳಂಬವಾದಾಗ ಕೆಲವು ನಾಗರೀಕರು ಇವರನ್ನು ನಿಂದಿಸಿ, ಹೊಡೆಯುವ ಮಟ್ಟಕ್ಕೂ ಹೋಗುತ್ತಾರೆ.

ಯೌವನಾವಸ್ಥೆಯಲ್ಲಿರುವ ಇವರು ಕಷ್ಟಕರವಾಗಿಯೇ ತಮ್ಮ ಕೌಟುಂಬಿಕ ಜೀವನ ನಡೆಸುವ ಒತ್ತಡದಲ್ಲಿರುತ್ತಾರೆ. ಪೋನ್ ಕರೆ ಬಂದರೂ ಕೂಡಲೇ ಸಮಯಕ್ಕೆ ಸರಿಯಾಗಿ ಮುಟ್ಟಬೇಕೆಂಬ ಧಾವಂತದಲ್ಲಿಯೇ ಧಾವಿಸುತ್ತಾರೆ. ಆಗ ಕು–ಟಂಣ ಆಗಿ ಕೆಲಸ ಮಾಡುವ ಗುಂಡ್ಲುಪೇಟೆಯ ಲಕ್ಷ್ಮೀಶ ಎಂಬುವವರಿಗೆ ಹೃದಯಾಘಾತವಾಗಿ ನಿಧನರಾಗಿದ್ದಾರೆ. ನರಗುಂದ ತಾಲ್ಲೂಕಿನ ಕೆಲಸ ಮಾಡುವ ಸಿಬ್ಬಂದಿ ಕೊರತೆಯಿಂದ 3 ತಿಂಗಳು ರಾತ್ರಿ ಹಗಲು ಕೆಲಸ ಮಾಡಿದ್ದಾರೆ. ಇವರದೇ ಕುಟುಂಬಗಳಲ್ಲಿ ಘಟನೆಗಳಾದಾಗ ಇವರು ಇರುವ ಕೇಸನ್ನು ಮುಗಿಸಿ ಬಸ್ಸು ಹಿಡಿದೇ ಹೋಗಬೇಕು. ಕೆಲಸದ ಮಾನಸಿಕ ಒತ್ತಡದಂತಹ ಕಿರುಕುಳಗಳನ್ನು ಸಹಿಸಲು ಸಾಧ್ಯವಾಗದೆ 2010ರಲ್ಲಿ ಸಿಂಧಗಿ ತಾಲ್ಲೂಕಿನ ಇ.ಎಮ್.ಟಿ ಶರಣಬಸಪ್ಪ ವಿಷ ಸೇವಿಸಿದ್ದ.

ಜೀವ ಉಳಿಸುವವರ ಜೀವಗಳೇ ಇಷ್ಟು ಅಪಾಯದಲ್ಲಿರುವುದು ಹೊರಗಿನ ಜಗತ್ತಿಗೆ ತಿಳಿಯಲೇ ಇಲ್ಲ. ಏಕೆ–ಂದರೆ ಇವರ ಮಾಲೀಕರು ಜಿ.ವಿ.ಕೆ ಎಂಬ ಹೈದ್ರಾಬಾದ್ ಮೂಲದ ದೈತ್ಯ ಸಂಸ್ಥೆ. ಈ ಸಂಸ್ಥೆ 17 ರಾಜ್ಯಗಳಲ್ಲಿ ಈ ಯೋಜನೆಯನ್ನು ಗುತ್ತಿಗೆಗೆ ಪಡೆದಿದೆ. 1971 ಗುತ್ತಿಗೆ ಪದ್ಧತಿ ನಿಷೇದ ಮತ್ತು ನಿಯಂತ್ರಣ ಕಾಯ್ದೆಯ ಪ್ರಕಾರ ಕಾರ್ಮಿಕ ಇಲಾಖೆಯಲ್ಲಿ ನೊಂದವಣೆಯಾದ ಗುತ್ತಿಗೆ ದಾರರಿಗೆ ಮಾತ್ರ ಗುತ್ತಿಗೆ ಕೊಡಬೇಕೆಂಬ ಕಾನೂನು ಇದ್ದರೂ ಈ ಮಾಲೀಕನಿಗೆ ಇದು ಅನ್ವಯವಾಗುವುದಿಲ್ಲ. ಕೇವಲ ಕರ್ನಾಟಕ ಅಷ್ಟೇ ಅಲ್ಲ, ಆಂ ಧ್ರ, ತೆಲಂಗಾಣಗಳಲ್ಲಿಯೂ ನೊಂದಾವಣೆ ಮಾಡಿಲ್ಲ.

ರಾಜ್ಯ ಸರ್ಕಾರದ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ ಜಿ.ವಿ.ಕೆ ಸಂಸ್ಥೆ ಜತೆ ಒಂದು ಒಡಂಬಡಿಕೆಯನ್ನು ಮಾಡಿದೆ. ಅದರಲ್ಲಿ ಹಲವಾರು ಷರತ್ತುಗಳಿವೆ.

ಆ ಷರತ್ತುಗಳಲ್ಲಿ ನೌಕರರನ್ನು ನಡೆಸಿಕೊಳ್ಳುವ ರೀತಿ, ಅಂಬ್ಯೂಲೆನ್ಸ್‌ಗಳ ನಿರ್ವಹಣೆ, ಮೂಲಭೂತ ಸೌಕರ್ಯಗಳನ್ನೊದಗಿಸಿ ಕೊಡುವುದು ಮತ್ತಿತರೇ ಅಂಶಗಳು ಸೇರಿವೆ. ಒಂದು ಅಂದಾಜಿನ ಪ್ರಕಾರ ಸರ್ಕಾರ 110 ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ಈ ಸಂಸ್ಥೆಗೆ ನೀಡುತ್ತದೆ. ಜಿವಿಕೆ ಸಂಸ್ಥೆ ಜತೆ 10 ವರ್ಷಗಳ ಒಡಂಬಡಿಕೆ ಆಗಿದೆ. ಅಂದರೆ ಇದು 1000 ಕೋಟಿ ರೂಪಾಯಿಯ ವ್ಯವಹಾರ! ಬೇರೆ ಎಲ್ಲಾ ರಾಜ್ಯಗಳಲ್ಲಿ 5 ವರ್ಷಗಳ ಒಡಂಬಡಿಕೆ ಮಾತ್ರ ಆಗಿದ್ದು, ನಮ್ಮ ರಾಜ್ಯದಲ್ಲಿ ಮಾತ್ರ 10 ವರ್ಷಗಳದ್ದು ಆಗಿದೆ ಎಂಬುದನ್ನೂ ಗಮನಿಸಬೇಕು.

ಎ.ಎಲ್.ಸಿ ಅಂಬ್ಯೂಲೆನ್ಸ್ ಒಂದಕ್ಕೆ 18.40 ಲಕ್ಷ ರೂ. (ಹೃದಯಾಘಾತದ ರೋಗಿಗಳಿಗೆ ಎಲ್ಲಾ ಸೌಕರ್ಯವಿರುವ) ಬಿ.ಎಲ್.ಎಸ್ ಅಂಬ್ಯೂಲೆನ್ಸ್ 12.40 ಲಕ್ಷ ರೂ. (ಸಾಧಾರಣಾ ಸವಲತ್ತು) ಬೆಲೆ ಇದೆ. ಸುಮಾರು 700 ಅಂಬ್ಯೂಲೆನ್ಸ್‌ಗಳನ್ನು ಈಗಿರುವ ಮಾಹಿತಿ ಪ್ರಕಾರ ಇಲಾಖೆಯೇ ಕೊಂಡು ಜಿ.ವಿ.ಕೆ ಸಂಸ್ಥೆಗೆ ನೀಡಿದೆ. ಅಂದರೆ ಮೂಲ ಬಂಡವಾಳ (Capital Expenditure) ಬಿಟ್ಟು, ನಿರ್ವಹಣೆ ವೆಚ್ಚ (Operational Expenditure) ಎಂದು 110 ಕೋಟಿ ರೂ ಒಂದು ವರ್ಷಕ್ಕೆ ನೀಡಲಾಗುತ್ತಿದೆ.

ವಿವಾದವೇನು ?

ಒಡಂಬಡಿಕೆಯ ಪ್ರಕಾರ

1. ಎಮ್.ಓ.ಯು ಪ್ರಕಾರ ಅಂಬುಲೆನ್ಸಿಗೆ ಸರಾಸರಿ 2.75 ಸಿಬ್ಬಂದಿಗಳಿರಬೇಕು. ಆದ–ರೆ ಇಲ್ಲಿಯವರೆಗೂ 2 ರಷ್ಟು ಸಿಬ್ಬಂದಿ ಮಾತ್ರ ಇರುವುದು. ಆದರೂ ಎಮ್.ಓ.ಯು ಪ್ರಕಾರವೇ ಸರ್ಕಾರದ ಹಣ ಬಿಡುಗಡೆ ಮಾಡಿಕೊಳ್ಳುತ್ತಾರೆ.
2. ಎಮ್.ಓ.ಯು ಪ್ರಕಾರ 25 ಸಾವಿರ ಕಿ.ಮೀ. ಟೈಯರ್ ಬದಲಾವಣೆ ಮಾಡಬೇಕು. ಆದರೆ 50 ರಿಂದ 60 ಸಾವಿರ ಕಿ.ಮೀ. ನಂತರ ಬದಲಾವಣೆ ಮಾಡುತ್ತಾರೆ.
3. 7500 ಕಿ.ಮೀ. ಆಯಿಲ್ ಬದಲಾವಣೆ ಮಾಡಬೇಕು, ಆದರೆ 20 ರಿಂದ 30 ಸಾವಿರ ಕಿ.ಮೀ. ನಂತರ ಬದಲಾವಣೆ ಮಾಡುತ್ತಾರೆ.
4. ವಾಹನ ನಿರ್ವಹಣೆಗೆ ಬೇಕಾದ ಅಧಿಕಾರಿಗಳು ಮತ್ತು ಮ್ಯಾನ್‌ಪವರ್ ಬಳಸುವಂತೆ ಅಧಿಕಾರಿಗಳು ಸಮರ್ಪಕವಾಗಿಲ್ಲ.
5. ವಾಹನಗಳ ನಿರ್ವಹಣ ವೆಚ್ಚ ಗ್ಯಾರೇಜಿನಲ್ಲಿ ಸುಳ್ಳು ಬಿಲ್ಲು ಸರ್ಕಾರಕ್ಕೆ ಕೊಟ್ಟು ದುಡ್ಡು ಪಾವತಿಸಿಕೊಳ್ಳುತ್ತಾರೆ.
6. ಸಂಸ್ಥೆಯ ಅಧಿಕಾರಿಗಳು, ಸಿಬ್ಬಂದಿಗಳ

ಪುಟ 10 ಕ್ಕೆ

2008 ರಲ್ಲಿ ಇದ್ದ ಕರ್ನಾಟಕ ರಾಜ್ಯದ ಜನಸಂಖ್ಯೆ ಮತ್ತು ವಿಸ್ತೀರ್ಣಕ್ಕೆ ವಿಶ್ವ ಆರೋಗ್ಯ ಸಂಸ್ಥೆಯ ಮಾನದಂಡದ ಪ್ರಕಾರ 60 ಸಾವಿರ ಜನತೆಗೆ ಒಂದು ಅಂಬ್ಯೂಲೆನ್ಸ್ ಇರಬೇಕು. ಆದರೆ ರಾಜ್ಯದಲ್ಲಿ 1 ಲಕ್ಷದಿಂದ 1ಲಕ್ಷದ 10 ಸಾವಿರ ಜನರಿಗೆ" ಒಂದು ಆಂಬ್ಯೂಲೆನ್ಸ್ ಸವಲತ್ತು ಮಾತ್ರ ಇದೆ.

ಆದಿವಾಸಿಗಳ ಮೇಲೆ ಹೆಚ್ಚಿದ ಧಾಳಿಗಳು: ವಿಶಾಲ ಆಂದೋಲನಕ್ಕೆ ನಿರ್ಧಾರ

ಎಸ್.ವೈ ಗುರುಶಾಂತ್

ಮೋದಿಯವರ ನೇತೃತ್ವದ ಕೇಂದ್ರ ಸರಕಾರ ಅಭಿವೃದ್ಧಿ ಹೆಸರಿನಲ್ಲಿ ಜಾರಿಗೆ ತರುತ್ತಿರುವ ಕ್ರಮಗಳು ದೇಶದ ಎಲ್ಲಾ ಆದಿವಾಸಿ ಸಮುದಾಯಗಳ ಅಸ್ತಿತ್ವಕ್ಕೆ ತೀವ್ರ ತೆರನಾದ ಬೆದರಿಕೆ ಒಡ್ಡುತ್ತಿವೆ. ನಿಸರ್ಗದ ಮಡಿಲಿನಲ್ಲಿ ನೆಲೆ ನಿಂತು ಶತಮಾನಗಳಿಂದ ಅಲ್ಲೇ ಬದುಕು ಕಟ್ಟಿಕೊಂಡಿರುವ ಈ ಸಮುದಾಯಗಳನ್ನು ಮೂಲದಿಂದಲೇ ಉಚ್ಚಾಟಿಸುವ ದಮನಕಾರಿ ಕ್ರಮಗಳನ್ನು ಸರಕಾರಗಳು ಅತ್ಯಂತ ನಿರ್ದಯವಾಗಿ ಕೈಗೊಳ್ಳುತ್ತಿವೆ. ಈ ಆಕ್ರಮಣಗಳು ಹೆಚ್ಚುತ್ತಲೇ ಇವೆ. ಇಂತಹ ಬೆಳವಣಿಗೆಗಳನ್ನು ವಿವರವಾಗಿ ವಿಶ್ಲೇಷಿಸಿದ 'ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್ ' ವಿಶಾಲ ಪ್ರತಿರೋಧ ಒಡ್ಡಲು ನಿರ್ಧರಿಸಿದೆ. ಇದಕ್ಕಾಗಿ ದೇಶವ್ಯಾಪಿಯಾಗಿ ವಿವಿಧ ಸಮಾನ ಮನೋಭಾವದ ಆದಿವಾಸಿ–ಬುಡಕಟ್ಟು ಸಂಘಗಳೊಂದಿಗೆ ಜಂಟಿ ಚಳುವಳಿಯನ್ನು ನಡೆಸಲು ಮುತುವರ್ಜಿ ವಹಿಸಲಿದೆ.

ಇತ್ತೀಚೆಗೆ 2016 ಫೆಬ್ರವರಿ 10 ಮತ್ತು 11 ರಂದು ದೆಹಲಿಯಲ್ಲಿ ' ಆರಂ' ನ ಕೇಂಧ್ರ ಕಾರ್ಯಕಾರಿ ಸಮಿತಿಯ ಸಭೆಯು ಜರುಗಿ ಪ್ರಸಕ್ತ ಸನ್ನಿವೇಶವನ್ನು ಅವಲೋಕಿಸಿತು.

ಹೆಚ್ಚಿದ ಧಾಳಿಗಳು

ತಮಿಳುನಾಡು ಸರಕಾರ ರಾಜ್ಯದಲ್ಲಿ 'ಅರಣ್ಯ ಹಕ್ಕುಗಳ ಕಾಯ್ದೆ' ಜಾರಿಯಾಗದಂತೆ ತಡೆದಿದ್ದ ಆದೇಶವನ್ನು ಸುಪ್ರಿಂ ಕೋರ್ಟ್ ತೆರವುಗೊಳಿಸಿದೆ. ಇದರಿಂದ ಕಳೆದ 10 ವರುಷಗಳಿಂದ ಕಾಯ್ದೆಯ ಅನುಷ್ಠಾನದಿಂದ ವಂಚಿತರಾಗಿದ್ದ ಸಮುದಾಯಗಳಿಗೆ ಫಲ ಸಿಗಬಹುದೆಂಬ ಆಸೆಯನ್ನು ಹುಟ್ಟು ಹಾಕಿದೆ. ಆದರೆ ಅದೇ ಸಂದರ್ಭದಲ್ಲಿ ಮತ್ತೊಂಧು ಪ್ರಕರಣದಲ್ಲಿ ಸುಪ್ರಿಂಕೋರ್ಟ್ ನೀಡಿರುವ ಆದೇಶ ಆತಂಕಗಳನ್ನು ಸೃಷ್ಟಿಸುವಂತಿದೆ. ಈಗಾಗಲೇ ವಿವಿಧ ರಾಜ್ಯಗಳಲ್ಲಿ ತಮಗೆ ಭೂಮಿ ಬೇಕು, ಪಟ್ಟಾ ನೀಡಬೇಕು ಎಂದು ಕೋರಿ ಕಾಯ್ದೆಯ ಫಲ ನಿರೀಕ್ಷಿಸಿ ಪರಂಪರಾನುಗತವಾಗಿರುವ ಆದಿವಾಸಿಗಳು, ಅರಣ್ಯವಾಸಿಗಳು ಹಾಕಿದ್ದ ಲಕ್ಷಾಂತರ ಕ್ಲೇಮ್‌ಗಳನ್ನು ವಿನಾ ಕಾರಣ ಸರಕಾರಗಳು ತಿರಸ್ಕರಿಸಿವೆ, ಹೀಗೆ ತಿರಸ್ಕರಿಸಲ್ಪಟ್ಟ ಕ್ಲೇಮ್ ಗಳ ಬಗ್ಗೆ ಏನು ಕ್ರಮ ವಹಿಸಿದ್ದೀರಿ ಎಂದು ಕೇಳುವ ಮೂಲಕ ಈ ವಿಷಯವನ್ನು ಬೇಗನೇ ಇತ್ಯರ್ಥಗೊಳಿಸಿ ಎಂದಿದೆ. ಈ ಬಳಿಕ ಅವರೆಲ್ಲಾ ಎತ್ತಂಗಡಿ ಭೀತಿಯಲ್ಲಿದ್ದಾರೆ. ಇದು ಗಂಭೀರ ಸನ್ನಿವೇಶ.

ಕೇಂದ್ರ ಸರಕಾರ ಅರಣ್ಯ ಭೂಮಿಯನ್ನು 'ವನ ಸುರಕ್ಷಾ ಸಮಿತಿ' ಯ ಸುಪರ್ದಿಗೆ ನೀಡಲು ನಿಯಮಾವಳಿಗಳನ್ನು ರೂಪಿಸುತ್ತಿದೆ. ಸಮುದಾಯದ ಸಂಪನ್ಮೂಲಗಳನ್ನು ಅರಣ್ಯ ಇಲಾಖೆಯ ಅಡಿಗೆ ತರುವ ಮತ್ತು ಶೇಕಡ 10 ರಿಂದ 15 ರವರೆಗೆ ಮಾತ್ರ ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸಲು ಅವಕಾಶ ಕಲ್ಪಿಸಲಾಗುವುದು. 'ಅಭಿವೃದ್ಧಿ' ಗೆಂದು ಅರಣ್ಯ ಭೂಮಿಯನ್ನು ಕಾ–ರ್ಪೋರೇಟ್ ಕಂಪನಿಗಳಿಗೆ ನೀಡಲು ಈಗಿರುವ ಅರಣ್ಯ ಹಕ್ಕುಗಳ ಕಾಯ್ದೆಯು ಅಡ್ಡಿಯೆಂದು ಆ ಸಮಿತಿಯ ಸದಸ್ಯರು ಸರ್ವಾನುಮತದ ಅಭಿಪ್ರಾಯ ಹೊಂದಿದ್ದಾರೆ. ಮೋದಿ ಸರಕಾರ ಅರಣ್ಯಗಳ 'ಪುನಶ್ಚೇತನ'ದ ಹೆಸರಿನಲ್ಲಿ ಖಾಸಗಿ ವಲಯಕ್ಕೆ ಅದನ್ನು ನೀಡಲು ಹೊರಟಿದೆ. ಖಾಸಗಿಯರಿಗೆ ಅರಣ್ಯವಲ್ಲದ, 'ಬಂಜರು ಕಾಡಾದ' ಭೂಮಿಯನ್ನು ನೀಡಲಾಗುವುದೆಂದು ಹೇಳುತ್ತಿದೆ. ಪೇಪರ್ ಮತ್ತು ಪಲ್ಪ್ ತಯಾರಿಸುವ ಕೈಗಾರಿಕೋದ್ಯಮಿಗಳು ಇದರಲ್ಲಿ ತುಂಬಾ ಉತ್ಸುಕರಾಗಿದ್ದು ಅದಕ್ಕಾಗಿ ಒತ್ತಾಯಿಸುತ್ತಿದ್ದಾರೆ. ಮೋದಿ ಸರಕಾರದ ಈ ಕ್ರಮವು ಅರಣ್ಯ ಅಭಿವೃದ್ದಿಯಲ್ಲಿ ಸಮುದಾಯಗಳ ಹೊಣೆಗಾರಿಕೆಯನ್ನು ತಪ್ಪಿಸುವುದಲ್ಲದೇ ಗ್ರಾಮ ಪಂಚಾಯತ್‌ಗಳ ಅಧಿಕಾರವನ್ನು ಕಿತ್ತುಕೊಳ್ಳಲಿದೆ.

ಇಂದಿನ ಕಾಯ್ದೆ ಪ್ರಕಾರ ಅರಣ್ಯದಲ್ಲಿ ಗಣಿಗಾರಿಕೆ ಮಾಡುವ ಗುತ್ತಿಗೆದಾರರು ಜಿಲ್ಲಾಡಳಿತಕ್ಕೆ ನೀಡುವ ರಾಜಧನದಲ್ಲಿ ಶೇ.30 ರಷ್ಟನ್ನು ಆ ಪ್ರದೇಶದ ಬಾಧಿತರಾದ ಆದಿವಾಸಿಗಳು ಮತ್ತಿತರೆ ಸಮುದಾಯಗಳ ಅಭಿವೃದ್ಧಿಗೆ ಬಳಸಬೇಕೆಂದಿದೆ. ಆದರೆ ಇದನ್ನು ಬಹಳಷ್ಟು ಕಡೆ ಪಾಲಿಸುತ್ತಿಲ್ಲ. ಬದಲಾಗಿ ಈ ಹಣವನ್ನು ತಮ್ಮ ಬೊಕ್ಕಸ ತುಂಬಿಕೊಳ್ಳಲು ಇರುವ ಸಂಪನ್ಮೂಲವೆಂದೇ ರಾಜ್ಯ ಸರಕಾರಗಳು ಬಗೆದಿವೆ.

ಮೇಲಿನ ಈ ಪ್ರಶ್ನೆಗಳನ್ನು ಕೈಗೆತ್ತಿಕೊಂಡು ತೀವ್ರವಾದ ಆಂದೋಲನವನ್ನು ಕಟ್ಟಿ ಬೆಳೆಸಲು ಆರಂ ನಿರ್ಧರಿಸಿದೆ. ಈ ಬಗ್ಗೆ ಅಖಿಲ ಭಾರತ ಗಣಿ ಕಾಯ್ದೆ ಸಮಾವೇಶದಲ್ಲಿ ಭಾಗವಹಿಸಿದ ಇತರೆ ಸಂಘಟನೆಗಳೊಂದಿಗೆ ಚರ್ಚೆಗಳು ನಡೆದಿವೆ.

ಇನ್ನು ಆಂದ್ರ ಪ್ರದೇಶ ಮತ್ತು ತೆಲಂಗಾಣ ರಾಜ್ಯಗಳನ್ನು ಭಾದಿಸುವ ಪೋಲಾವರಂ ಯೋಜನೆಯ ವಿರುದ್ಧ ನಡೆದಿರುವ ಹೋರಾಟವನ್ನು ತೀವ್ರಗೊಳಿಸಲು ನಿರ್ಧರಿಸಲಾಯಿತು. ಈ ಯೋಜನೆಯಿಂದಾಗಿ 7 ಮಂಡಲ್‌ಗಳ 526 ಹಳ್ಳಿಗಳು ಮತ್ತು ಸುಮಾರು 2 ಲಕ್ಷ ಜನ ಹಾನಿಗೀಡಾಗಲಿದ್ದಾರೆ. ಚಂದ್ರಬಾಬು ನಾಯ್ಡು ಸರಕಾರ ವೈಜಾಕ್‌ನ ಅರಣ್ಯ ಪ್ರದೇಶದಲ್ಲಿ ಬಾಕ್ಸೈಟ್ ಗಣಿಗಾರಿಕೆಗೆ ಕ್ರಮ ವಹಿಸಿದ್ದು ಅದರ ವಿರುದ್ಧ ಪ್ರತಿರೋಧ ಬೆಳೆಯುತ್ತಿದೆ. ನಾಯ್ಡು ಸರಕಾರ ಹೊರ ತಂದ ಶ್ವೇತ ಪತ್ರದಲ್ಲಿ ಆ ಪ್ರದೇಶದಲ್ಲಿ ಜನ ವಸತಿಯೇ ಇಲ್ಲವೆಂದು ತೋರಿಸಿದೆ. ಆದರೆ ಅಲ್ಲಿಯ ಮತದಾರರ ಪಟ್ಟಿಯಲ್ಲಿ ಸಾವಿರಾರು ಜನ ಇದ್ದಾ–ರೆ. ಈ ಯೋಜನೆಗೆ ಗ್ರಾಮ ಪಂಚಾಯ್ತಿಗಳ ಒಪ್ಪಿಗೆ ಇದೆಯೆಂದು ಸರಕಾರದಿಂದ ಫೋರ್ಜರಿ ಪತ್ರಗಳನ್ನು ಸೃಷ್ಟಿಸಲಾಗಿದ್ದು ಅದರ ಖುದ್ದು ಸಾಕ್ಷಿಯಾಗಿದ್ದ ಸರಪಂಚ್‌ನನ್ನು ಗುಂಡಿಕ್ಕಿ ಕೊಲೆ ಮಾಡಲಾಗಿದೆ. ಇದನ್ನು ಮಾಡಿದವರು ಮಾವೋವಾದಿಗಳು!

ಹಾಗೆಯೇ ಝಾರ್ಖಂಡ್ ನ ರಾಂಚಿ ಮಾಸ್ಟರ್ ಪ್ಲಾನ್ ಅಸಂಖ್ಯಾತ ಬುಡಕಟ್ಟು ಜನರ ಹಳ್ಳಿಗಳನ್ನು ವ್ಯಾಪಿಸಲಿದ್ದು ಅದರ ವಿರುದ್ಧವೂ 'ಆರಮ್' ನೇತೃತ್ವದಲ್ಲಿ ಹೋರಾಟ ಆರಂಭವಾಗಿದೆ. ಅದನ್ನು ತೀವ್ರಗೊಳಿಸಲಾಗುವುದು.

ಇನ್ನು ಮೋದಿ ಸರಕಾರ ರೇಗಾ ಯೋಜನೆಯನ್ನು ದುರ್ಬಲಗೊಳಿಸಿದೆ. ಅನೇಕ ಕಡೆಗಳಲ್ಲಿ ಇದ–ರಿಂದಾಗಿ ಕೂಲಿ ಕೆಲಸವಿಲ್ಲದೇ ಹಸಿವಿನಿಂದ ಪರಿತಪಿಸುತ್ತಿದ್ದಾರೆ. ರೇಷನ್ ಕಡಿತವೂ ಇನ್ನಷ್ಟೂ ಸ್ಥಿತಿಯನ್ನು ಗಂಭೀರಗೊಳಿಸಿದೆ. ಆದ್ದರಿಂದ ಕೂಡಲೇ ರೇಗಾ ಯೋಜನೆ ಜಾರಿಗೊಳಿಸಬೇಕು ಮತ್ತು 35 ಕೇಜಿ. ರೇಷನ್ ಮತ್ತು ಅಗತ್ಯ ವಸ್ತುಗಳನ್ನು ಪೂರೈಸಬೇಕೆಂದು ಆರಮ್ ಆಗ್ರಹಿಸಿದೆ.

ದಬ್ಬಾಳಿಕೆ

ಇದಲ್ಲದೇ ಅನೇಕ ರಾಜ್ಯಗಳಲ್ಲಿ ಮಾವೋವಾದಿಗಳ, ಉಗ್ರಗಾಮಿಗಳ ವಿರುದ್ಧ ಕಾರ್ಯಾಚರಣೇ ಹೆಸರಿನಲ್ಲಿ ಅನೇಕ ಮುಗ್ಧ ಆದಿವಾಸಿಗಳನ್ನು ಬಂಧಿಸುವುದು ಮತ್ತು ಹಿಂಸಿಸಿ ಜೈಲಿಗೆ ತಳ್ಳಲಾಗುತ್ತಿದ್ದು ಅಂತಹ ನಿರಪರಾಧಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು, ದಬ್ಬಾಳಿಕೆಯನ್ನು ನಿಲ್ಲಿಸಬೇಕೆಂದು ಒತ್ತಾಯಿಸಲಾಯಿತು.

ಕೋಮುವಾದಿ ವಿಭಜನೆ

ಇದೇ ಸಂದರ್ಭದಲ್ಲಿ ಬುಡಕಟ್ಟು ಸಮುದಾಯಗಳ ನಡುವೆ ಆರೆಸ್ಸೆಸ್ ತುಂಬಾ ತೀವ್ರಗತಿಯಲ್ಲಿ ಕಾರ್ಯಾಚರಣೆ ಇಳಿದಿರುವುದನ್ನು ಸಭೆಯು ಗಮನಿಸಿತಲ್ಲದೇ ಹಲವಾರು ಕಡೆ ಮುಸ್ಲಿಂರು ಮತ್ತು ಕ್ರಿಶ್ಚಿಯನ್ ಅಲ್ಪಸಂಖ್ಯಾತರ ವಿರುದ್ಧ ಆದಿವಾಸಿಗಳನ್ನು ಎತ್ತಿ ಕಟ್ಟಿ ಧಾಳಿ ನಡೆಸಿದೆ. ಇದು ಅಪಾಯಕಾರಿಯಾಗಿದೆ. ಸರಕಾರದ ಸುಮಾರು 17,000 ಯೋಜನೆಗಳನ್ನು ತನ್ನ ಸುಪರ್ದಿಗೆ ಪಡೆದು ಅಪಾರ ಹಣ ಬಲದಿಂದ ಕಾರ್ಯ ನಿರ್ವಹಿಸುತ್ತಿದೆ.

ವಿಸ್ತರಿಸುತ್ತಿರುವ ಸಂಘಟನೆ

ಬೆಳೆಯುತ್ತಿರುವ ಸಂಘಟನೆಯಾದ 'ಆರಮ್' ಅನೇಕ ರಾಜ್ಯಗಳಲ್ಲಿ ಚಟುವಟಿಕೆಗಳ ಮೂಲಕ ಸಂಘಟನೆ ವಿಸ್ತಾರವಾಗುತ್ತಿರುವುದನ್ನು ಸಭೆಯು ವಿವರವಾಗಿ ಪರಿಶೀಲಿಸಿತು. ಬಹುತೇಕ ರಾಜ್ಯ ಸಮಿತಿಗಳು ಸಾಮೂಹಿಕ ಸದಸ್ಯತ್ವ ನೊಂದಾವಣೆಗೆ ಮುಂದಾಗಿದ್ದು 2016 ರ ಸಾಲಿನಲ್ಲಿ ಇನ್ನಷ್ಟೂ ಶಿಸ್ತು ಬದ್ಧವಾಗಿ, ಎಲ್ಲಾ ಸಮುದಾಯಗಳನ್ನು ತಲುಪುವಂತೆ ಕಾರ್ಯಪ್ರವೃತ್ತರಾಗಲು ಸೂಚಿಸಿತು. ಅಲ್ಲದೇ ಹಳ್ಳಿ–ಹಾಡಿಗಳಲ್ಲಿ ಪ್ರಾಥಮಿಕ ಘಟಕಗಳ ರಚನೆ, ತಾಲೂಕು ಮತ್ತು ಜಿಲ್ಲಾ ಸಮಿತಿಗಳನ್ನು ರಚಿಸಲು ನಿರ್ದೇಶನ ನೀಡಿತು. 2017 ರ ಫೆಬ್ರವರಿಯಲ್ಲಿ ಅಖಿಲ ಭಾರತ ಸಮ್ಮೇಳನವನ್ನು ಸಂಘಟಿಸಲಾಗುವುದು. ಪೂರ್ವಭಾವಿಯಾಗಿ ರಾಜ್ಯ ಸಮ್ಮೇಳಗಳನ್ನು ನಡೆಸಲಾಗುವುದು. ಅಧ್ಯಯನ ಶಿಬಿರ, ವಿವಿಧ ಕಾರ್ಯಕ್ರಮಗಳನ್ನು ನಡೆಸಲು ಸೂಚಿಸಲಾಗಿದೆ. ಸಭೆಯ ಅಧ್ಯಕ್ಷತೆಯನ್ನು ಕಾಂ. ಬಾಜುಬಾನ್ ರಿಯಾಂಗ್ ವಹಿಸಿದ್ದರು, ಕಾಂ ಬೃಂದಾ ಕಾರತ್ ಮತ್ತು ಕಾಂ. ಜಿತೇಂಧ್ರ ಚೌಧುರಿ ವರದಿಗಳನ್ನು ಮಂಡಿಸಿದರು.

ಮಾರ್ಚ್ 11ರ ವಿಧಾನಸೌಧ ಚಲೋ ಯಶಸ್ಸಿಗಾಗಿ ಪ್ರಚಾರಾಂದೋಲನ



ಮಾರ್ಚ್ 11ರಂದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) ನೇತೃತ್ವದಲ್ಲಿ ವಿಧಾನಸೌಧ ಚಲೋ ಹೋರಾಟ ನಡೆಯಲಿದೆ. ಈ ಹೋರಾಟದಲ್ಲಿ ಗುತ್ತಿಗೆ ಪದ್ದತಿ ರದ್ದತಿ, ಗುತ್ತಿಗೆ ಕಾರ್ಮಿಕರನ್ನು ಖಾಯಮಾತಿ, ಎಲ್ಲಾ ಕಾರ್ಮಿಕರಿಗೆ ಕನಿಷ್ಟ ವೇತನ ರೂ.18,000/– ನಿಗದಿ ಪ್ರಮುಖ ಹಕ್ಕೊತ್ತಾಯಗಳು. ಹೋರಾಟದ ಪೂರ್ವಭಾವಿ ಪ್ರಚಾರಾಂದೋಲನದ ಭಾಗವಾಗಿ, ಕಾರ್ಮಿಕ ಕಾನೂನುಗಳ ತಿದ್ದುಪಡಿ ವಿರೋಧಿಸಿ, ಸರ್ಕಾರದ ಮಾಲೀಕ ಪರ ಧೋರಣೆಯನ್ನು ಖಂಡಿಸಿ ಮತ್ತು ಮೇಲೆ ಹೇಳಿದ ಪ್ರಮುಖ ಹಕ್ಕೊತ್ತಾಯಗಳಿಗೆ ಸಹಿ ಸಂಗ್ರಹ ಕಾರ್ಯಕ್ರಮ, ಪ್ರತಿಭಟನಾ ಪ್ರದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ತುಮಕೂರು, ಹಾಸನ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆಸಿ ಸರ್ಕಾರ–ಕ್ಕೆ ಮನವಿ ಸಲ್ಲಿಸಲಾಗಿದೆ. ಬೆಂಗಳೂರಿನ ಉತ್ತರ ವಲಯ ಸಮಿತಿ ನೇತೃತ್ವದಲ್ಲಿ ಸಹಿ ಸಂಗ್ರಹ ಕಾರ್ಯಕ್ರಮ ನಡೆಸುವ ಮೂಲಕ ಪ್ರಚಾರಾಂದೋಲನಕ್ಕೆ ಚಾಲನೆ ನೀಡಲಾಯಿತು.



ಈ ವಾರ ಚರಿತ್ರೆಯಲ್ಲಿ


21 ಫೆಬ್ರುವರಿ 1952

ವಿಶ್ವ ತಾಯ್ನುಡಿ ದಿನ (ಬಾಂಗ್ಲಾ ಭಾಷಾ ಚಳುವಳಿ ಹುತಾತ್ಮ ದಿನ)

1952 ಜನವರಿ 27 ರಂದು ಪಾಕಿಸ್ತಾನದ ಗವರ್ನರ್ ಜನರಲ್ ಉರ್ದುವನ್ನು ರಾಷ್ಟ್ರಭಾಷೆಯಾಗಿ ಘೋಷಿಸಿದರು. ಇದರ ಪ್ರಕಾರ ಶಿಕ್ಷಣದಲ್ಲಿ ಆಡಳಿತದಲ್ಲಿ ಉರ್ದು ಬಿಟ್ಟರೆ ಬೇರೆ ಭಾಷೆಗೆ ಅವಕಾಶವಿರಲಿಲ್ಲ. ಇದಕ್ಕೆ ಆಗಿನ ಬಂಗಾಳಿ ಭಾಷಿಕ ಪೂರ್ವ ಪಾಕಿಸ್ತಾನ ಪ್ರಾಂತ್ಯದಲ್ಲಿ ತೀವ್ರ ವಿರೋಧ ವ್ಯಕ್ತವಾಯಿತು. ಡಾಕಾ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ರಾಜಕೀಯ ಮುಖಂಡರು, ಪ್ರಾಧ್ಯಾಪಕರು, ಬುದ್ಧಿಜೀವಿಗಳು, ವಿದ್ಯಾರ್ಥಿಗಳೂ ಸೇರಿ 'ರಾಷ್ಟ್ರಭಾಷಾ ಕೋರ್ಮಿ ಪರಿಷತ್' ಸ್ಥಾಪಿಸಿ ಹೋರಾಟ ಆರಂಭಿಸಿದರು. ಸರಕಾರ ಹೇರಿದ ನಿಷೇಧಾಜ್ಞೆ ಉಲ್ಲಂಘಿಸಿ ವಿದ್ಯಾರ್ಥಿಗಳ ಮೆರವಣಿಗೆ ಮೇಲೆ ಗೋಲಿಬಾರಿನಲ್ಲಿ 5 ಜನ ಹುತಾತ್ಮರಾದರು. ಡಾಕಾದಲ್ಲಿ ಈಗಲೂ ಈ ಭಾಷಾ ಚಳುವಳಿ ಹುತಾತ್ಮರ ಸ್ಮಾರಕ ಇದೆ. ಭಾಷಾ ಚಳುವಳಿ ಮುಂದೆ ಇತರ ರಾಜಕೀಯ ಬೆಳವಣಿಗೆಗಳಿಂದ 1971ರಲ್ಲಿ ಬಾಂಗ್ಲಾದೇಶ ಎಂಬ ಸ್ವತಂತ್ರ ದೇಶವಾಯಿತು. 1999ರಲ್ಲಿ ಯುನೆಸ್ಕೊ ಈ ದಿನವನ್ನು 'ವಿಶ್ವ ತಾಯ್ನುಡಿ ದಿನ'ವಾಗಿ ಘೋಷಿಸಿತು. ಜಗತ್ತಿನ ಜನ ತಮ್ಮ ಭಾಷೆಗಳನ್ನು ಉಳಿಸಿ ಬೆಳೆಸುವ ಬಗ್ಗೆ ಜಾಗೃತಿ ಮೂಡಿಸುವುದು ಈ ದಿನದ ಉದ್ದೇಶ.

aÀiÁvÉAzÀgÉ EzÀÄ

ನೀವು ನಿಜವಾಗಿಯೂ ಹೋರಾಡುತ್ತಿರುವುದು ಭಿನ್ನಮತದ ಅಪರಾಧಿಕರಣ ಅಥವಾ ಭಿನ್ನಾಭಿಪ್ರಾಯಗಳನ್ನೆ ಅಪರಾಧ ಎಂದು ಸಾಧಿಸಲು ಹೊರಟಿರುವ ಪ್ರಕ್ರಿಯೆಯ ವಿರುದ್ಧ. ನೀವು ಇಂದು ಈ ದೇಶದ ಎಂದೂ ಕಂಡಿರದ ಅಸಮಾನತೆಯ ಕಾಲದಲ್ಲಿ ನಿಂತಿದ್ದೀರಾ. ಜೊತೆಗೆ ಹೆಚ್ಚುತ್ತಿರುವ ಮೂಲಭೂತವಾದಿ ಶಕ್ತಿಗಳು ನಮ್ಮ ಮುಂದಿವೆ. ನನ್ನ ದೃಷ್ಟಿಯಲ್ಲಿ ಇಂದು ಭಾರತ ಸಾಮಾಜಿಕ ಮತ್ತು ಧಾರ್ಮಿಕ ಮೂಲಭೂತವಾದಿಗಳು, ಮಾರುಕಟ್ಟೆ ಮೂಲಭೂತವಾದಿಗಳೊಂದಿಗೆ ಸೇರಿ ಮಾಡಿಕೊಂಡಿರುವ ಮೈತ್ರಿಕೂಟದಿಂದ ಆಳಲ್ಪಡುತ್ತಿದೆ, ಆ ಎರಡು ಶಕ್ತಿಗಳು (ಸಾಮಾಜಿಕ–ಧಾರ್ಮಿಕ ಮತ್ತು ಮಾರುಕಟ್ಟೆ ಮೂಲಭೂತವಾದಿಗಳು) ಪರಸ್ಪರ ಹೊಂದಿಕೊಂಡೆ ಸಾಗುವ ಅನಿವಾರ್ಯತೆಯನ್ನು ಹೊಂದಿವೆ. ಮೊದಲು ನಾವು ಮಾರುಕಟ್ಟೆ ಮೂಲಭೂತವಾದಿಗಳು, ಯಾವ ಧಾರ್ಮಿಕ ಮೂಲಭೂತವಾದಿಗಳಿಂದ ಕಡಿಮೆ ಇಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕಿದೆ. ಈ ಎರಡು ಶಕ್ತಿಗಳು ತಮ್ಮದೇ ಆದ ಪವಿತ್ರ ಗ್ರಂಥಗಳು, ಪುರಾಣಗಳು, ದೈವವಾಣಿಗಳು ಮತ್ತು ಪಂಡಿತರನ್ನು ಹೊಂದಿವೆ. ಮಾರುಕಟ್ಟೆ ಮೂಲಭೂತವಾದಿಗಳು, ಧಾರ್ಮಿಕ ಮೂಲಭೂತವಾದಿಗಳಿಗಿಂತ ಹೆಚ್ಚು ಟಿ.ವಿ ವಕ್ತಾರರನ್ನು ಹೊಂದಿದ್ದಾರೆ. ಅವರು ಪ್ರತಿದಿನ ಸಂಜೆ ಎಲ್ಲಾ ಚಾನೆಲ್ ಗಳಲ್ಲಿಯೂ ಕಾಣಲು ಸಿಗುತ್ತಾರೆ. . .



– ಪಿ. ಸಾಯಿನಾಥ್,
ಜೆ.ಎನ್.ಯು. ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ

ಇಪ್ಪತ್ತನೆಯ ಶತಮಾನದ ಸರ್ವಾಧಿಕಾರಿ ಸಮಾಜಗಳನ್ನು ನೋಡಿ ಬೆಳೆದಿದ್ದ ಜಾರ್ಜ್ ಆರ್‌ವೆಲ್‌ನ (George Orwell) ಬರಹದಲ್ಲಿ ಕಾಣುವ ಭೀಕರವಾದ ಆತಂಕ ಹುಟ್ಟಿಸುವ ರಾಜಕೀಯ ಸ್ಥಿತಿಗಳು ನಮ್ಮೆದುರಿಗೆ ಇಂದು ವಾಸ್ತವಗಳಾಗಿ ನಿಂತಿವೆ. ಅವನ '1984' ಎಂಬ ಕಾದಂಬರಿಯಲ್ಲಿ ಸರ್ವಾಧಿಕಾರಿ ರಾಜಕೀಯ ವ್ಯವಸ್ಥೆಯಲ್ಲಿ ಒಂದು "ನೆನಪಿನ ತೂತು" (Memory Hole) ಇದೆ. ಇದರಲ್ಲಿ ನಿಜವಾಗಿ ನಡೆದ ಘಟನೆಗಳು ಮಾಯವಾಗಿ ಹೋಗಿಬಿಡುತ್ತವೆ. ಈ ವ್ಯವಸ್ಥೆಯಲ್ಲಿ Newspeak ಎನ್ನುವ ಹೊಸ ಭಾಷೆಯೇ ಇದೆ. ಇದರಲ್ಲಿ ಹತ್ಯೆಯೆಂದರೆ "ಸುಧಾರಣೆ" ಎಂದಾಗುತ್ತದೆ! ನಾವು ನಿಜವಾಗಿಯೂ ಇಂಥ ಭಾಷೆಯನ್ನು ರೂಪಿಸಿಕೊಂಡಿದ್ದೇವೆಯಲ್ಲವೇ? ಈ ಹೊಸ ಭಾಷೆಯಲ್ಲಿ ದೈಹಿಕ ಹಿಂಸೆಯು ದೇಶಭಕ್ತಿಯಾಗುತ್ತದೆ. ನೈಜ ಪ್ರತಿಭಟನೆಯು ರಾಷ್ಟ್ರದ್ರೋಹವಾಗುತ್ತದೆ. ಅಮಾಯಕ ಮನುಷ್ಯನ ಹತ್ಯೆ "ಧಾರ್ಮಿಕ ಭಾವನೆಗಳನ್ನು ನೋಯಿಸಿದ್ದರ ಸಹಜ ಪ್ರತಿಕ್ರಿಯೆ" ಯಾಗುತ್ತದೆ.

ನಮ್ಮ ಕಾಲದ ಬರ್ಬರತೆಯ ಚಿತ್ರಗಳು



◆ ಪ್ರೊ. ರಾಜೇಂದ್ರ ಚೆನ್ನಿ

ಪ್ರತಿಯೊಂದು ಕಾಲವೂ ತನ್ನ ಬರ್ಬರತೆಯ ಚಿತ್ರಗಳನ್ನು ತಾನೇ ರಚಿಸಿಕೊಳ್ಳುತ್ತದೆ. ಈ ಮಾತಿನ ಅರ್ಥ ನನಗೆ ಹೊಳೆದದ್ದು ಕಳೆದ ಎರಡು ದಿನಗಳಿಂದ ಮಾಧ್ಯಮಗಳಲ್ಲಿ ನೋಡುತ್ತಿರುವ ದೃಶ್ಯಾವಳಿಗಳಿಂದ. ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ನಾಯಕನನ್ನು ದೆಹಲಿ ಉಚ್ಚನ್ಯಾಯಾಲಯದ ವಕೀಲರು ಥಳಿಸಿದ ಚಿತ್ರಗಳನ್ನು ನೋಡಿದ್ದೇವೆ. ಆನಂತರ ತಾವು ಮಾಡಿದ ಕೃತ್ಯದ ಬಗ್ಗೆ ಹೆಮ್ಮೆಯಿಂದ ಕೊಚ್ಚಿಕೊಳ್ಳುವುದನ್ನು ನೋಡಿದ್ದೇವೆ. ಈ ಎಲ್ಲಾ ಚಿತ್ರಗಳಿಗಿಂತ ಅತ್ಯಂತ ಹೇಯವಾದದ್ದೆಂದರೆ ಈ ಸಂದರ್ಭದಲ್ಲಿ ಪೋಲೀಸರು ಮೂಕ ಪ್ರೇಕ್ಷಕರಾಗಿ ನಿಂತದ್ದು ಸರಿಯೇ ಎಂದು ಕೇಳಿದ್ದಕ್ಕೆ ಪ್ರಸಿದ್ಧ ಮಹಿಳಾ ಹೋರಾಟಗಾರ್ತಿ ಕಿರಣ್ ಬೇಡಿ 'ಹೌದು ಸರಿ. ಇನ್ನೇನು ಪೋಲೀಸರು ಇನ್ನೂ ಹೆಚ್ಚು ಹಿಂಸೆಗೆ ಅವಕಾಶ ಮಾಡಿಕೊಡಬೇಕಿತ್ತೆ' ಎಂದು ಉತ್ತರಿಸಿದ್ದು." ಅಂದರೆ ಯಾವುದೇ ಆತಂಕ ಅಥವಾ ಕಳವಳವಿಲ್ಲದೇ ಅದನ್ನು ಸಮರ್ಥಿಸಿದ್ದು.

ನಮ್ಮ ಸಾರ್ವಜನಿಕ ಜೀವನದಲ್ಲಿ ಆದರ್ಶ ಮಾದರಿಗಳಾಗಿದ್ದ ವ್ಯಕ್ತಿಗಳ ಈ ಅವನತಿಯು ಗಾಬರಿ ಹುಟ್ಟಿಸುತ್ತದೆ. ನನಗೆ ನೆನಪಿದೆ. ದಶಕಗಳ ಹಿಂದೆ ದೇಶದ ಕಣ್ಮಣಿಯಾಗಿದ್ದ ಕಿರಣ್ ಬೇಡಿ ಶಿವಮೊಗ್ಗೆಗೆ ಬಂದಾಗ ನಮ್ಮೂರಿನ ಯುವ ಜನತೆಯ ಕಣ್ಣುಗಳಲ್ಲಿ ಹೊಸದೊಂದು ಬೆಳಕನ್ನು ಮೂಡಿಸಿದ್ದರು. ಸ್ವತ: ನಾನೇ ಮೂರು ಕಾರ್ಯಕ್ರಮಗಳಲ್ಲಿ ಅವರನ್ನು ಪರಿಚಯಿಸಿದ್ದೆ.

ವ್ಯವಸ್ಥೆಯ ಪೈಶಾಚಿಕ ರೂಪ

ಡಾ. ಅಂಬೇಡ್ಕರ್ ಅವರು ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವಕ್ಕಿರುವ ಸಂಕಷ್ಟಗಳಲ್ಲಿ Public Conscience ನ ಕೊರತೆಯನ್ನು ಮುಖ್ಯವೆಂದು ಪರಿಗಣಿಸಿದ್ದರು. ಕೇವಲ ರಾಜಕೀಯ ಸಂಸ್ಥೆಗಳು ಹಾಗೂ ರಾಜಕೀಯ ವ್ಯವಸ್ಥೆಯ ಮೂಲಕ ಪ್ರಜಾಪ್ರಭುತ್ವವನ್ನು ಕಟ್ಟಲಾಗದು. ದೇಶದ ಪ್ರಜೆಗಳಲ್ಲಿ ಕನಿಷ್ಟ ಮಟ್ಟದ್ದಾದರೂ ಪ್ರಾಮಾಣಿಕತೆ ಹಾಗೂ ಬದ್ಧತೆ ಇದ್ದರೆ ಮಾತ್ರ ಪ್ರಜಾಪ್ರಭುತ್ವವು ಉಳಿಯಬಲ್ಲದು. ಕಣ್ಣೆದುರಿಗೆ ಹಿಂಸೆ ನಡೆದಾಗ ಅದಕ್ಕೆ ಕಾರಣರಾದವರನ್ನು ಸಮರ್ಥಿಸುವುದರಿಂದ ಅದು ಕುಸಿದು ಹೋಗುತ್ತದೆ. ರೋಹಿತ್ ಹಾಗೂ ಕನ್ಹಯ್ಯ ಇವರುಗಳ ಸುತ್ತಲಿನ ಘಟನೆಗಳಲ್ಲಿ ಅತ್ಯಂತ ಅಪಾಯಕಾರಿಯಾಗಿ ಕಂಡುಬಂದದ್ದು ಕನಿಷ್ಟ ಸಾರ್ವಜನಿಕ ನೈತಿಕತೆಯ ಕೊರತೆಯೇ ಆಗಿದೆ. ಇದು ತಮ್ಮ ಮಾತೃ ಸಂಸ್ಥೆಯ ಏಜೆಂಡಾ ಪ್ರಕಾರ ವ್ಯವಸ್ಥಿತವಾಗಿ ಗಲಭೆ, ಹಿಂಸೆ ನಡೆಸುತ್ತಿರುವವರ ಬಗ್ಗೆ ಹೇಳುತ್ತಿಲ್ಲ. ಸಾರ್ವಜನಿಕ ವಲಯದಲ್ಲಿರುವ, ಹುದ್ದೆಗಳಲ್ಲಿರುವವರ ಬಗ್ಗೆ ಹೇಳುತ್ತಿರುವುದು. ದೆಹಲಿ ಪೋಲೀಸ್ ಮುಖ್ಯಸ್ಥ, ಉಚ್ಚನ್ಯಾಯಾಲಯದ ವಕೀಲರು ಕುತಂತ್ರದಿಂದ ಸಿದ್ಧಮಾಡಿರುವ ವಿಡಿಯೋಗಳನ್ನು ಅಧಿಕೃತವಾಗಿ ಹಂಚಿದ ರಾಜಕೀಯ ಪಕ್ಷ ಪ್ರತಿನಿಧಿಗಳು ಹಾಗೂ ಮಾಧ್ಯಮಗಳು, ಮುಗಮ್ಮಾಗಿ ಕುಳಿತಿರುವ ಸರಕಾರದ ಅಧಿಕಾರಿಗಳು ಹಾಗೂ ಕೊನೆಗೆ ನಮ್ಮ ನ್ಯಾಯಾಂಗ ವ್ಯವಸ್ಥೆ ಕೂಡ ತನ್ನ ತಟಸ್ಥ ನಡವಳಿಕೆಯಿಂದಾಗಿ ನೈತಿಕತೆಯ ಕೊರತೆಯನ್ನೇ ತೋರಿದೆ. ಇವರೆಲ್ಲ ತಾವು ಮಾಡಬೇಕಾದ ಸಾಮಾನ್ಯ ಕರ್ತವ್ಯಗಳನ್ನು ಮಾಡಿದ್ದರೆ ಪರಿಸ್ಥಿತಿ ಇಷ್ಟು ವಿಕ್ಷುಬ್ಧವಾಗುತ್ತಿರಲಿಲ್ಲ. ಇದರಿಂದಾಗಿ ಇನ್ನೆಲ್ಲ ಸರಕಾರಗಳಿಗಿಂತ ಇಂದಿನ ಸರಕಾರವು ತನ್ನ ಅಧಿಕಾರದ ದುರ್ಬಳಕೆಯನ್ನು ಅತ್ಯಂತ ಹೆಚ್ಚಾಗಿ ಮಾಡಿಕೊಳ್ಳುತ್ತದೆಯೆನ್ನುವ ಭಾವನೆ ಬರುತ್ತಿದೆ. ಅಂದರೆ ಅದು ಸುಳ್ಳುಗಳನ್ನು ದೈಹಿಕ ಹಿಂಸೆಯನ್ನು ಪ್ರೋತ್ಸಾಹಿಸುತ್ತಿದೆಯೆನ್ನುವ ಭಾವನೆ ಬರುತ್ತದೆ. ಹಾಗೆ ನೋಡಿದರೆ ಇಂಥದೇ ನಡುವಳಿಕೆಯನ್ನು ನಾವು ಗುಜರಾತಿನ ಗಲಭೆಗಳಲ್ಲಿ ಆ ಮೊದಲು ಬಾಬ್ರಿ ಮಸೀದಿಯ ಧ್ವಂಸದ ಸಂದರ್ಭದಲ್ಲಿ ನೋಡಿದ್ದೇವಲ್ಲವೇ? ಅಲ್ಲಿಯೂ ಕೂಡ ಸರಕಾರದ ಎಲ್ಲಾ ಸಂಸ್ಥೆಗಳು ತಟಸ್ಥವಾಗಿ ಕುಳಿತು ಅಪಾರವಾದ ಹಿಂಸೆಯನ್ನು ನಡೆಯಲು ಬಿಟ್ಟವು. ಆಗಲೇ ಪೋಲೀಸ್ ಇಲಾಖೆಯ ಜನತೆಯ ಶತ್ರುವಿನ ಹಾಗೆ ನಡೆದುಕೊಂಡಿತ್ತು. ಇದೆಲ್ಲ ಒಮ್ಮೊಮ್ಮೆ ತುಂಬಾ ಅಸಂಗತವಾಗಿ ಕಾಣುತ್ತದೆ. ಸಂವಿಧಾನವನ್ನೂ, ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿರುವ ನಾಗರೀಕ ಸಮಾಜವು ಹಠಾತ್ತನೆ ಇಂಥ ಘಟನೆಗಳ ಮೂಲಕ ತನ್ನ ಒಳಗಿನ ಪೈಶಾಚಿಕ ರೂಪವನ್ನು ತೋರಿಸುತ್ತದೆ. ಆದರೆ ಈ ಘಟನೆಗಳ ಮೂಲಕ ನಮಗೆ ದೊರಕುವ ತಿಳುವಳಿಕೆ ಬಹು ಬೇಗನೇ ಮರೆತುಹೋಗುತ್ತದೆ. ಈ ಮರೆವಿನಿಂದಾಗಿಯೋ ಏನೋ ಮತ್ತೆ ನಾವು ನಮ್ಮ ನಾಗರೀಕ ಸಮಾಜ ಹಾಗೂ ಸರಕಾರಗಳು ಮುಗ್ಧ ನಂಬಿಕೆಗಳನ್ನು ಇಟ್ಟುಕೊಂಡು ಕಾಯುತ್ತೇವೆ.

ಬಾಬ್ರಿ ಮಸೀದಿ ಹಾಗೂ ಗುಜರಾತ್‌ನ ಘಟನೆಗಳು ಒಟ್ಟಾರೆ ಆಧುನಿಕ ಭಾರತದ ರಾಜಕೀಯ ಹಾಗೂ ಸಾಂಸ್ಕೃತಿಕ ಸೋಲುಗಳ ಪ್ರತೀಕಗಳಾಗಿದ್ದವು. ಅಂದರೆ ಸಂವಿಧಾನವು ಬಯಸುವ democratic rule by the majority ಬದಲಾಗಿ undemocratic rule by the majoritarian community ಕಡೆಗೆ ನಾವು ಚಲಿಸುತ್ತಿರುವುದರ ಪ್ರತೀಕಗಳಾಗಿದ್ದವು. ಹೀಗೆ ಆದಾಗ ನಮ್ಮ ಆಡಳಿತ ಸಂಸ್ಥೆಗಳು ಪಕ್ಷಪಾತಿಗಳಾಗುತ್ತವೆ; ಇಲ್ಲವೆ ನಿಷ್ಕ್ರಿಯವಾಗುತ್ತವೆ. ಇದರ ಪರಿಣಾಮವಾಗಿ ಈ ನಿಷ್ಕ್ರಿಯತೆಯ ಚರ್ಚೆಯ ಬದಲಾಗಿ ಇನ್ನೆಲ್ಲಾ ಅಸಂಬದ್ಧ ತರ್ಕ ಕುತರ್ಕಗಳು ನಡೆಯುತ್ತವೆ. ಉದಾಹರಣೆಗೆ ದಾದ್ರಿಯಲ್ಲಿ ನಡೆದ ಅಮಾಯಕ ವ್ಯಕ್ತಿಯ ಹತ್ಯೆಯ ಬಗ್ಗೆ ನಡೆಯಬೇಕಾದ ಏಕಮಾತ್ರ ಚರ್ಚೆಯೆಂದರೆ ಜನರ ಗುಂಪು ಒಬ್ಬನ ಹತ್ಯೆ ಮಾಡಿದರೆ ಅದು ಅಪರಾಧವಾಗಿದ್ದರಿಂದ ಹತ್ಯೆ ಮಾಡಿದವರಿಗೆ ಶಿಕ್ಷೆಯಾಗಬೇಕು ಹಾಗೂ ಆಡಳಿತ ಸಂಸ್ಥೆಗಳು ಅದು ಆಗುವ ಹಾಗೆ ದೇಶದ ಕಾನೂನನ್ನು ಪಾಲಿಸಬೇಕು. ಬದಲಾಗಿ ನಾವು ಕಂಡಿದ್ದೆಂದರೆ ಗಟ್ಟಿ ದನಿಯ ವ್ಯರ್ಥವಾದ ಭಾಷಣಗಳು. ನಿಜವಾದ ಅರ್ಥದಲ್ಲಿ ನಮ್ಮಲ್ಲಿ ಯಾವ ರಾಜಕೀಯ ಚರ್ಚೆಯೂ ನಡೆಯುತ್ತಲಿಲ್ಲ. ಚರ್ಚೆಯ ಸ್ಥಾನವನ್ನು ನಮ್ಮ ಪೂರ್ವಗ್ರಹಗಳನ್ನು ಆದಷ್ಟು ಒರಟಾಗಿ ಹಾಗೂ ಏರಿದ ದನಿಯಲ್ಲಿ ಹೇಳುವ ಕೂಗಾಟವು ಆಕ್ರಮಿಸಿಕೊಂಡುಬಿಟ್ಟಿದೆ. ಕಿರಣ್ ಬೇಡಿ ಮೊದಲಿನಿಂದಲೂ ಒಳ್ಳೆಯ ಭಾಷಣಕಾರ್ತಿ ಹಾಗೂ ಚರ್ಚಾಪಟು. ಆದರೆ ಈ ಕೌಶಲ್ಯದ ಹಿಂದೆ ಪ್ರಾಮಾಣಿಕತೆಯೇ ಇಲ್ಲ. ವ್ಯಕ್ತಿತ್ವ ಹಾಗೂ ಚಿಂತನೆಗಳು ಪೊಳ್ಳಾಗಿ ಹೋದಂತೆ ಭಾಷಾಡಂಬರವು ಅತಿಯಾಗುತ್ತದೆ.

ಘಟನೆಗಳು ಮಾಯವಾಗುವ 'ನೆನಪಿನ ತೂತು'


ಕನ್ನಡದ ಪ್ರಮುಖ ಬರಹಗಾರರು ಈ ಪ್ರವೃತ್ತಿಯನ್ನು ತೀವ್ರವಾಗಿ ಖಂಡಿಸುತ್ತ ಬಂದಿದ್ದಾರೆ. ಮಾತಿಗೆ ತತ್ವದ ಬೆಂಬಲವೂ ಇಲ್ಲ; ಕ್ರಿಯೆಯ ಬೆಂಬಲವೂ ಇಲ್ಲವಾದರೆ ಅದು ಅಸಹಜವಾದ ಭಾಷಾಡಂಬರವಾಗುತ್ತದೆ. ಗೋಪಾಲಕೃಷ್ಣ ಅಡಿಗರು ಇಂಥ ಅಪ್ರಾಮಾಣಿಕತೆಯನ್ನು ಉಗ್ರವಾಗಿ ವಿಡಂಬನೆ ಮಾಡಿ ಬರೆದರು. "ನೆಹರು ನಿವೃತ್ತರಾಗುವುದಿಲ್ಲ" ಪದ್ಯವು ನೆಹರು ಅವರ ವಾಕ್ಪಟುತ್ವವನ್ನು ಛೇಡಿಸುತ್ತದೆ. ಚಂದ್ರಶೇಖರ ಕಂಬಾರರು ಅನೇಕ ಪದ್ಯಗಳು ಇದೇ ಧಾಟಿಯಲ್ಲಿವೆ. ಲಂಕೇಶರು ಪ್ರತಿವಾರವೂ ಬರೆಯುತ್ತಿದ್ದ ಅಂಕಣಗಳಲ್ಲಿ ಪೊಳ್ಳುಮಾತಿನ ಮಲ್ಲರನ್ನು ಅಕ್ಷರಶಃ ಬೇಟೆಯಾಡುತ್ತಿದ್ದರು. ರಸಋಷಿಗಳೆಂದು ಪ್ರಸಿದ್ಧರಾದ ಕುವೆಂಪು ಅವರು ನೈತಿಕ ಆಕ್ರೋಶದಿಂದ ಕೂಡಿದ ಧಾಟಿಯಲ್ಲಿ ಪೊಳ್ಳುಮಾತಿನ ನಾಯಕರನ್ನು ಕಟುವಾಗಿ ಟೀಕಿಸುತ್ತಿದ್ದರು. ಆದರೆ ಸದ್ಯದ ಅಸಹನೆಯ ಸ್ಥಿತಿಯಲ್ಲಿ ಸಾಹಿತ್ಯ ಕೂಡ ತನ್ನ ಈ ವ್ಯಂಗ್ಯ ಹಾಗೂ ಪ್ರತಿಭಟನೆಯ ಗುಣಗಳನ್ನು ಕಳೆದುಕೊಳ್ಳುತ್ತಿದೆ.

ಇಪ್ಪತ್ತನೆಯ ಶತಮಾನದ ಸರ್ವಾಧಿಕಾರಿ ಸಮಾಜಗಳನ್ನು ನೋಡಿ ಬೆಳೆದಿದ್ದ ಜಾರ್ಜ್ ಆರ್‌ವೆಲ್‌ನ (George Orwell) ಬರಹದಲ್ಲಿ ಕಾಣುವ ಭೀಕರವಾದ ಆತಂಕ ಹುಟ್ಟಿಸುವ ರಾಜಕೀಯ ಸ್ಥಿತಿಗಳು ನಮ್ಮೆದುರಿಗೆ ಇಂದು ವಾಸ್ತವಗಳಾಗಿ ನಿಂತಿವೆ. ಅವನ '1984' ಎಂಬ ಕಾದಂಬರಿಯಲ್ಲಿ ಸರ್ವಾಧಿಕಾರಿ ರಾಜಕೀಯ ವ್ಯವಸ್ಥೆಯಲ್ಲಿ ಒಂದು "ನೆನಪಿನ ತೂತು" (Memory Hole) ಇದೆ. ಇದರಲ್ಲಿ ನಿಜವಾಗಿ ನಡೆದ ಘಟನೆಗಳು ಮಾಯವಾಗಿ ಹೋಗಿಬಿಡುತ್ತವೆ. ಈ ವ್ಯವಸ್ಥೆಯಲ್ಲಿ Newspeak ಎನ್ನುವ ಹೊಸ ಭಾಷೆಯೇ ಇದೆ. ಇದರಲ್ಲಿ ಹತ್ಯೆಯೆಂದರೆ "ಸುಧಾರಣೆ" ಎಂದಾಗುತ್ತದೆ! ನಾವು ನಿಜವಾಗಿಯೂ ಇಂಥ ಭಾಷೆಯನ್ನು ರೂಪಿಸಿಕೊಂಡಿದ್ದೇವೆಯಲ್ಲವೇ? ಈ ಹೊಸ ಭಾಷೆಯಲ್ಲಿ ದೈಹಿಕ ಹಿಂಸೆಯು ದೇಶಭಕ್ತಿಯಾಗುತ್ತದೆ. ನೈಜ ಪ್ರತಿಭಟನೆಯು ರಾಷ್ಟ್ರದ್ರೋಹವಾಗುತ್ತದೆ. ಅಮಾಯಕ ಮನುಷ್ಯನ ಹತ್ಯೆ "ಧಾರ್ಮಿಕ ಭಾವನೆಗಳನ್ನು ನೋಯಿಸಿದ್ದರ ಸಹಜ ಪ್ರತಿಕ್ರಿಯೆ" ಯಾಗುತ್ತದೆ. ಜಾರ್ಜ್ ಆರ್‌ವೆಲ್ "1984" ಕಾದಂಬರಿಯಲ್ಲಿ ಭವಿಷ್ಯದ ಕಾಲ್ಪನಿಕ ಜಗತ್ತನ್ನು ಕಲ್ಪಿಸಿಕೊಂಡು ಅದರ ಮೂಲಕ ತನ್ನ ಕಾಲದ ಭಯಗಳನ್ನು, ವಾಸ್ತವಗಳನ್ನು ವರ್ಣಿಸಿದ. ಆಶ್ಚರ್ಯವೆಂದರೆ ಅವನು ಉದ್ದೇಶಪೂರ್ವಕವಾಗಿ ಅತಿಶಯೋಕ್ತಿ ಹಾಗೂ ಫ್ಯಾಂಟಸಿಗಳನ್ನು ಬಳಸಿಕೊಂಡರೂ ಅವನು ಕಲ್ಪಿಸಿಕೊಂಡಿದ್ದೆಲ್ಲ ನಿಜವೇ ಆಯಿತು. ಹಾಗೂ ಆಗುತ್ತಿದೆ. "ರಾಜಕೀಯ ಹಾಗೂ ಇಂಗ್ಲಿಷ್ ಭಾಷೆ" ಎನ್ನುವ ಪ್ರಬಂಧದಲ್ಲಿ ಆರ್‌ವೆಲ್ ರಾಜಕೀಯ ಅಪ್ರಮಾಣಿಕತೆಗೂ ಭಾಷೆಯ ಕೃತ್ರಿಮತೆಗೂ ನೇರವಾದ ಸಂಬಂಧವನ್ನು ಗುರುತಿಸುತ್ತಾನೆ. ಭಾಷೆಯ ಅಸಹಜತೆ ಹಾಗೂ ಗೊಂದಲಗಳು ರಾಜಕೀಯ ಚಿಂತನೆಯ ಗೊಂದಲಗಳನ್ನು ಪ್ರತಿಬಿಂಬಿಸುತ್ತವೆ. ಅವನು ಬರೆದದ್ದು ನಮ್ಮ ಇಂದಿನ ಸಂದರ್ಭದಲ್ಲಿ ಅತ್ಯಂತ ಪ್ರಸ್ತುತವಾಗಿ ಕಾಣತೊಡಗಿದೆ.

ಮಾಧ್ಯಮಗಳಿಗೆ ಬಲಿಯಾಗಿರುವ 'ರಾಷ್ಟ್ರೀಯತೆ'ಯ ಪರಿಕಲ್ಪನೆ

ನಮ್ಮ ರಾಜಕೀಯದ ಹಾಗೂ ಮಾಧ್ಯಮಗಳ ಭಾಷೆಯು ಅದೆಷ್ಟು ಪೊಳ್ಳಾಗಿದೆಯೆಂದರೆ ಅದು ಅಜ್ಞಾನ ಹಾಗೂ ಅಪ್ರಾಮಾಣಿಕತೆಗಳ ಮಿಶ್ರಣದ ಫಲವಾಗಿದೆಯೆನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ಬಗೆಯ ಚಿಂತನೆಗೆ ಬಲಿಯಾಗಿರುವ ಪದವೆಂದರೆ ರಾಷ್ಟ್ರೀಯತೆ. ರಾಷ್ಟ್ರೀಯತೆ ಕುರಿತಂತೆ ಒಂದು ಕಡೆಗೆ ಪಾಶ್ಚಾತ್ಯ ವಿದ್ವಾಂಸರು ಅಸಾಧಾರಣವಾದ ವಿದ್ವತ್ತಿನಿಂದ ಕೂಡಿದ ನೂರಾರು ಗ್ರಂಥಗಳನ್ನು ಬರೆದಿದ್ದಾರೆ. ಇವುಗಳಲ್ಲಿ ಬಹುಪಾಲು ರಾಷ್ಟ್ರೀಯತೆಯನ್ನು ಅತ್ಯಂತ ವಿಮರ್ಶಾತ್ಮಕವಾಗಿ ನೋಡುತ್ತವೆ. ಈ ಪರಿಕಲ್ಪನೆಯು ಅನೇಕ ಬಗೆಯ ಹಿಂಸೆಗೆ ಹಾಗೂ ಅನೇಕ ಸಮುದಾಯಗಳನ್ನು ಅಂಚಿಗೆ ತಳ್ಳುವ ಕೆಲಸಕ್ಕೆ ಕಾರಣವಾಗಿದೆಯೆಂದು ವಿವರಿಸಿದ್ದಾರೆ. ಬಹು ಹಿಂದೆಯೆ ರವೀಂದ್ರನಾಥ ಠಾಕೂರ್ ಅವರು ರಾಷ್ಟ್ರೀಯತೆ, ರಾಷ್ಟ್ರವಾದಗಳನ್ನು ಅಪಾಯಕಾರಿಯೆಂದು ಗುರುತಿಸಿದ್ದರು. ಗಾಂಧಿಯವರ ಆದರ್ಶ ಭಾರತವು ಹಳ್ಳಿಗಳ ಸಮುದಾಯವಾಗಿತ್ತೇ ಹೊರತು ರಾಷ್ಟ್ರವಾಗಿರಲಿಲ್ಲ. ಇವೆಲ್ಲ ಸಂಗತಿಗಳ ಹಿನ್ನೆಲೆಯಲ್ಲಿ ರಾಷ್ಟ್ರವಾದದ ಬಗ್ಗೆ ಅನೇಕ ಅಭಿಪ್ರಾಯಗಳು ಇವೆ. ಹಾಗೆಯೆ ಸಾವರ್ಕರ್‌ರಿಂದ ಆರಂಭಗೊಂಡು ಇನ್ನೊಂದು ಬಗೆಯ ರಾಷ್ಟ್ರೀಯತೆಯ ಕಲ್ಪನೆಯೂ ಇದೆ. ಈ ಪರಿಕಲ್ಪನೆಯೇ ಪದೇ ಪದೇ ಹಿಂಸೆಗೆ ಕಾರಣವಾಗುತ್ತಿದೆ. ಏಕೆಂದರೆ ಈ ರಾಷ್ಟ್ರೀಯತೆಯನ್ನು ನಮ್ಮ ಸಂವಿಧಾನದ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯ ಚೌಕಟ್ಟಿನಲ್ಲಿ ಅನುಷ್ಠಾನಕ್ಕೆ ತರುವುದು ಸಾಧ್ಯವೇ ಇಲ್ಲ. ಆದರೆ ಅದನ್ನು ಉಗ್ರವಾಗಿ ನಂಬಿರುವ ಸಂಸ್ಥೆಗಳು ಪ್ರಜಾಪ್ರಭುತ್ವವನ್ನು ಬಳಸಿಕೊಂಡೇ ಅದನ್ನು ವಾಸ್ತವವಾಗಿಸುತ್ತೇವೆ ಎನ್ನುವ ಹಟದಿಂದ ದಿನನಿತ್ಯದ ಹಿಂಸೆಗೆ ಕಾರಣವಾಗುತ್ತಿದ್ದಾರೆ. ಅಸಹಿಷ್ಣುತೆಯೆಂದರೆ ಈ ಪ್ರಕಾರದ ರಾಷ್ಟ್ರವಾದದ ಹಿಂಸಾತ್ಮಕ ರೂಪವಾಗಿದೆ. ಸಮಸ್ಯೆಯೆಂದರೆ ಈ ಪರಿಕಲ್ಪನೆಯ ಸ್ವರೂಪದ ಬಗ್ಗೆ ಚರ್ಚೆಗೆ ಅವಕಾಶವೇ ಇಲ್ಲವಾಗಿದೆ. ಅದನ್ನು ಹೇಗೆ ಪ್ರಶ್ನಿಸಿದರೂ ಅದು ರಾಷ್ಟ್ರದ್ರೋಹವಾಗಿ ಕೆಲವರಿಗೆ ಕಾಣುತ್ತದೆ. ಆರ್‌ವೆಲ್‌ನ ದುಃಸ್ವಪ್ನದ ಜಗತ್ತಿನಲ್ಲಿಯಂತೆ ಒಂದು ಪದವೇ ಹಿಂಸೆಯ ಮೂಲವಾಗಿ ತಾಂಡವವಾಡುತ್ತಿದೆ. ●







ಪ್ರಧಾನ ಮಂತ್ರಿಗಳ ಪಿತೂರಿ ಸಿದ್ಧಾಂತಗಳು

ಪ್ರಧಾನ ಮಂತ್ರಿಗಳನ್ನು ಚುಚ್ಚುತ್ತಿರುವುದು ಅವರ ಸರಕಾರವನ್ನು ಉರುಳಿಸುವ ಯಾವುದೇ ಪಿತೂರಿ ಅಲ್ಲ, ಬದಲಿಗೆ, ಎಲ್ಲ ರಂಗಗಳಲ್ಲೂ ಅವರ ಸರಕಾರದ ಶೋಚನೀಯ ವಿಫಲತೆ. ಇಂತಹ ಒಂದು ಸನ್ನಿವೇಶದಲ್ಲಿ ಸರಕಾರ ಮತ್ತು ಆಳುವ ಪಕ್ಷ ಭಿನ್ನಮತವನ್ನು ತುಳಿಯುವ ದಾರಿ ಹಿಡಿದಿದೆ ಮತ್ತು ಹಿಂದುತ್ವ ಮೌಲ್ಯಗಳನ್ನು ವಿಶ್ವವಿದ್ಯಾಲಯ ಕ್ಯಾಂಪಸ್ಸುಗಳಲ್ಲಿ ನುಗ್ಗಿಸುವ ಪ್ರಯತ್ನಗಳನ್ನು ಮಾಡುತ್ತಿದೆ. ಕ್ಯಾಪಸ್ಸುಗಳೊಳಗೆ ರಾಷ್ಟ್ರ-ವಿರೋಧಿಗಳು ನುಸುಳಿದ್ದಾರೆ ಎಂಬ ಕೂಗು ಪ್ರಧಾನ ಮಂತ್ರಿಗಳು ಚಿಮ್ಮಿಸಿರುವ ಪಿತೂರಿ ಸಿದ್ಧಾಂತಗಳ ಪ್ರತಿಬಿಂಬ.


ಪ್ರಕಾಶ ಕಾರಟ್

ಅಧಿಕಾರದಲ್ಲಿ ಇನ್ನೂ ಎರಡು ವರ್ಷಗಳಾಗಿಲ್ಲ, ಆಗಲೇ ಪ್ರಧಾನ ಮಂತ್ರಿ ನರೇಂದ್ರ'ಮೋದಿ ಪ್ರಯಾಸದ, ಹತಾಶೆಯ ಲಕ್ಷಣಗಳನ್ನು ತೋರುತ್ತಿದ್ದಾರೆ. ಒಂದು ದಿಗಿಲುಗೊಳಿಸುವ ಭಾಷಣದಲ್ಲಿ ಅವರು ತಮ್ಮ ಸರಕಾರವನ್ನು ಅಸ್ಥಿರಗೊಳಿಸಲು ವಿವಭಿನ್ನ ಶಕ್ತಿಗಳು ಪಿತೂರಿ ಮಾಡುತ್ತಿವೆ ಎಂದು ಆಪಾದಿಸಿದ್ದಾರೆ.

ಒಡಿಶಾದಲ್ಲಿ ಒಂದು ರ್‍ಯಾಲಿಯಲ್ಲಿ ಮಾತಾಡುತ್ತ ಅವರು ಪ್ರಧಾನ ಮಂತ್ರಿಯಾಗಿ ತನ್ನನ್ನು ಮತ್ತು ತನ್ನ ಸರಕಾರವನ್ನು ಸಹಿಸಲಾರದ ವಿವಿಧ ವಿಭಾಗಗಳತ್ತ ಬೊಟ್ಟು ಮಾಡಿದ್ದಾರೆ. ಅವರಲ್ಲಿ ಒಬ್ಬ ಚಹಾ ಮಾರುವಾತ ಪ್ರಧಾನ ಮಂತ್ರಿಯಾದುದನ್ನು ಅರಗಿಸಿಕೊಳ್ಳಲಾರ ದವರಿದ್ದಾರೆ, ಭ್ರಷ್ಟಾಚಾರದ ಮಾರ್ಗಗಳನ್ನು ಮುಚ್ಚಿಬಿಟ್ಟ ಬಗ್ಗೆ ಕುಪಿರಾದಚರಿದ್ದಾರೆ, ಮತ್ತು ಕೆಲವು ಎನ್‌ಜಿಒ ಗಳಿದ್ದಾರೆ, ಏಕೆಂದರೆ ಅವರ ವಿದೇಶಿ ಹಣದ ವಿವರಗಳನ್ನು ಎಂದು ಕೇಳಿದ್ದಕ್ಕೆ ಅವರೆಲ್ಲ ಒಂದಾಗಿ ದಾಳಿಗಿಳಿದಿದ್ದಾರೆ!

ಹಿಂದಿರುಗಿ ನೋಡಿದಾಗ, ಪ್ರಧಾನ ಮಂತ್ರಿಯ ಇಂತಹ ನಿಲುವು ಹೊಸದೆಂದೇನೂ ಕಾಣುತ್ತಿಲ್ಲ. ಇದು ವ್ಯಾಪಾರದ ಗುಟ್ಟು. ಈ ಹಿಂದೆಯೂ ವಿಭಿನ್ನ ಪ್ರಧಾನ ಮಂತ್ರಿಗಳು ಪರಿಹರಿಸಲಾಗದ ಸಮಸ್ಯೆಗಳು ಎದುರಾದಾಗ ವಿದೇಶಿ ಮತ್ತು ಆಂತರಿಕ ಶಕ್ತಿಗಳು ತಮ್ಮ ಸರಕಾರವನ್ನು ಅಸ್ಥಿರಗೊಳಿಸುವ ಪ್ರಯಣಜಿಟಿ ನಡೆಯುತ್ತಿದೆ ಎಂದು ಸಾರಿದ್ದಾರೆ.

ಮೋದಿಯವರ ಸಂದರ್ಭದಲ್ಲಿ ಇಂತಹ ಪಿತೂ-ರಿಯ ಹಿಂದಿರುವ ವಿದೇಶಿ ಕೈ ಯಾವುದು ಎಂದು ಸ್ಪಷ್ಟವಿಲ್ಲ. ಅಮೆರಿಕಾದವರಂತೂ ಆಗಿರಲಿಕ್ಕಿಲ್ಲ. ಏಕೆ-ಂದರೆ ಅವರಿಗೆ ಇವರಲ್ಲಿ ಒಬ್ಬ ಸದಾ ಮಿತ್ರನಾಗಲು, ಭಾಗೀದಾರನಾಗಲು ಹಾತೊರೆಯುವ ವ್ಯಕ್ತಿ ಕಂಡಿದ್ದಾನೆ.

ಪ್ರತಿಪಕ್ಷಗಳು ಒಟ್ಟುಗೂಡಿ ಸರಕಾರವನ್ನು ಉರುಳಿಸುವ ಅಪಾಯವೂ ಇಲ್ಲ, ಏಕೆಂದರೆ ಲೋಕಸಭೆ ಆಳುವ ಪಕ್ಕಷಕ್ಕೆ ಒಂದು ದೃಢ ಬಹುಮತ ಇದೆ.

ಇನ್ನು ಎನ್‌ಜಿಒಗಳು ಮೋದಿ ಸರಕಾರಕ್ಕೆ ಒಂದು ಬೆದರಿಕೆ ಎನ್ನುವುದು ಒಂದು ನಗೆಪಾಟಲಿನ ಮಾತು.

ಪ್ರಧಾನ ಮಂತ್ರಿ ಗಳನ್ನು ಚುಚ್ಚುತ್ತಿರುವುದು ಅವರ ಸರಕಾರವನ್ನು ಉರುಳಿಸುವ ಯಾವುದೇ ಪಿತೂರಿ ಅಲ್ಲ, ಬದಲಿಗೆ, ಎಲ್ಲ ರಂಗಗಳಲ್ಲೂ ಅವರ ಸರಕಾರದ ಶೋಚನೀಯ ವಿಫಲತೆ. ಆರ್ಥಿಕ ಡೋಲಾಯಮಾನವಾಗಿದೆ, ತೀವ್ರವಾದ ಕೃಷಿ ಬಿಕ್ಕಟ್ಟು ಬಾಧಿಸುತ್ತಿದೆ, ಕೈಗಾರಿಕಾ ಉತ್ಪಾದನೆ ಸಂಕುಚನಗೊಂಡಿದೆ, ರಫ್ತುಗಳು ಇಳಿಮುಖವಾಗಿವೆ ಮತ್ತು ನಿರುದ್ಯೋಗ ಬೆಟ್ಟದೆತ್ತರ-ಕ್ಕೆ ಬೆಳೆಯುತ್ತಿದೆ. ಬ್ಯಾಂಕಿಂಗ್ ವ್ಯವಸ್ಥೆ ಬಿಕ್ಕಟ್ಟಿನತ್ತ ಜಾರುತ್ತಿದೆ ಮತ್ತು ಶೇರು ಮಾರುಕಟ್ಟೆ ಕುಸಿಯುತ್ತಿದೆ.

ಬಿಕ್ಕಟ್ಟಿನ ಕರಾಳ ಛಾಯೆ ಸಮೀಪಿಸುತ್ತಿರುವುದನ್ನು ಕಾಣುತ್ತಿರುವ ಸರಕಾರ ಹೆಚ್ಚೆಚ್ಚು ಅಸಹಾಯಕ ಪ್ರೇಕ್ಷಕನಾಗುತ್ತಿದೆ. ಬಜೆಟ್‌ನಲ್ಲಿ ಇನ್ನಷ್ಟು ನವ-ಉದಾರವಾದಿ ಪಥ್ಯಗಳನ್ನು ನಿರೀಕ್ಷಿಸುವಂತಿಲ್ಲ. ಏಕೆಂದರೆ ಅವು ಆರ್ಥಿಕ ಸಂಕಟಗಳನ್ನು ಮತ್ತಷ್ಟು ಉಲ್ಬಣಗೊಳಿಸಬಹುದಷ್ಟೇ.

ಇಂತಹ ಒಂದು ಸನ್ನಿವೇಶದಲ್ಲಿ ಮೋದಿ ಸರಕಾರ ಮತ್ತು ಆಳುವ ಪಕ್ಷ ಭಿನ್ನಮತವನ್ನು ತುಳಿಯುವ ದಾರಿ ಹಿಡಿದಿದೆ ಮತ್ತು ಹಿಂದುತ್ವ ಮೌಲ್ಯಗಳನ್ನು ವಿಶ್ವವಿದ್ಯಾಲಯ ಕ್ಯಾಂಪಸ್ಸುಗಳಲ್ಲಿ ನುಗ್ಗಿಸುವ ಪ್ರಯತ್ನಗಳನ್ನು ಮಾಡುತ್ತಿದೆ. ಕ್ಯಾಪಸ್ಸುಗಳೊಳಗೆ ರಾಷ್ಟ್ರ-ವಿರೋಧಿಗಳು ನುಸುಳಿದ್ದಾರೆ ಎಂಬ ಕೂಗು ಪ್ರಧಾನ ಮಂತ್ರಿಗಳು ಚಿಮ್ಮಿಸಿರುವ ಪಿತೂರಿ ಸಿದ್ಧಾಂತಗಳ ಪ್ರತಿಬಿಂಬ.

ಸಂಸತ್ತಿನ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ರಾಷ್ಟ್ರಪತಿಗಳ ಭಾಷಣ ಸರಕಾರದ ಆತ್ಮಸಂತುಷ್ಟಿಯನ್ನು ಮತ್ತು ಮರಳಲ್ಲಿ ತಲೆ ಹುದುಗಿಸಿಕೊಳ್ಳುವ ಉಷ್ಟ್ರ ಪಕ್ಷಿಯ ನಿಲುವನ್ನು ಬಿಂಬಿಸುತ್ತದೆ. ಆರ್ಥಿಕ ವ್ಯವಸ್ಥೆ ಎದುರಿಸುತ್ತಿರುವ ಗಂಭೀರ ಸಮಸ್ಯೆಗಳೇನು, ಅದನ್ನು ಸರಕಾರ ಹೇಗೆ ಪರಿಹರಿಸಬೇಕೆಂದಿದ ಎಂಬ ಬಗ್ಗೆ ಯಾವ ಸಂಕೇತವೂ ಇಲ್ಲ. ಬದಲಿಗೆ ಕಳೆದ ಒಂದು ವರ್ಷದಲ್ಲಿ ಸರಕಾರ ಅಂಗೀಕರಿಸಿದ ಕಾರ್ಯಕ್ರಮಗಳ ಮತ್ತು ಸ್ಕೀಮುಗಳ ಒಂದು ಸರಮಾಲೆಯಷ್ಟೇ ಇದೆ. ಹೈದರಾಬಾದ್, ಜೆಎನ್‌ಯುಗಳಂತಹ ವಿಶ್ವವಿದ್ಯಾಲಯಗಳಲ್ಲಿನ ಪರಿಸ್ಥಿತಿಗಳ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ. ಯಾವುದೇ ಜ್ವಲಂತ ಪ್ರಶ್ನೆಯ ಬಗ್ಗೆಯೂ ಪ್ರಸ್ತಾಪವಿಲ್ಲ.

ಈ ರಾಷ್ಟ್ರಪತಿಗಳ ಬಾಷಣ ಏನಾದರೂ ತೆ-ೂರುತ್ತಿದ್ದರೆ, ಅದು ಈ ಸರಕಾರದ ಟೊಳ್ಳುತನವನ್ನು ಮತ್ತು ಆರ್ಥಿಕ ಧೋರಣೆಗಳಲ್ಲಿ ವಿಫಲತೆಯನ್ನು ಮಾತ್ರ. ಇನ್ನು ಹೇಳಿರದೇ ಇರುವ ಭಾಗವೆಂದರೆ, ವಿಶ್ವವಿದ್ಯಾಲಯಗಳಲ್ಲಿ ಅದರ ಸರ್ವಾಧಿಕಾರಶಾಹಿ ಮತ್ತು ಕೋಮುವಾದಿ ಹಸ್ತಕ್ಷೇಪಗಳ ಕೇಡು ತರುವಂತಹ ಸ್ವರೂಪ. ○

ನಿರಾಶಾದಾಯಕ ರೈಲ್ವೆ ಬಜೆಟ್

–ಸಿಪಿಐ(ಎಂ) ಪೊಲಿಟ್‌ಬ್ಯುರೊ ವಿಮರ್ಶೆ

ರೈಲ್ವೆ ಮಂತ್ರಿಗಳು ಈ ಬಾರಿ ಬಹುಶಃ **ಇದುವರೆಗಿನ ಅತ್ಯಂತ ದೀರ್ಘ ರೈಲ್ವೆ ಬಜೆಟ್ ಭಾಷಣ ಮಾಡಿದ್ದಾರೆ. ಆದರೂ ಈ ಭಾಷಣದಲ್ಲಿನ ಪ್ರಸ್ತಾವಗಳು ಭಾರತೀಯ ರೈಲ್ವೆಯಲ್ಲಿ ಎಲ್ಲವೂ ಚೆನ್ನಾಗಿದೆ ಎಂಬ ಭಾವನೆಯನ್ನೇನೂ ಉಂಟು ಮಾಡುತ್ತಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.**

ಬಜೆಟ್ ಮೊದಲೇ ಹಲವು ಬಾರಿ ಪ್ರಯಾಣ ಮತ್ತು ಸಾಗಾಣಿಕೆ ದರಗಳನ್ನು ಏರಿಸಿರುವುದರಿಂದ ಬಜೆಟ್‌ನಲ್ಲಿ ಇನ್ನಷ್ಟು ಏರಿಕೆಗಳನ್ನು ಪ್ರಕಟಿಸದಿರುವುದು ಸಹಜವೇ. ಭಾರತದ ಜನತೆ ರೈಲ್ವೆ ಸಂಪರ್ಕವನ್ನು ವಿಸ್ತಾರಗೊಳಿಸುವ ಪ್ರಶ್ನೆಯನ್ನು ಎತ್ತಿಕೊಳ್ಳುತ್ತದೆ, ಪ್ರಯಾಣಿಕರ ಸೌಲಭ್ಯಗಳನು ಗಮನಾರ್ಹವಾಗಿ ಹೆಚ್ಚಿಸುತ್ತದೆ ಎಂದು ನಿರೀಕ್ಷಿಸಿದ್ದರು. ಆದರೆ ಈ ಎರಡೂ ವಿಷಯಗಳಲ್ಲಿ ಈ ರೈಲ್ವೆ ಬಜೆಟ್ ಬಹಳ ನಿರಾಶಾದಾಯಕವಾಗಿದೆ.

ಬಹಳ ಮುಖ್ಯವಾಗಿ, ಅಪಘಾತಗಳ ಸಂಖ್ಯೆ ಆತಂಕಕಾರಿಯಾಗಿ ಹೆಚ್ಚುತ್ತಿರುವಾಗ, ಸುರಕ್ಷಿತತೆ-ಯ ಮಾನದಂಡಗಳ ಪಾಲನೆಗೆ ಇನ್ನೂ ಉತ್ತಮ ಕ್ರಮಗಳನ್ನು ಮತ್ತು ಅದಕ್ಕೆ ಹೆಚ್ಚಿನ ಹಣಕಾಸು ನೀಡಿಕೆಯನ್ನು ಪ್ರಕಟಿಸಬಹುದು ಎಂಬ ನಿರೀಕ್ಷೆಯಿತ್ತು. ದುರದೃಷ್ಟವಶಾತ್ ಬಜೆಟ್ ಇಂತಹ ಯಾವುದೇ ವಿಶ್ವಾಸವನ್ನು ಹೆಚ್ಚಿಸುವ ರೀತಿಯಲ್ಲಿ ಇಲ್ಲ. ಭಾರತೀಯ ರೈಲು ಜನತೆಗೆ ದೇಶವ್ಯಾಪಿ ಸಂಪರ್ಕಕ್ಕೆ, ಆಮೂಲಕ ದೇಶದ ಐಕ್ಯತೆಗೆ ಅತ್ಯಂತ ಮಹತ್ವದ ಕೊಂಡಿ ಎಂಬುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಸಂದರ್ಭದಲ್ಲಿ ನೆನಪಿಸಿದೆ.

ಬಜೆಟಿನ ಅತ್ಯಂತ ಕಳವಳಕಾರಿ ಅಂಶವೆಂದರೆ, ರೈಲ್ವೆ ಇಲಾಖೆಯ ಹಣಕಾಸು ಆರೋಗ್ಯ. ಕಳೆದ ವರ್ಷ ರೈಲ್ವೆಯ ಆದಾಯ ನಿರೀಕ್ಷೆಗಿಂತ ಬಹಳ ಕೆಳಗಿತ್ತು.. ಸಾಗಾಣಿಕೆ ಮತ್ತು ಪ್ರಯಾಣ ಆದಾಯಗಳೆರಡೂ ಗಮನಾರ್ಹವಾಗಿ ಇಳಿದಿವೆ. ಹಿಂದಿನ ಬಜೆಟ್ ಅಂದಾಜು ಮಾಡಿದ ಆದಾಯ ಮತ್ತು ಪರಿಷ್ಕತ ಆದಾಯದಲ್ಲಿ 17,000 ಕೋಟಿ ರೂ.ಗಳ ಅಂತರವಿದೆ. ಜತೆಗೆ ಏಳನೇ ವೇತನ ಆಯೋಗದ ಶಿಫಾರಸುಗಳ ಜಾರಿಗೆ 32,000 ಕೋಟಿ ರೂ.ಗಳು ಬೇಕು. ಅಂದರೆ ರೈಲ್ವೆ ಇಲಾಖೆ ಈ ಹಣಕಾಸು ವರ್ಷವನ್ನು ಸುಮಾರು 50,000 ಕೋಟಿ ರೂ.ಗಳ ಕೊರತೆಯೊಂದಿಗೆ ಆರಂಭಿಸುತ್ತದೆ.

ಈ ಕೊರತೆಯನ್ನು ನೀಗಿಸಬಹುದಷ್ಟೇ ಅಲ್ಲ, ಮಿಗುತೆಯೂ ಆಗಬಹುದೆಂಬ ರೈಲ್ವೆ ಮಂತ್ರಿಗಳ ನಿರೀಕ್ಷೆ ನಿಂತಿರುವುದು ಭಾರೀ ಪ್ರಮಾಣದ ಸಾರ್ವಜನಿಕ-ಖಾಸಗಿ ಭಾಗೀದಾರಿಕೆ(ಪಿಪಿಪಿ) ಮತ್ತು ಈಗ ರೈಲ್ವೆಯ ಬಳಿಯಿರುವ ಆಸ್ತಿಗಳ ಮಾರಾಟದ ಮೇಲೆ.

ಈ ಪಿಪಿಪಿ ಮಾಡೆಲ್ ರೈಲು ವ್ಯವಸ್ಥೆಯನ್ನು ಉತ್ತಮ ಪಡಿಸುವುದಿಲ್ಲ ಎಂಬುದು ಜಗತ್ತಿನಾದ್ಯಂತ ಸಾಬೀತಾಗಿದೆ. ಇನ್ನು, ಆಸ್ತಿಗಳನ್ನು ಮಾರುವುದು ಎಂದರೆ ದೈನಂದಿನ ಖರ್ಚುಗಳಿಗೆ ಕುಟುಂಬದ ಸಾಮಾನುಗಳನ್ನು ಮಾರಿದಂತೆಯೇ. ಇದು ಆರ್ಥಿಕ ದೃಷ್ಟಿಯಿಂದಲೂ ಸರಿಯಾದ್ದಲ್ಲ, ಸಾಮಾನ್ಯ ಜ್ಞಾನದ ದೃಷ್ಟಿಯಿಂದಲೂ ಸರಿಯಾದ್ದಲ್ಲ.

ಜನತೆಯ ಮೇಲೆ ಬೀಳುವ ಹೆಚ್ಚಿನ ಹೊರೆ, ರೈಲ್ವೆಯ ಆಸ್ತಿಗಳ ಖಾಸಗೀಕರಣ ಮತ್ತು ರೈಲ್ವೆ ಕಾರ್ಮಿಕರ ಬಗ್ಗೆ ಜವಾಬ್ದಾರಿ ಕಳಚಿ ಕೊಳ್ಳುತ್ತಿರುವುದು, ಇವೆಲ್ಲ ಸೇರಿ ಪರಿಹಾರಕ್ಕಾಗಿ ಮೊರೆಯಿಟ್ಟಿರುವ ಭಾರತೀಯ ಜನತೆಗೆ ಪರಿಹಾರದ ಬದಲು, ಅವರ ಮೇಲೆ ಮತ್ತಷ್ಟು ದಾಳಿಗಳನ್ನು ಹರಿಯ ಬಿಡುತ್ತವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ವಿಶ್ಲೇಷಿಸಿದೆ.

* ಈ ಮೊದಲೇ ಹಲವು ಬಾರಿ ಪ್ರಯಾಣ ಮತ್ತು ಸಾಗಾಣಿಕೆ ದರಗಳನ್ನು ಏರಿಸಿರುವುದರಿಂದ ಬಜೆಟ್‌ನಲ್ಲಿ ಇನ್ನಷ್ಟು ಏರಿಕೆಯ ಪ್ರಸ್ತಾಪ ಇಲ್ಲ.
* ಸುರಕ್ಷಿತತೆಗೆ ಹೆಚ್ಚಿನ ಹಣಕಾಸು ನೀಡಿಕೆಯ ವಿಶ್ವಾಸ ಇಲ್ಲ.
* ಹಣಕಾಸು ಆರೋಗ್ಯ ಕಳವಳಕಾರಿ. ಭಾರತೀಯ ರೈಲ್ವೆ ಈ ವರ್ಷವನ್ನು 50,000 ಕೋಟಿ ರೂ.ಗಳ ಕೊರತೆಯೊಂದಿಗೆ ಆರಂಭಿಸಬೇಕಾಗಿದೆ.
* ಪಿ.ಪಿ.ಪಿ. ಮತ್ತು ರೈಲ್ವೆ ಆಸ್ತಿಗಳ ಮಾರಾಟದ ಮೇಲೆಯೇ ಅಪಾಯಕಾರಿ ಒತ್ತು.
* ರೈಲ್ವೆ ಕಾರ್ಮಿಕರ ಕಲ್ಯಾಣದ ಉಪಚಾರದ ಮಾತಷ್ಟೇ, ಕೃತಿ ತದ್ವಿರುದ್ಧ



ಆದ್ದರಿಂದ ಈ ಬಾರಿಯೂ ಇತ್ತೀಚಿನ ವರ್ಷಗಳಲ್ಲಿ ಕಂಡಿರುವಂತೆ, ರೈಲ್ವೆ ಮಂತ್ರಿಗಳು ಪ್ರಕಟಿಸುವ ಭಾರೀ ಭಾರೀ ಯೋಜನೆಗಳು ಹೆಚ್ಚಿನವು ಕಾಗದದ ಮೇಲೆಯೇ ಉಳಿಯುತ್ತವೆ.

ಇನ್ನೊಂದು ಕಳವಳಕಾರಿ ಸಂಗತಿಯೆಂದರೆ, ರೈಲ್ವೆ ಮಂತ್ರಿಗಳು ರೈಲ್ವೆ ನೌಕರರು ಭಾರತೀಯ ರೈಲ್ವೆಯ ಬೆನ್ನೆಲುಬು ಎಂದು ಹಾಡಿ ಹೊಗಳಿದರೂ, ಅದು ಕೇವಲ ಬಾಯುಪಚಾರಕ್ಕಷ್ಟೇ. ಏಕೆಂದರೆ, ರೈಲ್ವೆ ಕಾರ್ಮಿಕರ ಕಲ್ಯಾಣವನ್ನು ಉತ್ತಮ ಪಡಿಸುವುದಿರಲಿ, ಅದನ್ನು ಕಾಯ್ದುಕೊಳ್ಳುವುದಕ್ಕೂ ಬಜೆಟ್‌ನಲ್ಲಿ ಸುಮಾರಾಗಿ ಏನೂ ಇಲ್ಲ.

ಹೆಚ್ಚಿನ ಸೇವೆಗಳನ್ನು ಈಗಾಗಲೇ ಖಾಸಗೀಕರಿಸಲಾಗಿದೆ. ಇನ್ನುಳಿದ ಕೆಲವೇ ಸೇವೆಗಳು ಕೂಡ ಪಿಪಿಪಿ ಮಾಡೆಲ್ ಪ್ರವೇಶಿಸುತ್ತವೆ. ಈ ಮಾಡೆಲ್‌ನಲ್ಲಿನ ಸೇವೆಗಳನ್ನು ಒದಗಿಸುವ ಕಾರ್ಮಿಕರಿಗೆ ಯಾವುದೇ ರಕ್ಷಣೆಯಿಲ್ಲ, ಕೆಲವೊಮ್ಮೆ ಕನಿಷ್ಟ ಕೂಲಿಯೂ ಸಿಗುವುದಿಲ್ಲ. ಇದು ಭಾರತೀಯ ರೈಲ್ವೆಯ ಭವಿಷ್ಯದ ಆರೋಗ್ಯಕ್ಕೆ ಒಳಿತಲ್ಲ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಭಾರತೀಯ ರೈಲ್ವೆಯ ಪ್ರಪ್ರಥಮ ಗುರಿ ಜನತೆಗೆ ಉತ್ತಮೋತ್ತಮ ಸೇವೆಗಳನ್ನು ಒದಗಿಸುವುದು ಆಗಿರಬೇಕೇ ಹೊರತು, ಅದರ ಆದಾಯ ಮತ್ತು ಖರ್ಚುಗಳನ್ನು ಸರಿದೂಗಿಸುವ ಲೆಕ್ಕಾಚಾರದ ಕಸರತ್ತಿನ ಮಟ್ಟಿಗಷ್ಟೇ ಇಳಿಯಬಾರದು ಎಂದು ಸಿಪಿಐ(ಎಂ) ಸದಾ ಆಗ್ರಹಿಸುತ್ತ ಬಂದಿದೆ. ನಾವೀಗ ಸಾಮಾನ್ಯ ಬಜೆಟ್‌ಗೆ ಕಾಯಬೇಕಾಗಿದೆ, ಅದರಲ್ಲಿ ರೈಲ್ವೆಗೆ ' ಬಜೆಟ್ ಬೆಂಬಲ ಏನಾದರೂ ಗಮನಾರ್ಹವಾಗಿ ಉತ್ತಮಗೊಳ್ಳುತ್ತದೆಯೇ ಎಂದು ನೋಡಬೇಕಾಗಿದೆ. ಹಣಕಾಸು ಮಿತಿಗಳು ಮತ್ತು ಒಟ್ಟಾರೆಯಾಗಿ ಭಾರತೀಯ ಆರ್ಥಿಕದ ನಿಧಾನಗತಿ ನೋಡಿದರೆ, ಈ ನಿರೀಕ್ಷೆಯನ್ನೂ ಇಟ್ಟುಕೊಳ್ಳುವಂತಿಲ್ಲ

ಇದರ ಪರಿಣಾಮವಾಗಿ ಜನತೆಯ ಮೇಲೆ ಬೀಳುವ ಹೆಚ್ಚಿನ ಹೊರೆ, ರೈಲ್ವೆಯ ಆಸ್ತಿಗಳ ಖಾಸಗೀಕರಣ ಮತ್ತು ರೈಲ್ವೆ ಕಾರ್ಮಿಕರ ಬಗ್ಗೆ ಜವಾಬ್ದಾರ ಕಳಚಿ ಕೊಳ್ಳುತ್ತಿರುವುದು, ಇವೆಲ್ಲ ಸೇರಿ ಪರಿಹಾರಕ್ಕಾಗಿ ಮೊರೆಯಿಟ್ಟಿರುವ ಭಾರತೀಯ ಜನತೆಗೆ ಪರಿಹಾರದ ಬದಲು, ಅವರ ಮೇಲೆ ಮತ್ತಷ್ಟು ದಾಳಿಗಳನ್ನು ಹರಿಯ ಬಿಡುತ್ತವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ವಿಶ್ಲೇಷಿಸಿದೆ. ○

ಜಿಲ್ಲಾ ಪಂಚಾಯತ್ ಚುನಾವಣೆ; ಸಿಪಿಐ(ಎಂ) ಪಡೆದ ಮತಗಳು

ಆವರಣದಲ್ಲಿ ಸಿಪಿಐ(ಎಂ) ಪಡೆದ ಸ್ಥಾನ

ದಕ್ಷಿಣ ಕನ್ನಡ ಜಿಲ್ಲೆ					
ಕ್ಷೇತ್ರ	ಅಭ್ಯರ್ಥಿ	ಸಿಪಿಐ(ಎಂ)	ಕಾಂಗ್ರೆಸ್	ಬಿಜೆಪಿ	ಗೆಲುವು
ಮಂಗಳೂರು ತಾ.					
ಪುತ್ತಿಗೆ	ಕೆ. ಯಾದವಶೆಟ್ಟಿ	1391(4)	7073	7164	ಬಿಜೆಪಿ
ಶಿರ್ತಾಡಿ	ಮೋಹಿನಿ	1217(3)	7769	9412	ಬಿಜೆಪಿ
ಎಡಪದವು	ಕೆ. ಸದಾಶಿವ ಭಟ್	1264(3)	8307	8465	ಬಿಜೆಪಿ
ಸೋಮೇಶ್ವರ	ಶಾಲಿನಿ ಎಸ್.ಪೂಜಾರಿ	2113(3)	9331	9846	ಬಿಜೆಪಿ
ಬಂಟ್ವಾಳ ತಾ.					
ಕೋಲ್ನಾಡು	ರಾಮಕೃಷ್ಣ	289(5)	11129	9864	ಕಾಂಗ್ರೆಸ್
ಬೆಳ್ತಂಗಡಿ ತಾ.					
ಲಾಯಿಲ	ರೋಹಿನಿ	352(2)	6885	11743	ಬಿಜೆಪಿ
ಧರ್ಮಸ್ಥಳ	ವಿಠಲ ಮಲೆಕುಡಿಯ	2203(2)	7309	9137	ಬಿಜೆಪಿ

ಕೋಲಾರ ಜಿಲ್ಲೆ						
ಕ್ಷೇತ್ರ	ಅಭ್ಯರ್ಥಿ	ಸಿಪಿಐ(ಎಂ)	ಕಾಂಗ್ರೆಸ್	ಬಿಜೆಪಿ	ಜೆಡಿಎಸ್	ಗೆಲುವು
ಕುಡಿಯನೂರು	**ಬಿ.ವಿ.ಸಂಪಂಗಿ**	361	7471	–	12551	ಜೆಡಿಎಸ್
ಡಿ. ಕರಪನಹಳ್ಳಿ	ಪಿಚ್ಚಕಣ್ಣು	506	12134	13693	–	ಬಿಜೆಪಿ
ಗೌನಿಪಲ್ಲಿ	ಮಂಜುಳಾ ವೆಂಕಟೇಶ್	359	10820	–	11965	ಜೆಡಿಎಸ್
ದಳಸನೂರು	ಎಂ. ರಾಮಪ್ಪ	252	10637	–	11429	ಜೆಡಿಎಸ್
ಹುತ್ತೂರು	ವೆಂಕಟಲಕ್ಷ್ಮಮ್ಮ	380	9561	–	9410	ಕಾಂಗ್ರೆಸ್

ಗದಗ ಜಿಲ್ಲೆ	ರೋಣ ತಾ.					
ಕ್ಷೇತ್ರ	ಅಭ್ಯರ್ಥಿ	ಸಿಪಿಐ(ಎಂ)	ಕಾಂಗ್ರೆಸ್	ಬಿಜೆಪಿ	ಜೆಡಿಎಸ್	ಗೆಲುವು
ಬೆಳವಣಿಕೆ	ಮಹೇಶ್ ಹಿರೇಮಠ	950(3)	8540	9044	12551	ಬಿಜೆಪಿ
ನಿಡಗುಂಡಿ	ಕರಿಯಮ್ಮ ಗುರಿಕಾರ	554(3)	8632	8277	–	ಕಾಂಗ್ರೆಸ್

ಉತ್ತರ ಕನ್ನಡ ಜಿಲ್ಲೆ						
ಕ್ಷೇತ್ರ	ಅಭ್ಯರ್ಥಿ	ಸಿಪಿಐ(ಎಂ)	ಕಾಂಗ್ರೆಸ್	ಬಿಜೆಪಿ	ಪಕ್ಷೇತರ	ಗೆಲುವು
ಮಲ್ಲಾಪುರ	ನಾಯ್ಕ ಶಂಕರ ವಿಷ್ಣು	449	5775		6318	ಪಕ್ಷೇತರ
ಜೊಯಿಡಾ	ಪ್ರೇಮಾನಂದ ವೆಳಿಪ್	721	5637	3181		ಕಾಂಗ್ರೆಸ್
ಪಾಳ	ಚೆನ್ನವ್ವ ಭೀಮಣ್ಣ ವಡ್ಡರ್		7741	6455		ಕಾಂಗ್ರೆಸ್
ತೇರಗಾಂ	ಎಂ.ಆರ್.ಮೊಯಿದ್ದೀನ್		5837	4214		ಕಾಂಗ್ರೆಸ್
ಕಾವಲವಾಡ	ಶಶಿಕಲಾ ಧರಣೇಂದ್ರ.ಬಿ		6412	4184		ಕಾಂಗ್ರೆಸ್

ಮೈಸೂರು ಜಿಲ್ಲೆ						
ಕ್ಷೇತ್ರ	ಅಭ್ಯರ್ಥಿ	ಸಿಪಿಐ(ಎಂ)	ಕಾಂಗ್ರೆಸ್	ಬಿಜೆಪಿ	ಜೆಡಿಎಸ್	ಗೆಲುವು
ಹನಗೂಡು	**ಜೆ.ಕೆ. ತಿಮ್ಮಣ್ಣ**	505	9934	–	11369	ಜೆಡಿಎಸ್

ಕೊಡಗು ಜಿಲ್ಲೆ						
ಕ್ಷೇತ್ರ	ಅಭ್ಯರ್ಥಿ	ಸಿಪಿಐ(ಎಂ)	ಕಾಂಗ್ರೆಸ್	ಬಿಜೆಪಿ	ಜೆಡಿಎಸ್	ಗೆಲುವು
ಸಿದ್ದಾಪುರ	ಶಿಜಿ	699(3)	3754	3157	–	ಕಾಂಗ್ರೆಸ್

ರಾಯಚೂರು ಜಿಲ್ಲೆ						
ಕ್ಷೇತ್ರ	ಅಭ್ಯರ್ಥಿ	ಸಿಪಿಐ(ಎಂ)	ಕಾಂಗ್ರೆಸ್	ಬಿಜೆಪಿ	ಜೆಡಿಎಸ್	ಗೆಲುವು
ಚಂದ್ರಬಂಡ	ಕರಿಯಪ್ಪ ಅಚ್ಚೋಳಿ	351	6764	6848	–	ಬಿಜೆಪಿ

ಮಂಡ್ಯ ಜಿಲ್ಲೆ						
ಕ್ಷೇತ್ರ	ಅಭ್ಯರ್ಥಿ	ಸಿಪಿಐ(ಎಂ)	ಕಾಂಗ್ರೆಸ್	ಬಿಜೆಪಿ	ಜೆಡಿಎಸ್	ಗೆಲುವು
ತಳಗವಾಡಿ	ಎಂ. ಪುಟ್ಟಮಾದಯ್ಯ	977	11776		9139	ಕಾಂಗ್ರೆಸ್

ಬೆಂಗಳೂರು ನಗರ ಜಿಲ್ಲೆ						
ಕ್ಷೇತ್ರ	ಅಭ್ಯರ್ಥಿ	ಸಿಪಿಐ(ಎಂ)	ಕಾಂಗ್ರೆಸ್	ಬಿಜೆಪಿ	ಜೆಡಿಎಸ್	ಗೆಲುವು
ಸಮಂದೂರು	**ಮಧುರಾಜ್**	367	6781	8342	–	ಬಿಜೆಪಿ

ಉಡುಪಿ ಜಿಲ್ಲೆ					
ಕ್ಷೇತ್ರ	ಅಭ್ಯರ್ಥಿ	ಸಿಪಿಐ(ಎಂ)	ಕಾಂಗ್ರೆಸ್	ಬಿಜೆಪಿ	ಗೆಲುವು
ತಾಸ್ರಿ	ಯಮುನಾ ಶ್ರೀನಿವಾಸ್.ಪಿ	1229	8300	8929	ಬಿಜೆಪಿ
ವಂಡ್ಸೆ	ಸುರೇಶ ಕಲ್ಲಾಗರ	1419	10320	10476	ಬಿಜೆಪಿ
ಕಾವ್ರಾಡಿ	ಪೂರ್ಣಿಮಾ	1272	8382	7633	ಕಾಂಗ್ರೆಸ್
ಕೋಟೇಶ್ವರ	ಜ್ಯೋತಿ ಉಪಾಧ್ಯ	1272	6523	10948	ಬಿಜೆಪಿ

ಬಳ್ಳಾರಿ ಜಿಲ್ಲೆ					
ಕ್ಷೇತ್ರ	ಅಭ್ಯರ್ಥಿ	ಸಿಪಿಐ(ಎಂ)	ಕಾಂಗ್ರೆಸ್	ಬಿಜೆಪಿ	ಗೆಲುವು
ಬಾದನಹಟ್ಟಿ	ಲಲಿತಮ್ಮ	472	8586	11671	ಬಿಜೆಪಿ
ಪಾಪಿನಾಯಕನಹಳ್ಳಿ	ಯು.ಮಹೇಶ್ವರಿ	462	8340	9018	ಬಿಜೆಪಿ
ಹಂಪಾಪಟ್ನ	ಬಿ.ಮಾಳಮ್ಮ	425	4229	7595	ಬಿಜೆಪಿ
ಕೋಳೂರು	ಗಾಜಿಲಿಂಗಪ್ಪ	132	12179	10830	ಕಾಂಗ್ರೆಸ್

ಕೊಪ್ಪಳ ಜಿಲ್ಲೆ					
ಕ್ಷೇತ್ರ	ಅಭ್ಯರ್ಥಿ	ಸಿಪಿಐ(ಎಂ)	ಕಾಂಗ್ರೆಸ್	ಬಿಜೆಪಿ	ಗೆಲುವು
ಆನೆಗುಂದಿ	ಮರಿಯಮ್ಮ ದುರ್ಗಪ್ಪ	705(4)	7937		ಕಾಂಗ್ರೆಸ್
ಹೇರೂರು	ಬಸವರಾಜ್ ಮರಕುಂಬಿ	374(5)	9248	7488	ಕಾಂಗ್ರೆಸ್
ಕೊರಡಕೇರಾ	ಗಂಗಮ್ಮ ಕಮತರ		9007	9176	ಬಿಜೆಪಿ

ಚಿಕ್ಕಬಳ್ಳಾಪುರ ಜಿಲ್ಲೆ						
ಕ್ಷೇತ್ರ	ಅಭ್ಯರ್ಥಿ	ಸಿಪಿಐ(ಎಂ)	ಕಾಂಗ್ರೆಸ್	ಬಿಜೆಪಿ	ಜೆಡಿಎಸ್	ಗೆಲುವು
ಬಾಗೇಪಲ್ಲಿ ಕಸಬಾ	**ವಿ. ನಾರಾಯಣಮ್ಮ**	**8604**	**8262(2)**	–	–	ಸಿಪಿಐ(ಎಂ)
ಗೂಳೂರು	ಚೆನ್ನರಾಯಪ್ಪ	7656(2)	12343	–	–	ಕಾಂಗ್ರೆಸ್
ಮಿಟ್ಟೇಮರಿ	ಪಿ. ಮಂಜುನಾಥ	7835(2)	10781	–	–	ಕಾಂಗ್ರೆಸ್
ಚೇಳೂರು	ಪಾತಿಮಾಭೀ	626(3)	11704	–	10630	ಕಾಂಗ್ರೆಸ್
ಗುಡಿಬಂಡೆ ತಾ.						
ಬೀಚಗಾನಹಳ್ಳಿ	ಎಂ.ಎನ್. ವರಲಕ್ಷ್ಮಿ	5620(2)	7319	–	–	ಕಾಂಗ್ರೆಸ್
ಸೋಮೇನಹಳ್ಳಿ	ಗೌತಮಿ	4893(2)	5361	–	–	ಕಾಂಗ್ರೆಸ್
ಗೌರಿಬಿದನೂರು ತಾ.						
ನಗರಗೆರೆ	ಆದಿಲಕ್ಷ್ಮಮ್ಮ		11516	11743	–	ಬಿಜೆಪಿ
ಡಿ. ಪಾಳ್ಯ	ಲಕ್ಷ್ಮಮ್ಮ		11135	7988	–	ಕಾಂಗ್ರೆಸ್
ಹಿರೆಬಿದನೂರು	ಶ್ರೀನಿವಾಸ್.ಜಿ.ಎನ್		9439	7732	–	ಕಾಂಗ್ರೆಸ್
ಹೊಸೂರು	ಆರ್.ಎನ್.ರಾಜು		11764	9756		ಕಾಂಗ್ರೆಸ್
ಚಿಕ್ಕಬಳ್ಳಾಪುರ ತಾ.						
ಮಂಚನಬಲೆ	ಮಧುರ		14132		11520	ಕಾಂಗ್ರೆಸ್
ಶಿಡ್ಲಘಟ್ಟ ತಾ.						
ಗಂಜಿಗುಂಟೇ	ಸದಾನಂದಚಾರಿ		8699		10254	ಜೆಡಿಎಸ್
ಚಿಂತಾಮಣಿ ತಾ.						
ಊಲವಾಡಿ	ಲಕ್ಷ್ಮೀನಾರಾಯಣರೆಡ್ಡಿ		12685		8687	ಕಾಂಗ್ರೆಸ್



ವಿ. ನಾರಾಯಣಮ್ಮ
(ಕಸಬಾ, ಬಾಗೇಪಲ್ಲಿ ತಾ.)
ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತ್



ಗಾಯಿತ್ರಮ
(ತಿರುಮಣಿ ಕ್ಷೇತ್ರ)
ಗುಡಿಬಂಡೆ ತಾ. ಪಂಚಾಯತ್



ಜಯಲಕ್ಷ್ಮಮ್ಮ
(ಪರಗೋಡು ಕ್ಷೇತ್ರ)
ಬಾಗೇಪಲ್ಲಿ ತಾ. ಪಂಚಾಯತ್

ತಾಲ್ಲೂಕು ಪಂಚಾಯತ್ ಚುನಾವಣೆ; ಸಿಪಿಐ(ಎಂ) ಪಡೆದ ಮತಗಳು

ಆವರಣದಲ್ಲಿ ಸಿಪಿಐ(ಎಂ) ಪಡೆದ ಸ್ಥಾನ

ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕು

ಕ್ಷೇತ್ರ	ಅಭ್ಯರ್ಥಿ	ಸಿಪಿಐ(ಎಂ)	ಕಾಂಗ್ರೆಸ್	ಬಿಜೆಪಿ	ಜೆಡಿಎಸ್	ಇತರರು	ಗೆಲುವು
ಪರಗೋಡು	ಜಯಲಕ್ಷ್ಮಮ್ಮ	2683	1217	–	2360	–	ಸಿಪಿಐ(ಎಂ)
ಪಾತಪಾಳ್ಯ	ಸುಧಾಕರರೆಡ್ಡಿ	3445	2300	140	830	273	ಸಿಪಿಐ(ಎಂ)
ಯಲ್ಲಂಪಲ್ಲಿ	ಶ್ರೀರಾಮನಾಯಕ	2348	2014	118	1416	268	ಸಿಪಿಐ(ಎಂ)
ನಲಪರೆಡ್ಡಿಪಲ್ಲಿ	ಎಸ್.ಜಿ.ಕುಮಾರಿ	1274(3)	2226	239	1620		ಕಾಂಗ್ರೆಸ್
ದೇವರಗುಡಿಪಲ್ಲಿ	ವೈ.ಶಶಿಕಲಾ	2075(2)	2289	181	1382		ಕಾಂಗ್ರೆಸ್
ಗೂಳೂರು	ಮಂಜುಳ	1168(2)	2102	145	405	1024	ಕಾಂಗ್ರೆಸ್
ಕೊತ್ತಕೋಟೆ	ಟಿ.ಗಾಯತ್ರಿ	1610(2)	2899	116	1277	112	ಕಾಂಗ್ರೆಸ್
ಗೊರ್ತಪಲ್ಲಿ	ಜಿ.ಕೃಷ್ಣಪ್ಪ	2025(2)	3663	–	–	563	ಕಾಂಗ್ರೆಸ್
ಮಿಟ್ಟೇಮರಿ	ವಿಮಲಮ್ಮ	2224(2)	3100	155	1749	57	ಕಾಂಗ್ರೆಸ್
ಸೋಮನಾಥಪುರ	ಮದ್ದಿರೆಡ್ಡಿ	2033(2)	2471	170	1644	273	ಕಾಂಗ್ರೆಸ್
ಪೋಲನಾಯಕನಪಲ್ಲಿ	ಸಾಲೆಪ್ಪ	2170(3)	2744		2190		ಕಾಂಗ್ರೆಸ್
ಚೇಳೂರು	ನಾರಾಯಣರೆಡ್ಡಿ	105	2340	119	2532	81	ಜೆಡಿಎಸ್
ಪಾಳ್ಯಕೆರೆ	ರತ್ನಮ್ಮ	137(4)	2405	146	2778		ಜೆಡಿಎಸ್
ಪುಲಿಗಲ್	ಸಾವಿತ್ರಮ್ಮ	253(3)	3064	147	–	2720	ಕಾಂಗ್ರೆಸ್
ಚಾಕವೇಲು	ವಿ.ಬಾಲಕೃಷ್ಣ	108(4)	1782	125	2051	2603	ಪಕ್ಷೇತರರು
ಬಿಳ್ಳೂರು	ಸುಬ್ಬಾರೆಡ್ಡಿ	1593(3)	2094	99	1848		ಕಾಂಗ್ರೆಸ್

ಗೌರಿಬಿದನೂರು ತಾಲ್ಲೂಕು

ಮೇಳ್ಯ	ಮೋಹನ್‌ರಾವ್	2393	2178	ಕಾಂಗ್ರೆಸ್
ಡಿ.ಪಾಳ್ಯ	ರತ್ನಮ್ಮ	2619	2235	ಕಾಂಗ್ರೆಸ್
ನಕ್ಕಲಹಳ್ಳಿ	ವೆಂಕಟಸ್ವಾಮಿ	3044	2756	ಕಾಂಗ್ರೆಸ್
ಹೊಸೂರು	ಲಕ್ಷ್ಮೀಪತಿ	3185	2148	ಕಾಂಗ್ರೆಸ್

ಗುಡಿಬಂಡೆ ತಾಲ್ಲೂಕು

ಯಲ್ಲೋಡು	ಜಯರಾಮರೆಡ್ಡಿ	1354	1206			ಸಿಪಿಐ(ಎಂ)
ಪೊಲಂಪಲ್ಲಿ	ಮಂಜುನಾಥರೆಡ್ಡಿ	890		690		ಸಿಪಿಐ(ಎಂ)
ತಿರುಮಣಿ	ಗಾಯಿತ್ರಮ್ಮ	610	586			ಸಿಪಿಐ(ಎಂ)
ಹಂಪಸಂದ್ರ	ಚಾಗಣ್ಣ	1528	1757			ಕಾಂಗ್ರೆಸ್
ಚೆಂಡೂರು	ಗೋವಿಂದಪ್ಪ	1218	1436			ಕಾಂಗ್ರೆಸ್
ಬೀಚಗಾನಹಳ್ಳಿ	ಸೌಂದರ್ಯ	981	1156			ಕಾಂಗ್ರೆಸ್
ಉಲ್ಲೋಡು	ಗಂಗಮ್ಮ		1214		990	ಕಾಂಗ್ರೆಸ್
ವರ್ಲಕೊಂಡ	ಕೆ.ಶ್ರೀವಾಣಿ		1202		938	ಕಾಂಗ್ರೆಸ್
ದೊಡ್ಡನಂಚರ್ಲು	ಗಾಯಿತ್ರಮ್ಮ		1031	445		ಪಕ್ಷೇತರರು
ಸೊಮೇನಹಳ್ಳಿ	ಗೌರಮ್ಮ	562			563	ಪಕ್ಷೇತರರು
ಕಾಟೇನಹಳ್ಳಿ	ವೆಂಕಟೇಶಪ್ಪ	666			1055	ಪಕ್ಷೇತರರು

ಚಿಂತಾಮಣಿ ತಾಲ್ಲೂಕು

ಆನೂರು	ಕೃಷ್ಣಪ್ಪ	2895	2184	ಕಾಂಗ್ರೆಸ್
ಕುರುಬೂರು	ಆಂಜಪ್ಪ	2941	2094	ಕಾಂಗ್ರೆಸ್
ಕಂಚಾರ್ಲಹಳ್ಳಿ	ವೆಂಕಟರವಣಪ್ಪ	2120	2115	ಕಾಂಗ್ರೆಸ್



ಜಯರಾಮರೆಡ್ಡಿ ಯಲ್ಲೋಡು ಕ್ಷೇತ್ರ ಗುಡಿಬಂಡೆ ತಾಲೂಕು ಪಂಚಾಯತ್



ಮಂಜುನಾಥರೆಡ್ಡಿ ಪೊಲಂಪಲ್ಲಿ ಕ್ಷೇತ್ರ ಗುಡಿಬಂಡೆ ತಾಲೂಕು ಪಂಚಾಯತ್



ಸುಧಾಕರರೆಡ್ಡಿ ಪಾತಪಾಳ್ಯ ಕ್ಷೇತ್ರ, ಬಾಗೇಪಲ್ಲಿ ತಾಲೂಕು ಪಂಚಾಯತ್,



ಶ್ರೀರಾಮನಾಯಕ ಯಲ್ಲಂಪಲ್ಲಿ ಕೇತ್ರ, ಬಾಗೇಪಲ್ಲಿ ತಾಲೂಕು ಪಂಚಾಯತ್,

ಕೋಲಾರ ಜಿಲ್ಲೆ

ಎಸ್.ಅಗ್ರಹಾರ	ಗಂಗಮ್ಮ	1373	2302		1884	ಕಾಂಗ್ರೆಸ್
ಜನ್ನಘಟ್ಟ	ಎನ್.ಯಲ್ಲಪ್ಪ	86	2666		3143	ಜೆಡಿಎಸ್
ಸುಗಟೂರು	ನಾರಾಯಣಪ್ಪ	129	2233		3373	ಜೆಡಿಎಸ್
ಅರಹಳ್ಳಿ	ನಾಗರಾಜಪ್ಪ	154	3469	3947		ಕಾಂಗ್ರೆಸ್
ಹುತ್ತೂರು	ಟಿ.ಸುಬ್ರಮಣಿ	42	2028		2452	ಜೆಡಿಎಸ್
ಶಾಪೂರು	ಎಂ.ರಮೇಶ್	219		1508	1923	ಜೆಡಿಎಸ್
ಗದ್ದೆಕಣ್ಣೂರು	ಸುಶೀಲ	99	1999		1805	ಕಾಂಗ್ರೆಸ್
ದಳಸನೂರು	ಬೈಯಮ್ಮ	117	3412		4038	ಜೆಡಿಎಸ್
ಚಲ್ದಿಗಾನಹಳ್ಳಿ	ಜಿ.ರತ್ನಮ್ಮ	240	3195		4233	ಜೆಡಿಎಸ್
ಜೆ.ತಿಮ್ಮಸಂದ್ರ	ನಾರಾಯಣಮ್ಮ	128	3594		3315	ಕಾಂಗ್ರೆಸ್
ಬೈರಗಾನಹಳ್ಳಿ	ಎನ್.ನಾಗಭೂಷಣ್	59	3208		2805	ಕಾಂಗ್ರೆಸ್
ಗೌನಿಪಲ್ಲಿ	ಶ್ರೀನಿವಾಸ್	57	2329		2702	ಜೆಡಿಎಸ್
ನೆಲವಂಕಿ	ಎನ್.ವೀರಪ್ಪರೆಡ್ಡಿ	83	3107		3539	ಜೆಡಿಎಸ್
ಗೌಡತಾತನಗಡ್ಡ	ನಾರಾಯಣಮ್ಮ	107	2264		2794	ಜೆಡಿಎಸ್
ಅರಳೇರಿ	ಜಿ.ಸುಬ್ರಮಣಿ	141	1960		2040	ಜೆಡಿಎಸ್
ಹೆಬ್ಬಣಿ	ಸಿಂಧೂಚಂದ್ರಶೇಖರ್	485	2261		1675	ಕಾಂಗ್ರೆಸ್

ಉಡುಪಿ ಜಿಲ್ಲೆ

ತ್ರಾಸಿ(ಎಸ್.ಸಿ.)	ಶೀನ	210	2337	2635	ಬಿಜೆಪಿ
ಗಂಗೊಳ್ಳಿ	ಚಿಕ್ಕಮೊಗವೀರ	323	2679	2959	ಬಿಜೆಪಿ
ಹೆಮ್ಮಾಡಿ	ಸಂತೋಷ ದೇವಾಡಿಗ	662	3629	2898	ಕಾಂಗ್ರೆಸ್
ತಲ್ಲೂರು(ಹಿಂ.–'ಅ)	ಗೋಪಾಲ ಮಾವಿನಕೆರೆ	455	2664	3058	ಬಿಜೆಪಿ
ಮರವಂತೆ	ಸುಬ್ರಮಣ್ಯ ಆಚಾರ್	206	2522	1935	ಕಾಂಗ್ರೆಸ್
ಆಲೂರು	ನಾಗರತ್ನ ನಾಡ	412	2173	2805	ಬಿಜೆಪಿ
ನಾಡಾ	ರಾಜೀವ ಪಡುಕೋಣೆ	962	2544	2842	ಬಿಜೆಪಿ
ಕರ್ಕುಂಜೆ(ಹಿಂ–ಅ)	ಪಂಜು ಪೂಜಾರಿ	802	2228	1910	ಕಾಂಗ್ರೆಸ್
ಬಸ್ರೂರು(ಹಿಂ.–ಬ)	ರಾಜೀವ ಶೆಟ್ಟಿ	493	1723	3096	ಬಿಜೆಪಿ
ಕೋಣಿ	ಕಾಂಚನಮಾಲ	400	1235	2280	ಬಿಜೆಪಿ
ಕೋಟೇಶ್ವರ	ಜಯಂತಿ	247	1550	3273	ಬಿಜೆಪಿ

ಉಡುಪಿ ತಾ.

ಚಾಂತಾರು	ವಿಠ್ಠಲ್‌ಪೂಜಾರಿ.ಹೆಚ್	357	2299	2816	ಬಿಜೆಪಿ

ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ನೆಲ್ಲಿಕಾರು	ಜಲಜಾಕ್ಷಿ ಶೆಟ್ಟಿ	154(3)	2022	2212	ಬಿಜೆಪಿ
ಶಿರ್ತಾಡಿ	ವಿಜಯ	348(3)	1958	2525	ಬಿಜೆಪಿ
ಪಡುಮಾರ್ನಾಡು	ನೇಮಿರಾಜ್ ಬಲ್ಲಾಳ್	114(3)	2424	2167	ಕಾಂಗ್ರೆಸ್
ಬೆಳುವಾಯಿ	ಸುಂದರ	419(3)	1923	2222	ಬಿಜೆಪಿ
ಪಾಲಡ್ಕ	ಉಷಾ	692(4)	2598	3548	ಬಿಜೆಪಿ
ಬಡಗ ಎಡಪದವು	ಮಾಲತಿ	517(3)	1901	2886	ಬಿಜೆಪಿ
ತೆಂಕಮಿಜಾರು	ಲಕ್ಷ್ಮಿ	447(4)	1450	1428	ಕಾಂಗ್ರೆಸ್
ಹೊಸಬೆಟ್ಟು	ರಾಧ	355(4)	2309	2113	ಕಾಂಗ್ರೆಸ್
ಪಾವೂರು	ವಿಶ್ವನಾಥ ಪಾವೂರು	498(4)	1377	741	ಕಾಂಗ್ರೆಸ್
ಮುನ್ನೂರು	ಶಶಿಕಲ	938(3)	1708	1613	ಕಾಂಗ್ರೆಸ್
ಸೋಮೇಶ್ವರ 1	ನವೀನ್ ಕುಮಾರ್	955(3)	2635	3774	ಬಿಜೆಪಿ
ಸೋಮೇಶ್ವರ 2	ಜಯಂತ ನಾಯಕ್	227(3)	2024	2428	ಬಿಜೆಪಿ

ಬಂಟ್ವಾಳ

ಮಂಚಿ	ಆನಂದ ಶೆಟ್ಟಿಗಾರ್	115(4)	3261	2695	ಕಾಂಗ್ರೆಸ್
ಕುರ್ನಾಡು	ರಾಮಚಂದ್ರ	224(3)	2670	2686	ಬಿಜೆಪಿ
ಕೋಲ್ನಾಡು	ದೇವದಾಸ್	167(4)	3034	3434	ಬಿಜೆಪಿ
ಕನ್ಯಾನ	ಚನಿಯಪ್ಪ ನಾಯ್ಕ್	84(4)	2451	2053	ಕಾಂಗ್ರೆಸ್
ಕರೋಪಾಡಿ	ಅಣ್ಣಿ ಮೂಲ್ಯ	86(4)	2102	1516	ಕಾಂಗ್ರೆಸ್

ಬೆಳ್ತಂಗಡಿ

ಮಿತ್ತಬಾಗಿಲು	ಚನಿಯಪ್ಪಮಲೆಕುಡಿಯ	115(4)	2523	2504	ಕಾಂಗ್ರೆಸ್
ನೆರಿಯ	ವಸಂತ ನಡ	584(3)	2717	1611	ಕಾಂಗ್ರೆಸ್
ಧರ್ಮಸ್ಥಳ	ವೇದಾವತಿ	467(3)	1339	1769	ಬಿಜೆಪಿ
ಕೊಕ್ಕಡ	ಮೊಹಮ್ಮದ್ ಅನಾಸ್	1037(3)	2267	2945	ಬಿಜೆಪಿ
ಕಳೆಂಜ	ದೇವಕಿ	673(3)	1512	1644	ಬಿಜೆಪಿ
ಅರಸಿನಮಕ್ಕಿ	ಮಮತ	293(3)	2143	2062	ಕಾಂಗ್ರೆಸ್

ಪುಟ 10 ಕ್ಕೆ

ತಾಲ್ಲೂಕು ಪಂಚಾಯತ್ ಚುನಾವಣೆ

ಸಿಪಿಐ(ಎಂ) ಪಡೆದ ಮತಗಳು ಪುಟ 9 ರಿಂದ

ಕೊಪ್ಪಳ ಜಿಲ್ಲೆ, ಗಂಗಾವತಿ ತಾ.

ಆನೆಗುಂದಿ	ಶೇಷಪ್ಪ	62(5)	1195		2083	ಪಕ್ಷೇತರರು
ಚಿಕ್ಕಜಂತಕಲ್	ಶೇಕಮ್ಮ	793(3)	1992	1785		ಕಾಂಗ್ರೆಸ್
ಹೇರೂರು	ಗಾಳೆಪ್ಪ	166(3)	2461	2152		ಕಾಂಗ್ರೆಸ್
ಹಣವಾಳ	ಹುಸೇನಪ್ಪ ಕೆ.	171(4)	2572	2505		ಕಾಂಗ್ರೆಸ್
ಕೆಸರಟ್ಟಿ	ಪಾರ್ವತಿ	225(3)	2021	2277		ಬಿಜೆಪಿ
ವಡ್ಡರಹಟ್ಟಿ	ರಾಮಣ್ಣ	63(7)	1341		1945	ಪಕ್ಷೇತರರು
ಜಿರಾಳ	ಈಶಪ್ಪ	285(3)	1217	2426		ಬಿಜೆಪಿ

ಕುಷ್ಟಗಿ ತಾ.

ತಳುವಗೇರಾ	ಮಲ್ಲಿಕಾರ್ಜುನಗೌಡ			1725	1749	ಬಿಜೆಪಿ
ಕೊರಡಕೇರಾ	ಮಳಿಯಪ್ಪ ವಜ್ರಬಂಡಿ			2303	2327	ಬಿಜೆಪಿ
ಕಂದಕೂರು	ದೇವಮ್ಮ ಅಮಾಜಿ		2780	1902		ಕಾಂಗ್ರೆಸ್
ಬಿಜಕಲ್	ರಾಮಮ್ಮ ಗೌಂಡಿ		2171	3447		ಬಿಜೆಪಿ

ಬಳ್ಳಾರಿ ಜಿಲ್ಲೆ

ಬಾದನಹಟ್ಟಿ	ಗಾಳಿ ಬಸವರಾಜ	349	2062	2212			ಬಿಜೆಪಿ
ಶ್ರೀಧರಗಡ್ಡಿ				68	1879	2285	ಬಿಜೆಪಿ
ಕಡಲಬಾಳು	ಮಂಜುನಾಥ	107		1351	1053		ಬಿಜೆಪಿ
ಮರಬ್ಬಿಹಾಳು	ನಾಗಮ್ಮ	180		2676	2120		ಬಿಜೆಪಿ
ತಂಬ್ರಳ್ಳಿ	ಕೊಟ್ಟಿಗಿ ಮಲ್ಲಿಕಾರ್ಜುನ		82		1899	2310	ಜೆಡಿಎಸ್
ತೋರಣಗಲ್ಲು	ಎಂ.ಗೀತಾಸ್ವಾಮಿ	323	1979	2209			ಬಿಜೆಪಿ
ಬಾಗವಾಡಿ	ಈರಮ್ಮ	182		2173	2824		ಬಿಜೆಪಿ

ರಾಯಚೂರು ಜಿಲ್ಲೆ

ಜಾಲಹಳ್ಳಿ	ಶಬೀರ್	1184	1932	2364	ಬಿಜೆಪಿ
ಚಂದ್ರಬಂಡ	ರಂಗಪ್ಪ	153	1645	1769	ಬಿಜೆಪಿ
ಸಿಂಗನೂಡಿ	ಗಂಗಮ್ಮ	87	1287	2019	ಬಿಜೆಪಿ
ದೊಂಗರಾಂಪುರ	ಜಯಮ್ಮ	201	2694	2590	ಕಾಂಗ್ರೆಸ್
ಆತಕೂರು	ದೊಡ್ಡಲಕ್ಷ್ಮಣ	178	2543	2173	ಕಾಂಗ್ರೆಸ್

ಮಂಡ್ಯ ಜಿಲ್ಲೆ, ಮಳವಳ್ಳಿ ತಾ.

ಹುಸ್ಕೂರು	ಸರೋಜಮ್ಮ	118	3262		4179	ಜೆಡಿಎಸ್
ಅಗಸನಪುರ	ಮಂಜುಳಾ	116	3120		3968	ಜೆಡಿಎಸ್
ನೆಲಮಾಕನಹಳ್ಳಿ	ಸುಶೀಲಾ	228	3324		3022	ಕಾಂಗ್ರೆಸ್
ಹೊಸಹಳ್ಳಿ	ತಿಮ್ಮೇಗೌಡ	245	3014		2059	ಕಾಂಗ್ರೆಸ್
ತಳಗವಾದಿ	ನವೀನಾ ದೇವರಾಜ್	242	3028		3132	ಜೆಡಿಎಸ್

ಮದ್ದೂರು ತಾ.

ತೊರೆಶೆಟ್ಟಿಹಳ್ಳಿ	ಪದ್ಮಾ	260	2209		2795	ಜೆಡಿಎಸ್

ತುಮಕೂರು ಜಿಲ್ಲೆ

ಅರಸಿಕೆರೆ	ವೆಂಕಟರವಣಪ್ಪ	84(3)	3299		2075	ಕಾಂಗ್ರೆಸ್

ಕೊಡಗು ಜಿಲ್ಲೆ

ಕರಡಿಗೋಡು	ಹೆಚ್.ವಿ.ರಮೇಶ್	569(3)	1147	1915	ಬಿಜೆಪಿ

ವಿಜಯಪುರ ಜಿಲ್ಲೆ, ವಿಜಯಪುರ ತಾ.

ಅರಿಕೇರಿ	ಸುಮಿತ್ರಾ	796(3)	2384	2308		ಕಾಂಗ್ರೆಸ್

ಬಸವನ ಬಾ. ತಾ

ಹುಣಿಶ್ಯಾಳು	ಸವಿತಾ	100		1919	1349	ಬಿಜೆಪಿ

ಉತ್ತರ ಕನ್ನಡ

ಸುಗಾವಿ	ವೆಂಟಕೇಶ್‌ನಾಯ್ಕ	151	2522		2076	ಕಾಂಗ್ರೆಸ್

ಬೀದರ್ ಜಿಲ್ಲೆ

ಹುಮ್ನಾಬಾದ್	ಏವಣ್ಣಅರ್ಜುನ ಡಾಂಗೆ

ಗದಗ ಜಿಲ್ಲೆ

ಗೋಗೇರಿ	ಚವ್ಹಾಣ ರೇಣವ್ವ	148(4)	2516	2958	ಬಿಜೆಪಿ
ಬೆಳವಣಿಕೆ	ಬಸವರಾಜ ವೀರಪ್ಪ	851(3)	1993	2245	ಬಿಜೆಪಿ

ಬೆಂಗಳೂರು ನಗರ, ಆನೇಕಲ್ ತಾ.

ಸಮಂದೂರು	ಶಿವರಾಜ್	226	3054	2319		ಕಾಂಗ್ರೆಸ್
ಮಯಸಂದ್ರ	ಅರ್ಚನ	76		1814	1789	ಬಿಜೆಪಿ

108 ಆರೋಗ್ಯ ಕವಚ ನೌಕರರ ಬಾಳಲ್ಲಿ......... ಪುಟ 4 ರಿಂದ

ನೇಮಕದಲ್ಲಿ ಮತ್ತು ವರ್ಗಾವಣೆಯಲ್ಲಿ ಕೆಲಸದ ಸ್ಥಳ ಗುರುತಿಸುವಲ್ಲಿ ಹಣ ಪಡೆದು–ಕೊಂಡಿರುತ್ತಾರೆ. ಈ ವಿಚಾರ 20.9.2015 ರಂದು ಜಿ.ವಿ.ಕೆ ಸಂಸ್ಥೆಯ ಹೆಚ್.ಆರ್.ನ್ಯಾಷನಲ್ ಹೆಡ್ ಶ್ರೀನಿವಾಸ್ ಪೆರಣಿಯವರ ಗಮನಕ್ಕೆ ತಂದಿದ್ದರೂ ಪ್ರಯೋಜನವಾಗಿಲ್ಲ.

7. ಮೇಲಿನ ಎಲ್ಲಾ ವಿಷಯಗಳನ್ನು ಪ್ರಶ್ನೆ ಮಾಡಿದಾಗ ಪ್ರಶ್ನೆ ಮಾಡುವಂತಹವರನ್ನು ಹೇಳದೆ ಕೇಳದೆ ವಜಾಗೊಳಿಸುವ ಕೆಲಸವನ್ನು 2008 ರಿಂದ ಇಲ್ಲಿಯವರೆಗೂ ಸಂಸ್ಥೆ ಮಾಡುತ್ತಾ ಬಂದಿರುತ್ತದೆ.

ಬೇರೆ ರಾಜ್ಯಗಳಲ್ಲಿ ಅಂಬ್ಯೂಲೆನ್ಸ್‌ಗಳನ್ನು ನಿಲ್ಲಿಸಲು ಶೆಲ್ಟರ್ ಮತ್ತು ಸೆಕ್ಯೂರಿಟಿ ಗಾರ್ಡ್ ಇರುತ್ತಾರೆ. ಆದರೆ ನಮ್ಮ ರಾಜ್ಯದಲ್ಲಿ ಈ ನೌಕರರಿಗೇ ಈ ಜವಾಬ್ದಾರಿ ಕೂಡಾ. ಕಾರ್ಮಿಕ ಕಾನೂನುಗಳ ಪ್ರಕಾರ 8 ಗಂಟೆ ಕೆಲಸದ ಅವಧಿ ಆಗಿದ್ದರೂ ಇವರು 4 ಗಂಟೆ ಕಡ್ಡಾಯವಾಗಿ ಹೆಚ್ಚು ಕೆಲಸ ಮಾಡಬೇಕು. ಆದರೆ ಈ ಕೆಲಸವನ್ನು ಓ.ಟಿ ಅಂತ ಪರಿಗಣಿಸಲೇ ಇಲ್ಲ.

108 ಕಾರ್ಮಿಕರ ಹೋರಾಟ

ಸಹಜವಾಗಿ ಕೆಲಸದ ಒತ್ತಡ, ಅಧಿಕಾರಿಗಳ ಕಿರುಕುಳ, ಸಂಬಳ ಹೆಚ್ಚಾಗದಿರುವುದು ಮತ್ತು ಮೂಲ ಸೌಕರ್ಯಗಳಿಗಾಗಿ ಇವರು ಸಂಘಟಿತರಾಗಿ ಹೋರಾಟಕ್ಕೆ ಇಳಿದೇ ಬಿಟ್ಟರು. ಈ ಹೋರಾಟಕ್ಕೆ ಮಾಧ್ಯಮಗಳು ಕೂಡಾ ಹೆಚ್ಚಿನ ಪ್ರಚಾರ ಕೊಟ್ಟವು, ವಿವಾದ ಹೈಕೋರ್ಟ್ ಮೆಟ್ಟಿಲೇರಿತು. ಹೈಕೋರ್ಟ್ "ಬಗೆಹರಿಸಿಕೊಳ್ಳಿ" ಎಂದು ಆದೇಶಿಸಿದರು. ಕಾರ್ಮಿಕ ಇಲಾಖೆಯಲ್ಲಿ 2013ರಲ್ಲಿ ವಿವಾದ ಬಂದಿದ್ದು 2014 ರಲ್ಲಿ ಜಿ.ವಿ.ಕೆ ಸಂಸ್ಥೆಯವರು ಪೈಲಟ್‌ಗೆ 7278 ರೂಗಳಿಂದ 11446, ಇ.ಎಮ್.ಟಿ ಗಳಿಗೆ 7627 ರಿಂದ 13,302 ರೂ ವೇತನ ಹೆಚಿಸುತ್ತೇವೆ ಎಂದು ಸಂಧಾನ ಸಭೆಯಲ್ಲಿ ಹೇಳಿದ್ದಾರೆ. ಆದರೆ ಅದು ಇನ್ನೂ ಜಾರಿಯಾಗಲಿಲ್ಲ. ನೌಕರರು ಕೇಳಿದರೆ ಸರ್ಕಾರ ಹೆಚ್ಚುವರಿ ಹಣ ಬಿಡುಗಡೆ ಮಾಡಿಲ್ಲ ಎಂದರು.

ಹೆಚ್ಚುವರಿ ಹಣ ಬಿಡುಗಡೆ ಮಾಡಿ ಎಂದು 2016 ಜನವರಿಯಲ್ಲಿ ವಿಧಾನಸೌಧ ಚಲೋ ಮಾಡಿದರು. ಆಗ ರಾಜ್ಯ ಸರ್ಕಾರ ಮಧ್ಯಪ್ರವೇಶಿಸಿ ರೂ. 12 ಕೋಟಿಯಲ್ಲಿ ರೂ. 6.5 ಕೋಟಿಯನ್ನು ಬಿಡುಗಡೆ ಮಾಡಿತು. ಈ ಹಣ ಪಾವತಿ ಮಾಡಿ ಎಂದಿದ್ದಕ್ಕೆ ಜಿ.ವಿ.ಕೆ ಸಂಸ್ಥೆಯವರು, ಪ್ರತಿಯೊಬ್ಬರು ನಾನು ಮುಷ್ಕರದಲ್ಲಿ ಪಾಲ್ಗೊಳ್ಳುವುದಿಲ್ಲ, ಕಂಪನಿಯ ನಿಯಮಗಳಿಗೆ ಬದ್ಧನಾಗಿರುತ್ತೇವೆ ಎಂಬ ವೈಯಕ್ತಿಕ ಮುಚ್ಚಳಿಕೆಯನ್ನು ಬರೆದುಕೊಡಬೇಕೆಂದೂ ಹೇಳಿದರು. ಈ ಹೊಸ ಗುಲಾಮಗಿರಿಯ ವ್ಯವಸ್ಥೆಯನ್ನು ವಿರೋಧಿಸಿ ಪುನಃ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಿದರು. ಪ್ರತಿಭಟನೆಗೆ ನಾಯಕತ್ವ ಕೊಟ್ಟ 153 ಜನರಿಗೆ ಯಾವುದೇ ರೀತಿಯ ಮುನ್ಸೂಚನಾ ಪತ್ರವನ್ನು ನೀಡದೇ ಏಕಾಏಕಿ ಕೆಲಸದಿಂದ ವಜಾ ಮಾಡಿದರು.

ಇದನ್ನು ವಿರೋಧಿಸಿ ನೌಕರರು ರಾಜ್ಯ ಮಟ್ಟದಲ್ಲಿ ಕಳೆದ 25 ದಿನಗಳಿಂದ ನಿರಂತರ ಮುಷ್ಕರದಲ್ಲಿದ್ದಾರೆ.

ಜನರಿಂದ, ಜನರಿಗಾಗಿ, ಜನರಿಗೋಸ್ಕರ ಆಯ್ಕೆಯಾದಂತಹ ಒಂದು ಪ್ರಭುತ್ವ ರಾಜ್ಯದ 6 ಕೋಟಿ ಜನರ ಜೀವಗಳನ್ನ ಕಾವಲು ಪಡೆ–ಯಂತೆ ಕಾಯುತ್ತಿರುವ, ಸಾವಿರಾರು ಜೀವಗಳನ್ನು ಉಳಿಸಿದಂತಹ ಜೀವಗಳು 25 ದಿನಗಳ ಕಾಲ ಪ್ರತಿಭಟನೆಯಲ್ಲಿದ್ದರೂ ಕೂಡಾ ಅದನ್ನು ಬಗೆಹರಿಸದೇ "ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ" ಅನ್ನುವ ರೀತಿಯಲ್ಲಿ ಆರೋಗ್ಯ ಸಚಿವರು ವರ್ತಿಸುತ್ತಿದ್ದಾರೆ. ಅವರು ಈ ವಿವಾದವನ್ನು ವೈಯಕ್ತಿಕ ಪ್ರತಿಷ್ಠೆಯಾಗಿ ಮಾಡಿಕೊಂಡು ಈ ನೌಕರರನ್ನು ಕೆಲಸದಿಂದ ತೆಗೆಯುತ್ತೇನೆ ಎನ್ನುತ್ತಿದ್ದಾರೆಯೇ ಹೊರತು ಜಿ.ವಿ.ಕೆ ಸಂಸ್ಥೆ ಮಾಡುತ್ತಿರುವ ಅನ್ಯಾಯದ ಬಗ್ಗೆ ಮಾತನಾಡುತಿಲ್ಲ. ತಾನು ತುಂಬಾ ಪ್ರಾಮಾಣಿಕ ಸಚಿವ ಎಂದು ತೋರಿಸಲು ಮೇಲ್ನೋಟಕ್ಕೆ ಜಿ.ವಿ.ಕೆ ಸಂಸ್ಥೆಗೆ ನೋಟೀಸನ್ನು ನೀಡಲಾಗಿದೆ.


ಆದರೆ ಕಾನೂನಿನ ಪ್ರಕಾರ ಈ ನೌಕರರ ನೇಮಕಾತಿ ಜಿ.ವಿ.ಕೆ ಸಂಸ್ಥೆಯಾದರೂ ಅವರು ಗುತ್ತಿಗೆದಾರರು ಮಾತ್ರವೇ. ಮೂಲ ಮಾಲೀಕರು ಆರೋಗ್ಯ ಸಚಿವರು. ಇದನ್ನು ಅವರು ಸಂಪೂರ್ಣವಾಗಿ ಮರೆತಿದ್ದಾರೆ. ರಾಜ್ಯ ಸರ್ಕಾರ ತನ್ನ ಸಾಧನೆಗಳನ್ನು ಹೇಳಿಕೊಳ್ಳುವಾಗ 108 ಆರೋಗ್ಯ ಕವಚದ ಸಾಧನೆಯೇ ಕುರಿತು ಹೇಳುತ್ತಾರೆ. ಈ ಸಾಧನೆಗಾಗಿ ಜೀವ ತೇಯ್ದ ಈ ನೌಕರರ ಬಗ್ಗೆ ಮಾತನಾಡುತ್ತಿಲ್ಲ.

ಆಗಬೇಕಾದ್ದು ಏನು?

- ಆರೋಗ್ಯ ಇಲಾಖೆ ಮತ್ತು ಜಿವಿಕೆ ಸಂಸ್ಥೆ ಮಧ್ಯೆ ಆಗಿರುವ ಒಡಂಬಡಿಕೆಯ ಪ್ರಕಾರ ನಡೆ–ಯದೇ ಇರುವುದಿರಿಂದ ಜಿವಿಕೆ ಸಂಸ್ಥೆಯ ಒಡಂಬಡಿಕೆಯನ್ನು ರದ್ದುಗೊಳಿಸಬೇಕು.
- ಒಡಂಬಡಿಕೆಯನ್ನು ಮೀರಿರುವುದರಿಂದ ಕ್ರಿಮಿನಲ್ ಕೇಸು ದಾಖಲು ಮಾಡಿ ನಷ್ಟವಾಗಿರುವ ಹಣವನ್ನು ವಾಪಸ್ಸು ಪಡೆಯಬೇಕು.
- 2014ರ 7ನೇ ತಿಂಗಳಲ್ಲಿ ಕಾರ್ಮಿಕ ಇಲಾಖೆಯ ಸಂಧಾನ ಸಭೆಯಲ್ಲಿ ದಾಖಲಾಗಿರುವ ಹೆಚ್ಚಿಸಿದ ವೇತನವನ್ನು ಅರಿಯರ್ಸ್ ಸಮೇತ ನೌಕರರಿಗೆ ನೀಡಬೇಕು.
- 2008 ರಿಂದ ಹೆಚ್ಚುವರಿ 4 ಗಂಟೆಗಳ ವೇತನವನ್ನು ಸಂಪೂರ್ಣವಾಗಿ ಪಾವತಿಸಬೇಕು.
- 200 ಜನ ಮಹಿಳಾ ಉದ್ಯೋಗಿಗಳಿಗೆ ನೈಸರ್ಗಿಕ ಹಕ್ಕಾಗಿ ಬಂದಿರುವ ಹೆರಿಗೆ ಭತ್ಯೆಯನ್ನು ನೀಡಬೇಕು.
- 10–15 ಜನ ವಿವಿಧ ರೀತಿಯ ಅಪಘಾತಗಳಾದವರಿಗೆ ಒಡಂಬಡಿಕೆ ಪ್ರಕಾರ 10 ಲಕ್ಷ ರೂ. ನೀಡಬೇಕು.
- ಈ ಯೋಜನೆ ಅತ್ಯಂತ ಮಹತ್ವದ ಯೋಜನೆಯಾಗಿರುವುದರಿಂದ ಇದನ್ನು ಸರ್ಕಾರವೇ ನಿರ್ವಹಣೆ ಮಾಡಬೇಕು.
- ಸರ್ಕಾರದ ಹಣ 3ನೇ ವ್ಯಕ್ತಿಗಳ ಮುಖಾಂತರ ಪೋಲಾಗುವುದನ್ನು ತಡೆಯಬೇಕು.

ಪ್ರಭುತ್ವ ಜನರ ಕಾಳಜಿಯನ್ನಿಟ್ಟುಕೊಂಡು ಮಾಡುವ ಇಂತಹ ಯೋಜನೆಗಳು ಈ ಯೋಜನೆಗಳ ಜಾರಿಗಾಗಿ ಶ್ರಮಿಸುವ ಮಾನವ ಸಂಪನ್ಮೂಲವನ್ನು ಕಡೆಗಣಿಸುವ ಸರ್ಕಾರ ನೀತಿಗಳನ್ನು ಬದಲಾಯಿಸಲು ಒಟ್ಟಾಗಿ ಶ್ರಮಿಸೋಣ. ●

ಮೂಲ: ಇಗ್ನೇಶಿಯಸ್ ರಾಮೊನೆಟ್
ಸಂಗ್ರಹಾನುವಾದ : ಕೆ. ಪ್ರಕಾಶ್



ಕ್ಯಾಸ್ಟ್ರೋ ಕಥೆ-4

ಮುಂದುವರೆದ ಬಂಡಾಯ

**ಕ್ರಿಸ್‌ಮಸ್ ಬಂತು. ಫಿಡೆಲ್‌ನ ಪೋಷಕರು ಇವರನ್ನು ಕರೆದೊಯ್ಯಲು ಬಂದರು. 'ಈ ಶಾಲೆಯಲ್ಲಿ ಅಂದಿನವರೆಗೂ ಇದ್ದು ಹೋದವರ ಪೈಕಿ ಈ ಮೂವರು ಅತ್ಯಂತ ದೊಡ್ಡ ರಾಸ್ಕಲ್ಸ್' ಎಂದು ಪ್ರಿನ್ಸಿಪಾಲರು ಇವರಿಗೆ ದೂರು ಹೇಳಿದರು. ಪ್ರಿನ್ಸಿಪಾಲರ ಮಾತನ್ನು ಪೋಷಕರು ನಂಬಿದರು.
ಕೊನೆಗೆ ಇವರನ್ನು ಯಾವ ಶಾಲೆಗೂ ಮುಂದೆ ಕಳುಹಿಸುವುದಿಲ್ಲವೆಂದು ತೀರ್ಮಾನಿಸಿದರು.
ಫಿಡೆಲ್‌ನೊಳಗಿದ್ದ ಬಂಡಾಯಗಾರ ಮೂರನೇ ಬಾರಿಗೆ ಸೆಟೆದು ನಿಂತ.
ಹನ್ನೊಂದು ವರ್ಷದ ಬಾಲಕ ತಾಯಿಯ ಬಳಿ ಹೇಳಿದ;
'ನನ್ನನ್ನು ಶಾಲೆಗೆ ಕಳುಹಿಸದಿದ್ದರೆ ಮನೆಯನ್ನು ಸುಟ್ಟುಹಾಕುತ್ತೇನೆ'.
ಪೋಷಕರು ಗಾಬರಿ ಬಿದ್ದುಹೋದರು.**

ಫಿಡೆಲ್ ಹೋಗುತ್ತಿದ್ದ ಶಾಲೆ ಅತ್ಯಂತ ಪ್ರತಿಷ್ಟಿತರ, ಶ್ರೀಮಂತರ ಶಾಲೆಯಾಗಿತ್ತು. ಆದರೆ ಅದು ಸಂಪೂರ್ಣವಾಗಿ ಸ್ಪ್ಯಾನಿಷ್‌ಮಯವಾಗಿತ್ತು. ಅಲ್ಲಿದ್ದ ಶಿಕ್ಷಕರೆಲ್ಲಾ ಸ್ಪ್ಯಾನಿಷ್ ಅಥವಾ ರಾಷ್ಟ್ರೀಯವಾದಿಗಳಾಗಿದ್ದರು. ಪ್ರತಿಗಾಮಿ ಮತ್ತು ಬಲಪಂಥೀಯ ಚಿಂತನೆಯಾಗಿದ್ದರೂ, ಶಿಸ್ತು, ನಡತೆ ಮತ್ತು ಸರಳತೆಗೆ ಹೆಸರಾಗಿದ್ದರು. ಶಾಲೆಯ ಅವಧಿಯಲ್ಲಿ ಫ್ರೆಂಚ್, ಇಂಗ್ಲಿಷ್, ಅಮೇರಿಕನ್ ಸಾಹಿತ್ಯವನ್ನು ತಿಳಿಯಲು ಆಗಲೇ ಇಲ್ಲ. ಏಕೆಂದರೆ ಅಲ್ಲಿದ್ದ ಎಲ್ಲ ಪುಸ್ತಕಗಳೂ ಸ್ಪ್ಯಾನಿಷ್ ಆಗಿದ್ದವು. ಶ್ರೀಮಂತ ಶಾಲೆಗೆ ಹೋಗುತ್ತಿದ್ದರೂ ಕಲೆ, ಪೈಂಟಿಂಗ್ಸ್, ಸಂಗೀತದಲ್ಲಿ ತೀರಾ ಕೊರತೆಯಿತ್ತು. ಏಳು ವರ್ಷಗಳ ಕಾಲ ಫಿಡೆಲ್ ಉತ್ತಮ ಶಿಕ್ಷಕರ ಪ್ರೋತ್ಸಾಹವನ್ನು ಪಡೆದರು. ಪ್ರಕೃತಿಯ ಬಗ್ಗೆ, ಹೊರಾಂಗಣದ ಬಗ್ಗೆ, ಮುಖ್ಯವಾಗಿ ಬೆಟ್ಟಗಳನ್ನು ಏರುವುದರ ಬಗ್ಗೆ ಫಿಡೆಲ್‌ಗಿದ್ದ ಆಸಕ್ತಿಯನ್ನು ಪ್ರೇರೇಪಿಸಿದರು. ಯಾವುದೇ ಬೆಟ್ಟವನ್ನು ನೋಡಿದರೂ ಫಿಡೆಲ್ ಅದನ್ನು ಸವಾಲಾಗಿ ಸ್ವೀಕರಿಸುತ್ತಿದ್ದರು. ಬೆಟ್ಟದ ತುದಿ ಮುಟ್ಟುವ ತೀರ್ಮಾನ ಮಾಡುತಿದ್ದರು. ಇಂತಹ ಸಾಹಸದ ಕಾರಣಕ್ಕಾಗಿ ಕೆಲವೊಮ್ಮೆ ಶಾಲಾ ಬಸ್ಸು ನಾಲ್ಕು ಗಂಟೆಗಳ ಕಾಲ ಕಾದ ಉದಾಹರಣೆಗಳಿವೆ. ಮಕ್ಕಳಲ್ಲಿ – ತ್ಯಾಗ, ಪ್ರಯತ್ನ, ಸಾಹಸದ ಸ್ಫೂರ್ತಿಯನ್ನು ಕಂಡರೆ ಅಂತಹ ಗುಣವನ್ನು ಶಿಕ್ಷಕರು ಬೆಂಬಲಿಸುತ್ತಿದ್ದರು. ಗುರುವಾರ ಮತ್ತು ಭಾನುವಾರಗಳಂದು ಹಳ್ಳಗಳಿಗೆ ಮತ್ತು ಸಮುದ್ರಕ್ಕೆ ಕರೆದೊಯ್ಯುತ್ತಿದ್ದರು. ಫಿಡೆಲ್‌ಗೆ ಇವೆಲ್ಲವೂ ತುಂಬಾ ಇಷ್ಟವಾಗುತ್ತಿದ್ದ ಕೆಲಸಗಳಾಗಿದ್ದವು.

ಉನ್ನತ ಬಂಡವಾಳಶಾಹಿಗಳು ತಮ್ಮ ಮಕ್ಕಳನ್ನು ಕಳುಹಿಸುತ್ತಿದ್ದ ಜೆಸುಯಿತ್ (ಎಝಣುಣ) ಶಾಲೆಗಳಲ್ಲಿ ಕರಿಯರಾಗಲೀ ಅಥವಾ ಮೆಸ್ಟಿಜೋಸ್ ವಿದ್ಯಾರ್ಥಿಗಳಾಗಲೀ ಇರಲಿಲ್ಲ. ಅವರಿಗೆ ಪ್ರವೇಶ ನೀಡುತ್ತಿರಲಿಲ್ಲ. ಮೂಲತಃ ಸೈನಿಕನಾಗಿದ್ದ ಸೈಂಟ್ ಇಗ್ನೇಷಿಯಸ್ ಸ್ಥಾಪಿಸಿದ ಅಧಿಕಾರ ಮತ್ತು ಅಂತಸ್ತುಗಳನ್ನು ಪ್ರಶ್ನಿಸಿದ ರೋಮನ್ ಕ್ಯಾಥೋಲಿಕ್‌ನ ಈ ಪಂಥವು ಬಂಡಾಯದ ಸ್ವರೂಪವನ್ನು ಹೊಂದಿತ್ತು. ಆದರೂ ಇಂತಹ ಕ್ರಮಗಳನ್ನು ಅನುಸರಿಸಿರುವುದನ್ನು ಗಮನಿಸಬಹುದು. ಇದೇನೇ ಆದರೂ ಫಿಡೆಲ್‌ಗೆ ಈ ಶಾಲೆಯಿಂದ ಸಹಾಯವೇ ಆಯಿತು. ಒಮ್ಮೆ 'ಲಾ ಫೋರ್ಜಾ ಡಿ ಉನ್ ರೆಬೆಲ್ಡೆ' (ಒಬ್ಬ ಬಂಡಾಯಗಾರನ ಸೃಷ್ಟಿ) ಎಂಬ ಸಾಹಿತ್ಯದ ಕೃತಿ ಓದಿದರು. ಅದರಲ್ಲಿ ಹೇಗೆ ಒಬ್ಬ ಬಂಡಾಯಗಾರ ಕ್ರಾಂತಿಕಾರಿಯಲ್ಲ, ಅಂಶಿಕವಾಗಿ ತನ್ನ ಜೀವನ ಮತ್ತು ತನ್ನದೇ ಸ್ವಂತ ಅನುಭಗಳಿಂದ ರೂಪುಗೊಳ್ಳುತ್ತಾನೆ ಎಂಬುದನ್ನು ಹೇಳಲಾಗಿತ್ತು. ಇಲ್ಲಿ ಅಂಶಿಕ ಎನ್ನುವುದು ಏಕೆಂದರೆ, ಒಬ್ಬ ವ್ಯಕ್ತಿಯ ನಡತೆ, ಮನೋಧರ್ಮ ಕೂಡಾ ಪ್ರಭಾವ ಹೊಂದಿವೆ. ಫಿಡೆಲ್‌ರ ಈ ಮನೋಧರ್ಮವೇ ಜೆಸ್ಯೂಟ್ ಶಾಲೆಗಳ ಮಿಲಿಟರಿ ಶಿಸ್ತಿನೊಂದಿಗೆ ಬೆರೆತುಹೋಗಲು ಕಾರಣವಾಗಿರಬಹುದು.

ಫಿಡೆಲ್ ಪ್ರೌಢಶಾಲೆಯಲ್ಲಿದ್ದಾಗ ಎಲ್ಲಕ್ಕಿಂತ ಮಿಗಿಲಾಗಿ ಕ್ರೀಡಾಪಟು ಮತ್ತು ಪರ್ವತಾರೋಹಿಯಾಗಿದ್ದರು. ಯುಮುರಿ ಕಣಿವೆಗೆ ಮೊದಲ ಸಾಹಸ ಯಾತ್ರೆ ಕೈಗೊಂಡಾಗ ಆ ತಂಡದ ನಾಯಕರಲ್ಲಿ ಫಿಡೆಲ್ ಒಬ್ಬರಾಗಿದ್ದರು. ಇದರಲ್ಲಿ ಪರ್ವತಾರೋಹಣದಂತಹ ಕೆಲವು ಚಟುವಟಿಕೆಗಳನ್ನು ಸೇರಿಸಿದರು. ಎಲ್ಲದರಲ್ಲೂ ಮುಂಚೂಣಿಯಲ್ಲಿದ್ದ ಕಾರಣಕ್ಕಾಗಿ ಎಲ್ಲಾ ಸಾಹಸಿಗರಿಗೂ ಪ್ರಧಾನ ನಾಯಕನನ್ನಾಗಿ ಮಾಡಿದರು. ಒಂದು ಸಾವಿರ ವಿದ್ಯಾರ್ಥಿಗಳಿದ್ದ ಶಾಲೆಯಲ್ಲಿ ಕೊನೆಯ ವರ್ಷ ಫಿಡೆಲ್ ಕ್ರೀಡೆಯಲ್ಲಿ ಸರ್ವಾಂಗೀಣ ಉತ್ತಮ ವಿದ್ಯಾರ್ಥಿಯೆಂದು ಆಯ್ಕೆಯಾದರು. ಬ್ಯಾಸ್ಕೆಟ್‌ಬಾಲ್, ಫುಟ್‌ಬಾಲ್, ಬೇಸ್‌ಬಾಲ್, ಹೀಗೆ ಎಲ್ಲ ಕ್ರೀಡೆಗಳಲ್ಲೂ ಫಿಡೆಲ್ ಅತ್ಯುತ್ತಮವಾಗಿದ್ದರು. ಆದರೆ ಓದಿನಲ್ಲಿ ಇಂತಹ ಪರಿಸ್ಥಿತಿಯಿರಲಿಲ್ಲ. ಮೊದಲೇ ಹೇಳಿದ ಹಾಗೆ ಫಿಡೆಲ್ ಸ್ವಯಂ–ಶಿಕ್ಷಿತ ವಿದ್ಯಾರ್ಥಿ.

ಐದನೆ ತರಗತಿಯಲ್ಲಿ ಓದುತ್ತಿದ್ದಾಗ ಫಿಡೆಲ್‌ನ ಎರಡನೇ ಬಂಡಾಯ ಸಂಭವಿಸಿತು. ಒಂದು ದಿನ ವಸತಿ ವಿದ್ಯಾರ್ಥಿಗಳ ಜವಾಬ್ದಾರಿಯನ್ನು ಹೊಂದಿದ್ದ ಉಪ–ಪ್ರಾಂಶುಪಾಲ ಬ್ರದರ್ ಬರ್ನಾರ್ಡೋ ಮತ್ತು ಫಿಡೆಲ್ ನಡುವೆ ದೊಡ್ಡ ಜಗಳ ಶುರುವಾಯಿತು. ಇವರು ಯಾವಾಗಲೂ ವಿದ್ಯಾರ್ಥಿಗಳನ್ನು ಹೊಡೆಯುತ್ತಿದ್ದರು. ಫಿಡೆಲ್ ಇದರ ವಿರುದ್ದ ತಿರುಗಿಬಿದ್ದರು. ಅದಕ್ಕಾಗಿ ಒಮ್ಮೆಯಲ್ಲ ಮೂರು ಬಾರಿ ಪೆಟ್ಟು ತಿಂದರು. ಮೊದಲ ಬಾರಿ ಬಿದ್ದ ಪೆಟ್ಟು ಬಲು ಜೋರಾಗಿತ್ತು ಎಂದು ಫಿಡೆಲ್ ಹೇಳುತ್ತಾರೆ. ಬ್ರದರ್ ಬಾರ್ನಾರ್ಡೋ ತನಗೆ ಬೇಕಾದ ವಿದ್ಯಾರ್ಥಿಗಳ ಪಕ್ಷಪಾತಿಯಾಗಿದ್ದರು. ಗುರುವಾರ ಮತ್ತು ಭಾನುವಾರ ಸಮುದ್ರ ಪ್ರವಾಸದ ಸಂದರ್ಭದಲ್ಲಿ ಬರ್ನಾರ್ಡೋಗೆ ಅತಿ ಪ್ರೀತಿಯಿಂದಿದ್ದ ಮತ್ತೊಬ್ಬ ವಿದ್ಯಾರ್ಥಿಯೊಂದಿಗೆ ಆಗಿದ್ದ ಜಗಳ ಸ್ನೇಹಿತರ ಮಧ್ಯಪ್ರವೇಶದಿಂದ ನಿಂತಿತ್ತು. ಶಾಲೆಗೆ ಬಂದ ಮೇಲೆ ಅದು ಮುಂದುವರಿದಿತ್ತು. ಫಿಡೆಲ್ ಸೀದಾ ಆ ಹುಡುಗನ ಬಳಿ ಹೋಗಿ ಸರಿಯಾಗಿ ಬೀಸಿ ಹೊಡೆದ. ಮುಂದೆ ಸಂಭವಿಸಬಹುದಾದ ಅನಾಹುತವನ್ನು ಮನಗಂಡಿದ್ದ ಫಿಡೆಲ್ ತಪ್ಪಿಸಿಕೊಂಡು ಓಡಾಡತೊಡಗಿದ್ದ. ಆದರೆ ಬರ್ನಾರ್ಡೋ ಫಿಡೆಲ್‌ನನ್ನು ಹಿಡಿದು ಕ್ಲಾಸ್ ರೂಮಿನ ಮುಂಭಾಗದಲ್ಲಿ ನಿಲ್ಲಿಸಿ ಸರಿಯಾಗಿ ಬಡಿದರು. ಫಿಡೆಲ್‌ಗೆ ಬಾರೀ ಅವಮಾನವಾಯಿತು. ಎರಡನೇ ಬಾರಿ, ಮಹಡಿಯಲ್ಲಿದ್ದ ಮಲಗುವ ಕೋಣೆಗೆ ಸಾಲಿನಲ್ಲಿ ಹೋಗುವಾಗ ಮಾತನಾಡಬಾರದೆಂಬ ಶಿಸ್ತನ್ನು ಮುರಿದರೆಂದು ಇದೇ ಬರ್ನಾರ್ಡೋ ಫಿಡೆಲ್‌ರ ತಲೆಯನ್ನು ಸರಿಯಾಗಿ ಗೋಡೆಗೆ ಅಪ್ಪಳಿಸುವಂತೆ ಬಾರಿಸಿದರು. ದೈಹಿಕ ದೌರ್ಜನ್ಯ, ಹಿಂಸೆ ಫಿಡೆಲ್‌ಗೆ ಸಹಿಸಲು ಆಗುತ್ತಿರಲಿಲ್ಲ.



ಮೂರನೇ ಬಾರಿ, ಬೆಳಗಿನ ಉಪಹಾರ ಮುಗಿಸಿ ಹೊರಬರುವಾಗ ಕುಡಿಯಲು ಹಾಲು ಮತ್ತು ಒಂದೆರೆಡು ಬ್ರೆಡ್ ತುಣುಕುಗಳನ್ನು ನೀಡಲಾಗುತ್ತಿತ್ತು. ಆಗಿನ ಪಚನ ಶಕ್ತಿಯೇ ಹಾಗಿತ್ತೆಂದು ಕಾಣುತ್ತದೆ. ಇದ್ದ ಕಡಿಮೆ ಸಮಯದಲ್ಲೇ ವೇಗವಾಗಿ ಎರಡು ಮೂರು ಬ್ರೆಡ್ ರೋಲ್‌ಗಳನ್ನು ತಿಂ–ದು ಬೆಣ್ಣೆಯನ್ನು ಜೊತೆಗೆ ಕೊಂಡೊಯ್ಯುತ್ತಿದ್ದರು. ಉಳಿದ ಎಂಟತ್ತು ನಿಮಿಷಗಳು ಆಟವಾಡಲು ಸಮಯವಿರುತಿತ್ತು. ಮೊದಲಿಗೆ ಬ್ಯಾಟ್ ಮಾಡಬೇಕಾದರೆ ಕ್ಯೂನಲ್ಲಿ ಮೊದಲಿರಬೇಕಿತ್ತು. ಅದಕ್ಕಾಗಿ ವಿದ್ಯಾರ್ಥಿಗಳಲ್ಲಿ ಪೈಪೋಟಿ ನಡೆಯುತ್ತಿತ್ತು. ಒಮ್ಮೆ ಈ ರೀತಿ ನೂಕುನುಗ್ಗಲು ನಡೆಯುವಾಗ ಫಿಡೆಲ್‌ನ ತಲೆಯ ಮೇಲೆ ಪಟಪಟನೆ ಏಟುಗಳು ಬಿದ್ದವು. ಹೊಡೆದದ್ದು ಅದೇ ಬರ್ನಾರ್ಡೋ. ಬಾಲಕ ಫಿಡೆಲ್‌ಗೆ ತಡೆಯಲು ಅಸಾಧ್ಯವಾಯಿತು. ಕೋಪದಿಂದ ಕುದಿಯುತ್ತಿದ್ದ ಫಿಡೆಲ್ ತನ್ನ ಬಳಿಯಿದ್ದ ಬೆಣ್ಣೆಯ ರೋಲ್‌ಗಳನ್ನು ಬಾರ್ನಾರ್ಡೋ ಮುಖಕ್ಕೆ ಪಟಾರನೇ ಅಪ್ಪಳಿಸಿದ್ದಲ್ಲದೆ, ಹುಲಿಮರಿಯ ರೀತಿಯಲ್ಲಿ ಚಂಗನೆ ಅವರ ಮೇಲೆ ನೆಗೆದು ಕಚ್ಚಿ, ಒದ್ದು, ಮನಸ್ಸಿಗೆ ಬಂದಂತೆ ಗುದ್ದಿಹಾಕಿದ. ಇಡೀ ಶಾಲೆಯ ವಿದ್ಯಾರ್ಥಿಗಳ ಎದುರು ಈ ಘಟನೆ ಜರುಗಿ ಹೋಯಿತು. ಕೋಪ ಬಂದ ಮಕ್ಕಳು 'ನಾನು ನಿನ್ನ ತಲೆಯನ್ನು ಮಸಿಕುಡಿಕೆಯಿಂದ ಹೊಡೆಯುತ್ತೇನೆ' ಎಂದು ಹೇಳುತ್ತಾರೆ. ಆದರೆ ಫಿಡೆಲ್ ಅದ್ಯಾವುದನ್ನೂ ಹೇಳಿರಲಿಲ್ಲ. ಆದರೆ ಮೂರನೇ ಬಾರಿ ಏಟು ಬಿದ್ದಾಗ ಅತೃಪ್ತಿ, ಅವಮಾನ, ಕೋಪ ತಡೆದುಕೊಳ್ಳಲಾಗಲಿಲ್ಲ. ಇದು ಫಿಡೆಲ್‌ನ ಎರಡನೇ ಬಂಡಾಯವಾಗಿತ್ತು. ವಿದ್ಯಾರ್ಥಿಗಳೆಲ್ಲಾ ಫಿಡೆಲ್ ಮಾಡಿದ್ದು ಸರಿ ಎನ್ನುತ್ತಿದ್ದರು.

ಕ್ರಿಸ್‌ಮಸ್ ಬಂತು. ಫಿಡೆಲ್‌ನ ಪೋಷಕರು ಇವರನ್ನು ಕರೆದೊಯ್ಯಲು ಬಂದರು. 'ಈ ಶಾಲೆಯಲ್ಲಿ ಅಂದಿನವರೆಗೂ ಇದ್ದು ಹೋದವರ ಪೈಕಿ ಈ ಮೂವರು ಅತ್ಯಂತ ದೊಡ್ಡ ರಾಸ್ಕಲ್ಸ್' ಎಂದು ಪ್ರಿನ್ಸಿಪಾಲರು ಇವರಿಗೆ ದೂರು ಹೇಳಿದರು. ಫಿಡೆಲ್ ಇದನ್ನು ನೆನೆಸಿಕೊಂಡು ನಗುತ್ತಾರೆ. ಏಕೆಂದರೆ ರಾಲ್ ಆಗತಾನೆ ಮೊದಲ ತರಗತಿಯಲ್ಲಿದ್ದ. ರೇಮೊನ್ ಸಂತನ ರೀತಿಯ ಮನುಷ್ಯ. ಇನ್ನು ಫಿಡೆಲ್ ಮಾಡಿದ ತಪ್ಪೇನು ಎಂಬುದು ಗೊತ್ತಿದ್ದದ್ದೇ. ಪ್ರಿನ್ಸಿಪಾಲರ ಮಾತನ್ನು ಪೋಷಕರು ನಂಬಿದರು. ವಾಪಸ್ ಬೈರನ್‌ನಲ್ಲಿ ಇವರ ತಂದೆ ಈ 'ದುರಂತ'ದ ಕುರಿತು ಅವರಲ್ಲಿಗೆ ಬರುತ್ತಿದ್ದ ಎಲ್ಲರ ಬಳಿಯೂ ಹೇಳುತ್ತಿದ್ದರು. ಕೊನೆಗೆ ಇವರನ್ನು ಯಾವ ಶಾಲೆಗೂ ಮುಂದೆ ಕಳುಹಿಸುವುದಿಲ್ಲವೆಂದು ತೀರ್ಮಾನಿಸಿದರು.

ಇದರಿಂದ ರೇಮೊನ್‌ಗೆ ಸಂತೋಷವೇ ಆಯಿತು. ರಾಲ್‌ಗೆ ಅಭಿಪ್ರಾಯ ಹೇಳುವ ವಯಸ್ಸಾಗಿರಲಿಲ್ಲ. ಫಿಡೆಲ್ ಅಂತೂ ತನ್ನದಲ್ಲದ ತಪ್ಪಿಗೆ ತನಗೆ ಶಿಕ್ಷೆಯೇಕೆಂದು ಅಸಮಧಾನಗೊಂಡ. ಥ್ರೀ ಕಿಂಗ್ಸ್ ಡೇ ಮುಗಿದು ಜನವರಿ 7ಕ್ಕೆ ಯಾವಾಗಲೂ ಶಾಲೆಗೆ ಮನೆಯಿಂದ ಹೊರಡುತ್ತಿದ್ದ ದಿನ ಕಳೆದರೂ ಬದಲಾವಣೆಯಾಗದಿದ್ದಾಗ ಫಿಡೆಲ್‌ನೊಳಗಿದ್ದ ಬಂಡಾಯಗಾರ ಮೂರನೇ ಬಾರಿಗೆ ಸೆಟೆದು ನಿಂತ. ಹನ್ನೊಂದು ವರ್ಷದ ಬಾಲಕ ತಾಯಿಯ ಬಳಿ ಹೇಳಿದ; 'ನನ್ನನ್ನು ಶಾಲೆಗೆ ಕಳುಹಿಸದಿದ್ದರೆ ಮನೆಯನ್ನು ಸುಟ್ಟುಹಾಕುತ್ತೇನೆ'. ಪೋಷಕರು ಗಾಬರಿ ಬಿದ್ದುಹೋದರು. ಆ ರೀತಿ ಮಾಡುವ ಉದ್ದೇಶವಾಗಲೀ ಧೈರ್ಯವಾಗಲೀ ಇರದಿದ್ದರೂ ಆಡಿದ ಮಾತುಗಳು ಹಿರಿಯರಿಗೆ ನಾಟಿದವು. ಪುನಃ ಶಾಲೆಗೆ ಕಳುಹಿಸಲು ತೀರ್ಮಾನವಾಯಿತು.

ಆದರೆ ಈ ಬಾರಿ ಮಜ್ಹೊರ್‍ರಾ ಎಂಬ ವ್ಯಾಪಾರಸ್ತನ ಬಳಿ ಉಳಿಯುವ ಏರ್ಪಾಡು ಮಾಡಿದರು. ಈತ ಗೆಲೀಷಿಯನ್ ಆಗಿದ್ದ. ಈತನ ಹೆಂಡತಿ ಕಾರ್ಮೆನ್ ವೆಗಾ ಗಂಡನಿಗಿಂತ ಎರಡು ಪಟ್ಟು ಎತ್ತರದ ಮತ್ತು ಬಲಿಷ್ಟ ಮುಲಾತ್ತೊ ಮಹಿಳೆಯಾಗಿದ್ದಳು. ಈಕೆಯ ಅಧಿಪತ್ಯದಲ್ಲಿ ಮನೆ ನಡೆಯುತ್ತಿತ್ತು. ಮಜ್ಹೊರ್‍ರಾಗೆ ಮತ್ತೊಬ್ಬಳು ಹೆಂಡತಿಯಿದ್ದಳು. ಆಕೆಗೆ ಮಕ್ಕಳಿದ್ದರು. ಜೊತೆಗೆ ಆಕೆ–ಯ ಮೊದಲ ಗಂಡನ ಮಕ್ಕಳಿದ್ದರು. ಈ ವಾತಾವರಣವೇ ಫಿಡೆಲ್‌ಗೆ ಸಹಿಸಲು ಕಷ್ಟವಾಗಿತ್ತು. ಎರಡನೇ ಅಂತಸ್ತಿನ ತುದಿಯಲ್ಲಿದ್ದ ಪುಟ್ಟ ಕೋಣೆಯಲ್ಲಿ ಫಿಡೆಲ್ ವಾಸವಿದ್ದ.

ಆ ಸಂದರ್ಭದಲ್ಲೇ ಒಮ್ಮೆ ರೇಡಿಯೋದಲ್ಲಿ ಬರುತ್ತಿದ್ದ ಜ್ಹೊ ಲೂಯಿ ಮತ್ತು ಮ್ಯಾಕ್ಸ್ ಷ್ಮೆಲಿಂಗ್ ನಡುವಿನ ಅತ್ಯಂತ ಭಯಂಕರವಾದ ಬಾಕ್ಸಿಂಗ್ ವಿವರಣೆಯನ್ನು ಕೇಳಿದ್ದು. ಈ ಫೈಟಿಂಗ್‌ನಲ್ಲಿ ಜ್ಹೊ ಲೂಯಿ ಜಯಗಳಿಸಿದ್ದ. ಇದು ಆ ಕಾಲಕ್ಕೆ ತುಂಬಾ ಪ್ರಸಿದ್ದವಾದ ಫೈಟ್ ಆಗಿತ್ತು. ಜ್ಹೊ ಲೂಯಿ ಕರಿಯನಾಗಿದ್ದ. ಮ್ಯಾಕ್ಸ್ ಷ್ಮೆಲಿಂಗ್ 'ಜರ್ಮನಿಯ ಜನಾಂಗೀಯ ಶ್ರೇಷ್ಟತೆ'ಯ ಪ್ರತೀಕವಾಗಿದ್ದ. ಫಿಡೆಲ್‌ಗೆ ಇದರಿಂದ ಖುಷಿಯಾಗಿತ್ತು.

ಮಜ್ಹೊರ್‍ರಾ ಕುಟುಂಬವು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಬಲಗೊಳ್ಳುತ್ತಿತ್ತು. ಮಧ್ಯಮವರ್ಗದ ಸಾಲಿಗೆ ಸೇರಿದ್ದಕ್ಕೆ ಸಾಕ್ಷಿಯಾಗಿ ಉನ್ನತ ವರ್ಗದ ನೆರೆಹೊರೆಯಲ್ಲಿ ಮನೆ ಕಟ್ಟುತ್ತಿದ್ದರು. ಫಿಡೆಲ್ ಜೆಸ್ಯೂಟ್ಸ್ ನಡೆಸುತ್ತಿದ್ದ ಕಾಲೇಜಯೊ ಡಿ ಡೊಲೊರೆಸ್‌ಗೆ ಐದನೆಯ ತರಗತಿಯ ಮಧ್ಯಾವಧಿಗೆ ಸೇರಿದರು. ಅಧಿಕಾರಿಗಳು, ಉನ್ನತ ಬಂಡವಾಳದಾರರು ಮಕ್ಕಳನ್ನು ಕಳುಹಿಸುತ್ತಿದ್ದ ಶಾಲೆಯದು. ಫಿಡೆಲ್ ಆ ಶಾಲೆಗೆ ಹೋಗುತ್ತಿದ್ದುದು ಮನೆಯೊಡತಿಗೆ ಹೆಮ್ಮೆಯ ವಿಷಯವಾಗಿತ್ತು. ಎಲ್ಲ ಶ್ರೀಮಂತರಂತೆ ತಮ್ಮ ಮನೆಯಿಂದಲೂ ಹುಡುಗನೊಬ್ಬ ಆ ಶಾಲೆಗೆ ಹೋಗುತ್ತಿದ್ದುದು ಅವರ ಎದೆಯುಬ್ಬಿಸಿತ್ತು. ಇಂತಹ ಮನೋಭಾವದ ಕಾರಣಕ್ಕಾಗಿಯೇ ಫಿಡೆಲ್ ಆ ಶಾಲೆಯಲ್ಲಿ ಅತ್ಯುತ್ತಮ ವಿದ್ಯಾರ್ಥಿಯಾಗಿರಬೇಕೆಂದು ಅವರು ಬಯಸುತ್ತಿದ್ದರು. ಈ ನಡುವೆ ಅಪೆಂಡಿಕ್ಸ್ ಕಾರಣಕ್ಕಾಗಿ ಫಿಡೆಲ್‌ಗೆ ಶಸ್ತ್ರಚಿಕಿತ್ಸೆ ಮಾಡಲಾಯಿತು. ಒಂದು ವಾರದ ಬದಲಿಗೆ ಮೂರು ವಾರ ವಿಶ್ರಾಂತಿ ಪಡೆಯಬೇಕಾದ ಪರಿಸ್ಥಿತಿ ಬಂತು. ಇದರಿಂದ ಶಾಲೆಗೆ ಹೋಗಲು ಸಮಸ್ಯೆಯಾಯಿತು. ಬದಲಾದ ಶಾಲೆ, ಶಿಕ್ಷಕರು, ತರಗತಿಗಳು, ಸಹಪಾಠಿಗಳು ಎಲ್ಲವೂ ಸೇರಿ ಐದನೇ ತರಗತಿಯ ಅಂತಿಮ ಪರೀಕ್ಷೆಯಲ್ಲಿ ಉತ್ತಮ ಗ್ರೇಡ್ ಸಿಗಲಿಲ್ಲ. ಆದರೆ ಮನೆಯೊಡತಿ ಮಾತ್ರ ಇಡೀ ಶಾಲೆಗೇ ಅತ್ಯುತ್ತಮ ಗ್ರೇಡ್ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತಿದ್ದಳು. ●

ಹೆಚ್‌ಆರ್‌ಡಿ ಮಂತ್ರಿಗಳ 'ಭಾವಪೂರ್ಣ' ಭಾಷಣ :'ಸತ್ಯಮೇವ ಜಯತೇ' ಎಂದಿದ್ದಾರೆ ಪ್ರಧಾನಿ; ಸತ್ಯ ಯಾವುದು ಎಂದು ಪ್ರಶ್ನಿಸಿದ್ದಾರೆ ರೋಹಿತ್ ತಾಯಿ ಮತ್ತು ಕನ್ಹೈಯ ತಾಯಿ



'ಅಚ್ಛೇ ದಿನ್'ಗಳ ಪ್ರತೀಕವಾಗಿ ಬಿಟ್ಟಿರುವ ಮಾನವ ಸಂಪನ್ಮೂಲ ಅಭಿವೃದ್ಧಿ(ಹೆಚ್‌ಆರ್‌ಡಿ) ಮಂತ್ರಿಗಳು, ಜೆಎಎನ್‌ಯುನ ಮಾಜಿ ಎಬಿವಿಪಿ ಮುಖಂಡರುಗಳು ಕೂಡ 'ಮನು-ಸ್ಮೃತಿ' ಎಂದಿರುವ ಮಂತ್ರಿಗಳು, ಸಂಸತ್ತಿನಲ್ಲಿ ಹೈದರಾಬಾದ್ ವಿವಿ ಮತ್ತು ಜವಹರಲಾಲ್ ನೆಹರೂ ವಿವಿಯಲ್ಲಿನ ಘಟನೆಗಳ ಬಗ್ಗೆ ತನ್ನನ್ನು ಮತ್ತು ಸರಕಾರವನ್ನು 'ಭಾವಪೂರ್ಣ'ವಾಗಿ(ಹಲವರಿಗೆ ಇದು ಅವರ ಟಿವಿ ಸೀರಿಯಲ್‌ನ 'ಸ್ಕ್ರಿಪ್ಟ್'ನಂತೆ ಕಂಡಿದ್ದರೆ ಆಶ್ಚರ್ಯವಿಲ್ಲ) ಸಮರ್ಥಿಸಿಕೊಳ್ಳುತ್ತ 'ಒಂದು ಮಗುವನ್ನು ರಾಜಕೀಯ ದಾಳವಾಗಿ ಬಳಸಿಕೊಳ್ಳಲಾಗುತ್ತಿದೆ' ಎಂದು 'ಮರುಗಿದ' ದಿನವೇ ಸಮೀಪದ ಇಂಡಿಯಾ ಗೇಟ್ ಬಳಿ ಆ 'ಮಗು' ರೋಹಿತ್ ವೇಮುಲಾಗೆ ನ್ಯಾಯ ಸಿಗಬೇಕು ಎಂದು ಮೇಣಬತ್ತಿ ಪ್ರದರ್ಶನ ನಡೆಸಿದ ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ದಿಲ್ಲಿ ಪೋಲೀಸರು ಬಂಧಿಸಿ ಎಳೆದೊಯ್ದಿದ್ದಾರೆ. ಅವರ ಜೊತೆಗಿದ್ದ ಆ 'ಮಗು'ವಿನ ತಾಯಿ ರಾಧಿಕಾರನ್ನೂ ಬಂಧಿಸಿ ಪೋಲಿಸ್ ಠಾಣೆಗೆ ಒಯ್ದಿದ್ದಾರೆ.

ಸಂಸತ್ತಿನಲ್ಲಿ ಮಾನವ ಸಂಪನ್ಮೂಲ ಮಂತ್ರಿಗಳ ಉದ್ಗಾರಗಳನ್ನು ಕೇಳುತ್ತಿದ್ದಾಗ 26 ವರ್ಷದ ತನ್ನ ಪ್ರತಿಭಾವಂತ ಮಗನನ್ನು ಕಳಕೊಂಡ ದುಃಖತಪ್ತೆ ತಾಯಿ ರಾಧಿಕಾರವರ ಮಾತುಗಳನ್ನು ನಾನು ಮೆಲುಕು ಹಾಕಿಕೊಂಡೆ ಎನ್ನುತ್ತಾರೆ ಸಿಪಿಐ(ಎಂ) ನ ಹಿರಿಯ ಮುಖಂಡರಾದ ಬೃಂದಾ ಕಾರಟ್:

"ನಾನು ಸ್ಮೃತಿ ಇರಾನಿ ಅವರನ್ನು ಭೇಟಿ ಮಾಡ ಬಯಸುತ್ತೇನೆ. ಯಾವ ಆಧಾರದಲ್ಲಿ ನೀವು ನನ್ನ ಮಗನನ್ನು ರಾಷ್ಟ್ರ-ವಿರೋಧಿ ಎಂದು ಸಾರಿದ್ದೀರಿ ಎಂದು ಕೇಳಬಯಸುತ್ತೇನೆ....ಆತ ಒಬ್ಬ ದಲಿತನಲ್ಲ ಎಂದಿರಿ ನೀವು. ಸುಳ್ಳು ಜಾತಿ ಸರ್ಟಿಫಿಕೇಟ್ ಪಡೆದಿದ್ದಾನೆ ಎಂದಿದ್ದೀರಿ. ಏಕೆ ನೀವು ಶಿಕ್ಷಣ ಅರ್ಹತೆಯ ಬಗ್ಗೆ ಸುಳ್ಳು ಸರ್ಟಿಫಿಕೇಟ್ ಪಡೆದಿರುವುದರಿಂದ ಎಲ್ಲರೂ ಅದನ್ನೇ ಮಾಡುತ್ತಾರೆ ಅಂದುಕೊಂಡಿದ್ದೀರಾ ಎಂದು ನಾನು ಕೇಳಬಹುದೇ?...ನೀವು ಅವನ ಸ್ಟೈಪಂಡ್ ನಿಲ್ಲಿಸಿದಿರಿ, ಯೂನಿವರ್ಸಿಟಿಯಿಂದ ಅಮಾನತು ಮಾಡಿಸಿದಿರಿ....ಆತ ಈ ಮಟ್ಟಿಗೆ ಬರಲು ಎಂತಹ ಹೋರಾಟ ನಡೆದಿದೆ, ಎಷ್ಟು ಕಣ್ಣೀರು ಹರಿದಿದೆ, ಎಂತಹ ತ್ಯಾಗ ಮಾಡಬೇಕಾಯಿತು ಎಂಬುದನ್ನು ಊಹಿಸಿಕೊಳ್ಳುವುದೂ ನಿಮಗೆ ಸಾಧ್ಯವಿಲ್ಲ...ನಾನು 26 ವರ್ಷ ಶ್ರಮಪಟ್ಟು ಕಟ್ಟಿದ್ದನ್ನು ನೀವು ಮೂರೇ ತಿಂಗಳಲ್ಲಿ ಧ್ವಂಸ ಮಾಡಿದಿರಿ..."

ಹೆಚ್‌ಆರ್‌ಡಿ ಮಂತ್ರಿಗಳ ಅಮೋಘ ಭಾಷಣವನ್ನು ಮೆಚ್ಚಿಕೊಂಡ ಪ್ರಧಾನಿಗಳು 'ಸತ್ಯಮೇವ ಜಯತೇ' ಎಂದು ಟ್ವೀಟಿಸಿದ್ದಾರಂತೆ. ಯಾವ ಸತ್ಯ ಎಂದು ಈ ಮೊದಲೇ ರಾಧಿಕಾ ಅವರನ್ನು ಪ್ರಶ್ನಿಸಿದ್ದರು-"ಐದು ದಿನ ನೀವು ಮೌನವಾಗಿದ್ದಿರಿ. ಅಂಬೇಡ್ಕರ್ ಯೂನಿವರ್ಸಿಟಿಗೆ ಹೋದಾಗ ವಿದ್ಯಾರ್ಥಿಗಳು ಪ್ರತಿಭಟಿಸಿದಾಗ 'ಭಾರತಮಾತೆ ಒಬ್ಬ ಮಗನನ್ನು ಕಳಕೊಂಡಿದ್ದಾಳೆ" ಎಂದಿರಿ. ನೀವು ಹೇಳಿರುವುದನ್ನು ನೀವು ನಂಬುತ್ತೀರಾದರೆ ನನ್ನ ಮಗನನ್ನು ರಾಷ್ಟ್ರ-ವಿರೋಧಿ ಎಂದವರ ವಿರುದ್ಧ ಕ್ರಮ ಕೈಗೊಳ್ಳಲಿಲ್ಲವೇಕೆ? ಯಾರು ಸರಿ? ಮಂತ್ರಿಗಳು ಸರಿಯೋ? ಹಾಗಿದ್ದರೆ ಒಬ್ಬ ರಾಷ್ಟ್ರ-ವಿರೋಧಿಯನ್ನು ಭಾರತದ ಪುತ್ರ ಎಂದು ಪ್ರಧಾನಿಗಳು ಕರೆದದ್ದೇಕೆ? ನನಗೆ ಉತ್ತರಗಳನ್ನು ಯಾರು ಕೊಡುತ್ತಾ-ರೆ?"

ಹೌದು, ಅವರ ಈ ಪ್ರಶ್ನೆಗಳಿಗೆ, ರೋಹಿತ್‌ನನ್ನು ಮತ್ತು ಆತನ ಸಂಗಡಿಗರನ್ನು ರಾಷ್ಟ್ರ-ವಿರೋಧಿ ಎಂದು ಸಾರಿದ್ದೇಕೆ, ಅವರ ಕುಟುಂಬಗಳ ಪ್ರಮುಖ ಆಧಾರವಾದ ಸ್ಟೈಪಂಡನ್ನು ನಿಲ್ಲಿಸಿದ್ದೇಕೆ, ರೋಹಿತ್ ದಲಿತನೇ ಅಲ್ಲ ಎಂದು ಈಗಲೂ 'ತನಿಖೆ' ನಡೆಸುತ್ತಿರುವುದೇಕೆ? ಇದಕ್ಕೆಲ್ಲ ಯಾರು ಹೊಣೆ? ಸಂಸತ್ತಿನ ಚರ್ಚೆಗಳಲ್ಲಿ ಈ ಯಾವ ಪ್ರಶ್ನೆಗೂ ಉತ್ತರ ಸಿಕ್ಕಿಲ್ಲ ಎನ್ನುತ್ತಾರೆ ಬೃಂದಾ ಕಾರಟ್.

ಮರುದಿನ, ರಾಜದ್ರೋಹದ ಗಂಭೀರ ಆಪಾದನೆಯ ಮೇಲೆ ದಿಲ್ಲಿ ಪೋಲೀಸರ ಕಸ್ಟಡಿಯಲ್ಲಿರುವ ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ಹೈಯ ಕುಮಾರ್‌ನ ತಾಯಿ, ತಿಂಗಳಿಗೆ 3000ರೂ. ಸಂಬಳದಲ್ಲಿ ಕುಟುಂಬವನ್ನು ಪೋಷಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆ, ಮೀನಾ ಕೂಡ ಅಂತಹುದೇ ಪ್ರಶ್ನೆ ಕೇಳಿದ್ದಾರೆ. **ಯುವಶಕ್ತಿಯನ್ನು ಪ್ರೋತ್ಸಾಹಿಸಬೇಕು ಎಂದು ಪ್ರಧಾನ ಮಂತ್ರಿಗಳು ಹೇಳುತ್ತಾರೆ, ಆದರೆ ನನ್ನ ಮಗನ ಮೇಲೆ, ಇತರ ವಿದ್ಯಾರ್ಥಿಗಳ ಮೇಲೆ ಗುರಿಯಿಡಲಾಗಿದೆ ಏಕೆ?**

ಕನ್ಹೈಯನಿಗೆ ಜಾಮೀನು ಸಿಗಲಿಲ್ಲ ಎಂಬ ಸುದ್ದಿ ಕೇಳಿ ಆಕೆ "ಕನ್ಹೈಯನ ಜಾಮೀನಿಗೆ ಇನ್ನೂ ಕೆಲವು ದಿನ ಕಾಯಲು ನಾನು ಸಿದ್ಧಳಿದ್ದೇನೆ, ಆದರೆ ಈ ರಾಜದ್ರೋಹದ ಕೇಸ್‌ನ ನೋವನ್ನು ತಾಳಿಕೊಳ್ಳುವುದು ಕಷ್ಟ" ಎಂದಿದ್ದಾರೆ.

"ನಾನು ಪ್ರಧಾನ ಮಂತ್ರಿಗಳನ್ನು ಆಗ್ರಹದಿಂದ ಕೇಳುತ್ತೇನೆ- ಒಬ್ಬ ತಾಯಿಯ ನೋವನ್ನು ಅರ್ಥ ಮಾಡಿಕೊಳ್ಳಿ. ಕನ್ಹೈಯ ಅಮಾಯಕ, ಆತ ಯುವ ಶಕ್ತಿಯ ಪ್ರತಿನಿಧಿ" ಎಂದ ಮೀನಾ "ಮೈಂ ಕಾನೂನ್ ನಹೀ ಸಮಝ್‌ತೀ ಹೂಂ, ಪರ್ ಏಕ್ ಬಾತ್ ಜರೂರ್ ಜಾನ್‌ತೀ ಹೂಂ, ಕಿ ಮೇರಾ ಬೇಟಾ ಭಾರತ್ ಕಾ ಲಾಲ್ ಹೈ"(ನನಗೆ ಕಾನೂನು ತಿಳಿದಿಲ್ಲ, ಆದರೆ ಒಂದು ಸಂಗತಿಯಂತೂ ಖಂಡಿತಾ ಗೊತ್ತಿದೆ-ನನ್ನ ಮಗ ಭಾರತದ ಸುಪುತ್ರ)

2013ರಿಂದ ಹಾಸಿಗೆ ಹಿಡಿದಿರುವ ಕನ್ಹೈಯನ ತಂದೆ ಜೈಶಂಕರ್ ಸಿಂಗ್ ಕಣ್ಣುಗಳು ಈಗ ಟಿವಿಯ ಮೇಲೆಯೇ ನೆಟ್ಟಿವೆ. "ಕನಿಷ್ಟ ಎರಡು ಚಾನೆಲ್‌ಗಳು ನನ್ನ ಮಗನನ್ನು ಖಳನಾಯಕನೆಂದು ಚಿತ್ರಿಸಿವೆ, ಅದರೆ ಪೋಲೀಸರಿಗೆ ಯಾವುದೇ ಸಾಕ್ಷ್ಯ ತೋರಿಸಲು ಆಗಿಲ್ಲವಾದ್ದರಿಂದ ಕನ್ಹೈಯನನ್ನು ಬೇಕೆಂದೇ ಸಿಗಿಸಲಾಗುತ್ತಿದೆ ಎಂದು ಹೆಚ್ಚಿನ ಜನ ಈಗ ನಂಬುತ್ತಿದ್ದಾರೆ. ನನ್ನ ಮಗನ ಬಗ್ಗೆ ದೇಶ-ವಿದೇಶಗಳಲ್ಲೂ ಮಾತಾಡುತ್ತಿದ್ದಾರೆ. ಆದರೆ ನನ್ನಂತ ಬಡ ತಂದೆ ಕನ್ಹೈಯ ಈ ಆಪಾದನೆಯಿಂದ ಮುಕ್ತವಾಗ ಬೇಕೆಂದಷ್ಟೇ ಬಯಸುತ್ತೇನೆ"

ಪ್ರಜಾಪ್ರಭುತ್ವವಾದಿಗಳೆಲ್ಲರೂ ಕೂಡ ಪ್ರಧಾನ ಮಂತ್ರಿಗಳಂತೆ 'ಸತ್ಯಮೇವ ಜಯತೇ' ಎಂದೇ ಆಶಿಸುತ್ತಿದ್ದಾರೆ! ಏಕೆಂದರೆ ಹೆಚ್‌ಆರ್‌ಡಿ ಮಂತ್ರಿಗಳು ಹೇಳಿದ ಹಲವು ಅಂಶಗಳಲ್ಲಿ ಸತ್ಯಾಂಶವಿಲ್ಲ ಎಂದು ಮೇಲ್ನೋಟಕ್ಕೇ ಕಂಡು ಬಂದಿದೆ.

* ರೋಹಿತ್‌ನ ವಜಾದ ನಿರ್ಣಯ ಆದದ್ದು ಯುಪಿಎ ಆಳ್ವಿಕೆಯಲ್ಲಿ ಎಂದು ಆಕೆ ಹೇಳಿದ್ದಾರೆ, ಆದರೆ ಅಂತಿಮ ನಿರ್ಣಯ ಆದದ್ದು ಬಿಜೆಪಿ ನೆಮಿಸಿದ ಉಪಕುಲಪತಿ ನೇಮಿಸಿದ ಸಮಿತಿಯಿಂದ.
* "ಯಾರೂ ಈ ಮಗುವನ್ನು ಜೀವಿತಗೊಳಿಸಲು ಒಬ್ಬ ಡಾಕ್ಟರನ್ನು ಬಳಿ ಹೋಗಲು ಬಿಡಲಿಲ್ಲ" ಎಂಬ ಆಕೆಯ ಆಪಾದನೆಯನ್ನು ಸ್ವತಃ ಹೈದರಾಬಾದ್ ವಿವಿಯೇ ನಿರಾಕರಿಸಿದೆ. ಡಾ.ರಾಜಶ್ರೀ ಎಂಬುವರ ಪ್ರಮಾಣ ಪತ್ರವೇ ಇದಕ್ಕೆ ಸಾಕ್ಷಿ.
* ಇದೇ ರೀತಿ ಮಹಿಷಾಸುರ-ದುರ್ಗೆಯ ಬಗ್ಗೆ, ತೀಸ್ತಾ ಸೆಟಲ್‌ವಾಡ್ ನಾಲ್ಕನೇ ತರಗತಿಯ ಶಿಕ್ಷಕರಿಗೆಂದು ತಯಾರಿಸಿದ ಗೈಡ್ ಬಗ್ಗೆ ಹೇಳಿರುವ ಮಾತುಗಳು ಅವರ ಸಂಕುಚಿತ ಅಭಿಪ್ರಾಯಗಳಷ್ಟೇ, ಈ ಎರಡೂ ಘಟನೆಗಳಿಗೆ ಸಂಬಂಧಪಟ್ಟದ್ದಲ್ಲ.

ಇನ್ನು ಜೆಎನ್‌ಯು ಬಗ್ಗೆ ಈಗಾಗಲೇ ಮಾಧ್ಯಮಗಳೂ ಪ್ರಶ್ನಿಸಿರುವ ಅಂಶಗಳನ್ನೇ ಅವರು ಪುನರಾವರ್ತಿಸಿದ್ದಾರೆ. ಒಟ್ಟಿನಲ್ಲಿ ಅವರ 'ಭಾವಪೂರ್ಣ' ಭಾಷಣ ಎಂದಿನ ಸಂಘಪರಿವಾರ ಪರಂಪರೆಗೆ ಅನುಗುಣವಾಗಿಯೇ ಇದೆ.

ಆ ಹತ್ತು ದಿನಗಳ ನಂತರವೂ ನಿಜ ಬಣ್ಣ ಬಯಲು ಮಾಡಿಕೊಳ್ಳುತ್ತಲೇ ಇದ್ದಾರೆ........


ಆ ಹತ್ತು ದಿನಗಳಲ್ಲಿ ತಮ್ಮ ನಿಜಬಣ್ಣ ಬಯಲಾದರೂ ಬಿಜೆಪಿ ಶಾಸಕರೂ ಸೇರಿದಂತೆ ಸಂಘ ಪರಿವಾರದ ಮಂದಿ ಜೆಎನ್‌ಯು ವಿದ್ಯಾರ್ಥಿಗಳು ಮತ್ತು ಅವರನ್ನು ಬೆಂಬಲಿಸುವವರ ವಿರುದ್ಧ, ಮುಖ್ಯವಾಗಿ ಎಡಪಂಥೀಯರ ವಿರುದ್ಧ ಕೂಗುವುದು ನಿಂತಿಲ್ಲ, ಬದಲಿಗೆ ಅದು ಇನ್ನಷ್ಟು ಹಾಸ್ಯಾಸ್ಪದ ಮಟ್ಟಗಳಿಗೆ ಇಳಿಯುತ್ತಿದೆ, ರಾಜಸ್ತಾನದ ಒಬ್ಬ ಬಿಜೆಪಿ ಶಾಸಕ , ಜೆಎನ್‌ಯುನ ಕಸದ ರಾಶಿಗಳಲ್ಲಿ ಗರ್ಭ ನಿರೋಧಕಗಳನ್ನು ಲೆಕ್ಕ ಹಾಕುವ ಮಟ್ಟದ ವರೆಗೆ...!

***

ಈ ನಡುವೆ ಫೆ. 21ರಂದು ಅವರ 'ರಾಜದ್ರೋಹ'ದ ಪಟ್ಟಿಯಲ್ಲಿದ್ದು ಅವರಿಗೆ ಸಿಕ್ಕಿರದ ಐದು ವಿದ್ಯಾರ್ಥಿಗಳು, ಮಾಧ್ಯಮಗಳು ಭಯೋತ್ಪಾದಕ' ಎಂದು ಚಿತ್ರಿಸುತ್ತಿರುವ ಉಮರ್ ಖಾಲಿದ್ ಕೂಡ, ಜೆಎನ್‌ಯು ಕ್ಯಾಂಪಸ್ಸಿನಲ್ಲಿ ಕಾಣಿಸಿಕೊಂಡರು. ಆದರೆ ಅವರನ್ನು ಬಂಧಿಸಲು ಕ್ಯಾಂಪಸ್ ಒಳಗೆ ಪ್ರವೇಶಿಸಲು ಈ ಬಾರಿ ಪೋಲೀಸರಿಗೆ ವಿವಿ ಆಡಳಿತ ಅನುಮತಿ ನೀಡಲಿಲ್ಲ.

ಉಮರ್ ಖಾಲಿದ್ ಜೆಎನ್‌ಯು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾಡಿದ ಭಾಷಣ ಮೋದಿ ಸರಕಾರದ ವರ್ತನೆಯನ್ನು, ಜತೆಗೆ ಕೆಲವು ಮಾಧ್ಯಮಗಳ ಇನ್ನಷ್ಟು ಹಸಿ ಸುಳ್ಳುಗಳನ್ನೂ ಬಯಲಿಗೆಳೆದಿದೆ.

ಉಮರ್ ಖಾಲಿದ್ ಮತ್ತು ಅನಿರ್ಬನ್ ಭಟ್ಟಾಚಾರ್ಯ ದಿಲ್ಲಿ ಪೋಲೀಸ್‌ಗೆ ತಾವು ಶರಣಾಗುವ ಮೊದಲು ತಮಗೆ ಭದ್ರತೆ ಬೇಕೆಂದು ದಿಲ್ಲಿ ಹೈಕೋರ್ಟಿಗೆ ಅರ್ಜಿ ಸಲ್ಲಿಸಿದರು. ಅದು ಅವರಿಗೆ ಸಿಗಲಿಲ್ಲ. ಫೆ.23-24 ರ ನಡುರಾತ್ರಿಯಲ್ಲಿ ಪೋಲೀಸರಿಗೆ ಶರಣಾಗಿದ್ದಾರೆ.



ವ್ಯಂಗ್ಯ ಚಿತ್ರ ಕೃಪೆ: ಸುರೇಂದ್ರನ್, ದಿ ಹಿಂದು

***

ಕನ್ಹೈಯ ಕುಮಾರ್ ಜಾಮೀನು ಅರ್ಜಿ ಹಾಕಿದರೆ ಅದನ್ನು ದಿಲ್ಲಿ ಪೋಲೀಸ್ ವಿರೋಧಿಸುವುದಿಲ್ಲ ಎಂದು ಹೇಳಿದ್ದ ಪೋಲೀಸ್ ಕಮಿಶನರ್ ತಿಪ್ಪರಲಾಗ ಹಾಕಿದ್ದಾರೆ. ಫೆ. 23ರಂದು ದಿಲ್ಲಿ ಹೈಕೋರ್ಟ್ ಎದುರು ಜಾಮೀನು ಅರ್ಜಿಯನ್ನು ದಿಲ್ಲಿ ಪೋಲೀಸ್ ವಿರೋಧಿಸಿದೆ.

***

'ರಾಜದ್ರೋಹ'ದ ಆಪಾದನೆಗೆ ಆಧಾರವಾಗಿದ್ದ ವೀಡಿಯೋ ಕೂಡ ಖೋಟಾ ಆಗಿರಬಹುದೆಂಬ ಸಂದೇಹ ಬಲವಾಗುತ್ತಿರುವ ಹಿನ್ನೆಲೆಯಲ್ಲಿ ದಿಲ್ಲಿ ಪೋಲೀಸ್ ಝೀ ನ್ಯೂಸ್‌ನಿಂದ ಅದರ ಮೂಲವನ್ನು ಕೇಳಿದೆ ಎಂದು ವರದಿಯಾಗಿದೆ. ಮಾಧ್ಯಮಗಳ ಬಗ್ಗೆಯೇ ಇರುವ 'ದಿ ಹೂಟ್' ವೆಬ್‌ತಾಣ ದಿಲ್ಲಿ ಪೋಲೀಸ್ ಹಾಕಿರುವ ಎಫ್‌ಐಆರ್ ವಿಶ್ಲೇಷಿಸಿ ದಿಲ್ಲಿ ಪೋಲೀಸರಿಗೆ ಮೊದಲ 'ಕ್ರಮ ವಹಿಸಬಹುದಾದ ಸಾಕ್ಷ್ಯ' ನೀಡಿದ್ದು ಝೀನ್ಯೂಸ್‌ನ ವೀಡಿಯೋ, ಇದು 'ಜೆಎನ್‌ಯು ವಿದ್ಯಾರ್ಥಿಗಳ ವಿರುದ್ಧ ಚಿತಾವಣೆ' ಎಂಬ ತೀರ್ಮಾನಕ್ಕೆ ಬಂದಿದೆ.

ಫೆಬ್ರುವರಿ 9ರ ಘಟನೆಯ ವೇಳೆಗೆ ದಿಲ್ಲಿ ಪೋಲೀಸರು ಅಲ್ಲಿದ್ದರು. ಆದರೆ ಅಲ್ಲಿ ಕೇಳಬಂದ ಘೋಷಣೆಗಳ ಆಧಾರದಲ್ಲಿ ಯಾವುದೇ ದೂರು ದಾಖಲಿಸಬೇಕೆಂದು ಅವರಿಗೆ ಆಗ ಅನ್ನಿಸಿರಲಿಲ್ಲ. ಝೀ ನ್ಯೂಸ್ ವರದಿಯ ನಂತರವೇ ದಿಲ್ಲಿ ಪೋಲೀಸ್ 'ಕಾರ್ಯಾಚರಣೆ'ಗೆ ಮುಂದಾದದ್ದು. ದಿಲ್ಲಿ ಪೋಲೀಸ್‌ಗೆ ಈ ಬಗ್ಗೆ ಗೊತ್ತಾದದ್ದು ಹೇಗೆ? ಇದನ್ನು ಅವರ ಎಫ್‌ಐಆರ್ ಹೇಳುವುದಿಲ್ಲ. ಆ ಚಾನೆಲ್‌ನವರೇ ಅದನ್ನು ಕೊಟ್ಟರೇ ಎಂದು 'ಹೂಟ್' ವಿಶ್ಲೇಷಣೆ ಪ್ರಶ್ನಿಸಿದೆ.


***

ನಿಜವಾದ ದೇಶಪ್ರೇಮದ ಪ್ರಶ್ನೆ ಕಾಡಿದಾಗ..........

ಇದರ ಬೆನ್ನಹಿಂದೆಯೇ ಈ ಚಾನೆಲ್‌ನ ಒಬ್ಬ ಪ್ರೊಡ್ಯೂಸರ್ ವಿಶ್ವ ದೀಪಕ್ ತನ್ನ ಚಾನೆಲ್‌ನ ವರ್ತನೆಯಿಂದ ಬೇಸತ್ತು ಫೆಬ್ರುವರಿ 19ರಂದು ರಾಜೀನಾಮೆ ನೀಡಿದರು. 'ಪಾಕಿಸ್ತಾನ ಜಿಂದಾಬಾದ್' ಎಂಬ ಘೋಷಣೆ ಆ ವೀಡಿಯೋದಲ್ಲಿ ಇರಲೇ ಇಲ್ಲ. ಎಲ್ಲಿಯೋ ಮೂಲೆಯಿಂದ ಅಸ್ಪಷ್ಟವಾಗಿ ಕೇಳಬರುತ್ತಿದ್ದ ಘೋಷಣೆಗಳು ಅದೇ ಎಂದು ಬಾರಿಬಾರಿ ಪ್ರಸಾರ ಮಾಡಿ ಉನ್ಮಾದ ಹರಡಿದೆವು. ಅವು ಕನ್ಹೈಯಾ ಮತ್ತು ಅವರ ಸಂಗಡಿಗರ ದನಿಗಳು ಎಂದು ನಾವು ನಂಬಿದ್ದು ಹೇಗೆ? 'ಭಾರತೀಯ ಕೋರ್ಟುಗಳು ಜಿಂದಾಬಾದ್' ' ಎಂಬ ಘೋಷಣೆ ನಮ್ಮ ಪೂರ್ವಾಗ್ರಹದಿಂದಾಗಿ 'ಪಾಕಿಸ್ತಾನ ಜಿಂದಾಬಾದ್' ಎಂದು ನಮಗೆ ಕೇಳಿಸಿತೆ? ನಾವು ಸರಕಾರ ಬಯಸುದಂತೆ ಕೆಲಸ ಮಾಡಿದ್ದೇವೆ. ಈ ಮೂಲಕ ಕೆಲವು ವಿದ್ಯಾರ್ಥಿಗಳ ಭವಿಷ್ಯವನ್ನು, ಅವರ, ಅವರ ಕುಟುಂಬಗಳ ನಿರೀಕ್ಷೆಗಳನ್ನು ನಾಶಪಡಿಸುವ ಅಂಚಿಗೆ ತಂದು ನಿಲ್ಲಿಸಿದ್ದೇವೆ ಎಂದು ವಿಶ್ವ ದೀಪಕ್ ತನ್ನ ರಾಜೀನಾಮೆ ಪತ್ರದಲ್ಲಿ ಬೇಸರ ವ್ಯಕ್ತಪಡಿಸಿದ್ದಾರೆ

"..ಇದು ವೈಯಕ್ತಿಕ ಸಂಗತಿಯೇನಲ್ಲ. ಇದು ವೃತ್ತಿ ಕರ್ತವ್ಯ, ಸಾಮಾಜಿಕ ಪ್ರಜ್ಞೆ, ಮತ್ತು ಅಂತಿಮವಾಗಿ ದೇಶಪ್ರೇಮದ್ದು. ನಿಮ್ಮ ಸಂಸ್ಥೆಯ ಭಾಗವಾಗಿ ನಾನು ಪತ್ರಕರ್ತನಾಗಿ ಕಳೆದ ಒಂದು ವರ್ಷದಲ್ಲಿ ಹಲವು ಬಾರಿ ಈ ಮೂರರಲ್ಲೂ ವಿಫಲನಾಗಿದ್ದೇನೆ ಎಂದು ತಿಳಿಸಲು ಖೇದವಾಗುತ್ತದೆ" ಎಂದು ವಿಶ್ವ ದೀಪಕ್ ತನ್ನ ರಾಜೀನಾಮೆ ಪತ್ರದಲ್ಲಿ ಹೇಳಿರುವುದಾಗಿ ವರದಿಯಾಗಿದೆ.

ಅಂತರ್ರಾಷ್ಟ್ರೀಯ ಯೋಗ ದಿನಕ್ಕೆ ತಾಲೀಮು



ವ್ಯಂಗ್ಯ ಚಿತ್ರ ಕೃಪೆ: ಅಧ್ವರ್ಯು, ಟೈಮ್ಸ್ ಆಫ್ ಇಂಡಿಯಾ

ಬಂಡವಾಳಶಾಹಿ ಬಿಕ್ಕಟ್ಟನ್ನು ಪರಿಹರಿಸಲು ದಿಕ್ಕು ಕಾಣದ ಸರ್ಕಾರ



ಕೆ.ಎಂ.ನಾಗರಾಜ್

ಬಂಡವಾಳಶಾಹಿ ಜಾಗತಿಕ ಬಿಕ್ಕಟ್ಟಿನ ತಾಪ ಭಾರತದ ಅರ್ಥವ್ಯವಸ್ಥೆಗೆ ಈ ವರೆಗೆ ತಟ್ಟದಂತೆ ತಡೆದಿದ್ದ ಊರುಗೋಲುಗಳು ಒಂದೊಂದಾಗಿ ಉರುಳುತ್ತಿರುವುದರಿಂದ ಈಗ ಅದು ಆರ್ಥಿಕ ಹಿಂಜರಿತಕ್ಕೊಳಗಾಗುತ್ತಿದೆ. ಇಕ್ಕಟ್ಟಿಗೆ ಸಿಕ್ಕಿಹಾಕಿಕೊಂಡಿರುವ ಮೋದಿ ಸರ್ಕಾರವು ವಿದೇಶಿ ಬಂಡವಾಳದ ಮುಂದೆ ಅಸಂಬದ್ಧವಾಗಿ ಅಂಗಲಾಚುತ್ತಿದೆ. ಯಾರನ್ನಾದರೂ "ರಾಷ್ಟ್ರ ವಿರೋಧಿ" ಎಂದು ಕರೆದು, ಅವರ ಮೇಲೆ ರಾಜದ್ರೋಹದ ಕೇಸು ಜಡಿಯುವುದರಿಂದ ಹಿಡಿದು ದೈಹಿಕ ಹಲ್ಲೆ ಮಾಡುವವರೆಗೂ ಹೇಸದ ಮಂದಿ ಇಂತಹ ಅಸಂಬದ್ಧ ಅಂಗಲಾಚನೆ ಮಾಡುತ್ತಿದ್ದಾರೆ. ಇವರ ಯೋಜನೆ ದೇಶದ ಆರ್ಥಿಕ ಸ್ವಾತಂತ್ರ್ಯದ ಬುನಾದಿಯನ್ನು ಅಲುಗಾಡಿಸುವುಷ್ಟೇ ಅಲ್ಲ; ಅದು ಸೋಲುವುದೂ ಅಷ್ಟೇ ಖಚಿತ ಎನ್ನುತ್ತಾರೆ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್

2007–08ರಲ್ಲಿ ತಲೆ ಎತ್ತಿದ ಬಂಡವಾಳಶಾಹಿ ಜಾಗತಿಕ ಬಿಕ್ಕಟ್ಟು ಇನ್ನೂ ಮುಂದುವರೆಯುತ್ತಿದೆ. ಅದರ ಹೊಡೆತದಿಂದ ತತ್ತರಿಸಿದ ಅನೇಕ ದೇಶಗಳ ನೋವು ಇನ್ನೂ ಇಳಿದಿಲ್ಲ. ಆದರೆ, ಭಾರತದ ಅರ್ಥವ್ಯವಸ್ಥೆಗೆ ಬಿಕ್ಕಟ್ಟಿನ ಬಿಸಿ ಬಹಳ ಕಾಲ ತಟ್ಟಿರಲಿಲ್ಲ. ಅದರ ಅಡ್ಡಪರಿಣಾಮಗಳು ಭಾರತದಲ್ಲಿ ಈಗ ಕಾಣಿಸಿಕೊಳ್ಳುತ್ತಿವೆ.

ಮುಖ್ಯವಾಗಿ ಮೂರು ಅಂಶಗಳು ಬಿಕ್ಕಟ್ಟಿನ ಬಿಸಿ ತಟ್ಟದಂತೆ ನೋಡಿಕೊಂಡವು. ಬಿಕ್ಕಟ್ಟನ್ನು ಪರಿಹರಿಸಲು ಆ ಮೂರೂ ಅಂಶಗಳೂ ಈಗ ಸರ್ಕಾರದ ನೆರವಿಗೆ ಬರುತ್ತಿಲ್ಲ. ಏಕೆಂದರೆ, ಆ ಅಂಶಗಳು ತಮ್ಮ ಪಯಣದ ಅವಧಿ ಮುಗಿಸಿವೆ. ಸರ್ಕಾರದ ಬತ್ತಳಿಕೆಯಲ್ಲಿ ಈಗ ಬಾಣಗಳಿಲ್ಲದಂತಾಗಿದೆ. ಹಾಗಾಗಿ, ಬಿಕ್ಕಟ್ಟನ್ನು ಪರಿಹರಿಸಲು ಸರ್ಕಾರವು ಕೈಕೊಳ್ಳುವ ಕ್ರಮಗಳು ಬಿಕ್ಕಟ್ಟನ್ನು ಶಮನಗೊಳಿಸುವ ಬದಲು ಅದನ್ನು ಜಟಿಲಗೊಳಿಸುತ್ತದೆ.

ಆರ್ಥಿಕ ಉತ್ತೇಜನ

ಬಿಕ್ಕಟ್ಟಿನ ಬಿಸಿ ತಟ್ಟದಂತೆ ನೋಡಿಕೊಂಡ ಮೊದಲನೆಯ ಅಂಶ, ಆರ್ಥಿಕ ಉತ್ತೇಜನ. ಜಾಗತಿಕ ಮಟ್ಟದಲ್ಲಿ ಬಿಕ್ಕಟ್ಟು ಕಾಣಿಸಿಕೊಳ್ಳುತ್ತಿದ್ದಂತೆಯೇ, ನಮ್ಮ ದೇಶದ ಸರ್ಕಾರ ಆರ್ಥಿಕ ಅರ್ಥವ್ಯವಸ್ಥೆಗೆ ಉತ್ತೇಜನ ನೀಡುವಂತಹ ಒಂದು ನೆರವಿನ ಪ್ಯಾಕೇಜ್ ಕಾರ್ಯಕ್ರಮ ಕೈಗೊಂಡಿತು. ಈ ಕ್ರಮದಿಂದಾಗಿ, ಸರ್ಕಾರ ಹಣಕಾಸಿನ ತೀವ್ರ ಕೊರತೆ ಅನುಭವಿಸಿತು ಮತ್ತು ಅದರ ಜೊತೆಯಲ್ಲಿ ಹಣಕಾಸು ಬಂಡವಾಳದ ಕಟು ವಿರೋಧವನ್ನೂ ಎದುರಿಸಿತು. ಈ ಕ್ರಮವನ್ನು ವಿರೋಧಿಸಲು ಹಣಕಾಸು ಬಂಡವಾಳಕ್ಕೆ ತನ್ನದೇ ಆದ ಕಾರಣಗಳಿವೆ. ಬಿಕ್ಕಟ್ಟನ್ನು ಪರಿಹರಿಸುವ ಸಲುವಾಗಿ ಸರ್ಕಾರವು ಸಾಮಾಜಿಕ ಅವಶ್ಯಕತೆಗಳಿಗೆ ಹೆಚ್ಚಿನ ಪ್ರಮಾಣದ ಹಣ ಖರ್ಚುಮಾಡಿದ್ದರಿಂದ ಹಣಕಾಸು ಬಂಡವಾಳವು ತನ್ನ ಪ್ರಾಮುಖ್ಯತೆಗೆ ಧಕ್ಕೆಯಾಯಿತೆಂದು ಬಗೆಯುತ್ತದೆ. ಏಕೆಂದರೆ, ಬಂಡವಾಳಶಾಹಿಯು ಸಮಸ್ಯೆಗಳನ್ನು ತಾನೇ ಸ್ವಯಂಸ್ಫೂರ್ತಿಯಿಂದ ನಿಭಾಯಿಸುವ ಸಾಮರ್ಥ್ಯಹೊಂದಿರುವುದಾಗಿ ಬಗೆಯುತ್ತದೆ. ಆದ್ದರಿಂದ, ಸರ್ಕಾರವೇ ನೇರವಾಗಿ ಹೆಚ್ಚಿನ ಪ್ರಮಾಣದಲ್ಲಿ ಖರ್ಚುಮಾಡಿದಾಗ ಅದು ಮುಖ ಗಂಟಿಕ್ಕಿಕೊಳ್ಳುತ್ತದೆ. ಏಕೆಂದರೆ, ಬಂಡವಾಳಶಾಹಿಯ ಕ್ಷೇತ್ರದಲ್ಲಿ ಸರ್ಕಾರ ಪ್ರವೇಶಿಸಿ ವ್ಯವಹಾರ ನಡೆಸಿದರೆ, ಅದು ತನ್ನ ಅಸ್ತಿತ್ವವನ್ನು ಕಳೆದುಕೊಂಡಂತೆ ಭಾವಿಸುತ್ತದೆ. ಬಂಡವಾಳಶಾಹಿಯ ಸಾಮಾಜಿಕ ಔಚಿತ್ಯವನ್ನೇ ಪ್ರಶ್ನಿಸಿದಂತಾಗುತ್ತದೆ. ಸರ್ಕಾರದ ಬೆಂಬಲವಿಲ್ಲದೆ ಬಂಡವಾಳಶಾಹಿ ವ್ಯವಸ್ಥೆ ಬದುಕಲಾರದು ಎನ್ನುವುದಾದರೆ, ಖಾಸಗಿ ಬಂಡವಾಳದ ಅಗತ್ಯವಾದರೂ ಏನು? ಎನ್ನುವ ಪ್ರಶ್ನೆ ಜನರಲ್ಲಿ ಮೂಡುತ್ತದೆ. ಮತ್ತು ಸರ್ಕಾರದ ಸಂಸ್ಥೆಗಳು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿರಬೇಕೆಂದು ಜನ ಬಯಸುತ್ತಾರೆ. ಆಗ, ಸರ್ಕಾರವು ಬಂಡವಾಳಶಾಹಿಯ ಸ್ಥಾನವನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡಂತಾಗುತ್ತದೆ.

ಪ್ರೋತ್ಸಾಹ ಧನ

ಬಂಡವಾಳಶಾಹಿ ವ್ಯವಸ್ಥೆಯು (ಸ್ವಯಂಸ್ಫೂರ್ತಿಯಿಂದ) ಸಮಸ್ಯೆಗಳನ್ನು ನಿಭಾಯಿಸಬಲ್ಲ ಸಾಮರ್ಥ್ಯವಿದೆ ಎಂದು ಜನರ ಮನಸ್ಸಿನಲ್ಲಿ ಬಿಂಬಿಸಿರುವ ಅಭಿಪ್ರಾಯಗಳಿಗೆ ಧಕ್ಕೆ ಬರದಂತೆ ನೋಡಿಕೊಳ್ಳಲು ಹಣಕಾಸು ಬಂಡವಾಳ ಪ್ರಯತ್ನಿಸುತ್ತದೆ. ಆದ್ದರಿಂದ. ಅರ್ಥವ್ಯವಸ್ಥೆಯನ್ನು ಚೇತನಗೊಳಿಸುವ ಸಲುವಾಗಿ ಸರ್ಕಾರವು ಒದಗಿಸುವ ಯಾವುದೇ ನೆರವು ತನ್ನ ಹಿತಾಸಕ್ತಿಗೆ ಒತ್ತಾಸೆಯಾಗುವ "ಪ್ರೋತ್ಸಾಹ ಧನ"ರೂಪದಲ್ಲಿರಬೇಕೆಂದು ಬಂಡವಾಳಶಾಹಿ ಬಯಸುತ್ತದೆ. ಆದ್ದರಿಂದ, ನವ ಉದಾರಿ ಅರ್ಥಶಾಸ್ತ್ರಜ್ಞರು "ಆರ್ಥಿಕ ಉತ್ತೇಜನ" ಪ್ಯಾಕೇಜ್‌ಅನ್ನು ಖಂಡ ತುಂಡವಾಗಿ ವಿರೋಧಿಸಿದರು. ಸರ್ಕಾರದ ಇಂತಹ "ದುಂದುಗಾರಿಕೆ"ಯ ಖರ್ಚುಗಳಿಂದ ಅರ್ಥವ್ಯವಸ್ಥೆಯ ದಾರಿತಪ್ಪಿದೆ ಎಂದು ಟೀಕಿಸಿದರು. ಸರ್ಕಾರದ ದುಂದುಗಾರಿಕೆ/ ವೆಚ್ಚಗಳು ಮಿತಿ ಮೀರದಂತೆ ನೋಡಿಕೊಳ್ಳಲು "ಹಣಕಾಸು ಶಿಸ್ತು ಪಾಲನೆ ಕಾಯ್ದೆ" ಜಾರಿಮಾಡಿಸಿದರು. ಹಣಕಾಸು ಶಿಸ್ತು ಪಾಲನೆಯ ಹೆಸರಿನಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಆರೋಗ್ಯ, ಶಿಕ್ಷಣ, ಆಹಾರ ಸಬ್ಸಿಡಿ ಮುಂತಾದ ಸಾಮಾಜಿಕ ಕಲ್ಯಾಣ ಯೋಜನೆಗಳಿಗೆ ಒದಗಿಸುತ್ತಿದ್ದ ಹಣದಲ್ಲಿ ಭಾರಿ ಪ್ರಮಾಣದ ಕಡಿತ ಮಾಡಲಾಗಿದೆ. ಇಂತಹ ಯೋಜನೆಗಳ ಮೇಲೆ ಮಾಡುವ ವೆಚ್ಚಗಳು ಆರ್ಥಿಕ ಹಿಂಜರಿತ ಉಂಟಾಗುವುದನ್ನು ತಡೆಯುತ್ತಿದ್ದವು. ಈಗ ಅಂತಹ ವೆಚ್ಚಗಳಿಗೆ ಅವಕಾಶವಿಲ್ಲ. ಹಾಗಾಗಿ, ಮೊದಲನೆಯ ಅಂಶ– ಆರ್ಥಿಕ ಉತ್ತೇಜನರ ನೀಡುವ ಸಾಧ್ಯತೆ ಇಲ್ಲವಾಗಿದೆ.

ಆಸ್ತಿಗಳ ಬೆಲೆಗಳ "ಗುಳ್ಳೆ"ಗಳು

ಆರ್ಥಿಕ ಬಿಕ್ಕಟ್ಟನ್ನು ಹಿಮ್ಮೆಟ್ಟಿಸಲು ನೆರವಾದ ಎರಡನೆಯ ಅಂಶ, ಆಸ್ತಿಗಳ ಬೆಲೆಗಳ "ಗುಳ್ಳೆ"ಗಳು. ಅಂದರೆ, ಭೂಮಿ, ಬಂಗಾರ, ಷೇರುಗಳು ಇತ್ಯಾದಿಗಳ ಬೆಲೆಗಳಲ್ಲಿ ಆದ ಏರಿಕೆ. ಅಮೇರಿಕಾದಲ್ಲಿ, ವಸತಿ ಮಾರುಕಟ್ಟೆಯ ಪತನದ ನಂತರವೂ ಭಾರತದಲ್ಲಿ, ಷೇರು ಮಾರುಕಟ್ಟೆಯಲ್ಲಿ ಬೆಲೆಗಳು ಯದ್ವಾ ತದ್ವಾ ಮೇಲೆ ಹೋಗಿ "ಗುಳ್ಳೆ"ಗಳನ್ನು ಸೃಷ್ಟಿಸಿದವು. ಈ ಪರಿಸ್ಥಿತಿ ಉಂಟಾಗಲು ಎರಡು ಕಾರಣಗಳಿದ್ದವು. ಮೊದಲನೆಯದು, ಅಮೆರಿಕದಲ್ಲಿ ಆರ್ಥಿಕ ಹಿಂಜ–ರಿತ ಆರಂಭವಾದ ಕೂಡಲೆ ಹೂಡಿಕೆದಾರರು ಭಾರತದಂತಹ ದೇಶಗಳತ್ತ ಹೊರಳಿದರು. ಎರಡನೆಯದು, ಅಮೆರಿಕದಲ್ಲಿ ಬಡ್ಡಿದರಗಳನ್ನು 0%ಗೆ ಹತ್ತಿರದವರೆಗೆ ಇಳಿಸಿದ ಪರಿಣಾಮವಾಗಿ, ಬಂಡವಾಳವು ಹೆಚ್ಚಿನ ಬಡ್ಡಿ ಪಡೆಯುವ ಆಸೆಯಿಂದ ಭಾರತದಂತಹ ದೇಶಗಳತ್ತ ವಲಸೆ ಬಂತು. ಇದು "ಗುಳ್ಳೆ"ಗಳ ನಿರ್ಮಾಣಕ್ಕೆ ಕಾರಣವಾಯಿತು.

ಭೂಮಿ, ಬಂಗಾರ, ಷೇರುಗಳು ಇತ್ಯಾದಿಗಳ ಬೆಲೆಗಳು ಮೇಲೆ ಹೋದ ಪರಿಣಾಮವಾಗಿ ಒಟ್ಟಾರೆ ಬೇಡಿಕೆಯೂ ಹೆಚ್ಚಿತು. "ಗುಳ್ಳೆ"ಗಳು ನಿರ್ಮಿಸಿದ ತೋರಿಕೆಯ ಸಂಪತ್ತಿನ ವೃದ್ಧಿಯು ಬಳಕೆಯನ್ನೂ ಹೆಚ್ಚಿಸಿತು ಮತ್ತು ಹೂಡಿಕೆಯನ್ನೂ ಹೆಚ್ಚಿಸಿತು. ಈ ಅಂಶಗಳು ಆರ್ಥಿಕ ಹಿಂಜರಿತ ಉಂಟಾಗುವುದನ್ನು ತಡೆದವು.

ಕರಡಿ ಕುಣಿತ

ಮಾರ್ಚ್ 2015ರಲ್ಲಿ 30,000 ಅಂಕಗಳ ಮಟ್ಟ ತಲುಪಿದ ಷೇರು ಸೂಚ್ಯಂಕವು ಆಗಸ್ಟ್ 2015ರಲ್ಲಿ ಚೀನಾದ ಕರೆನ್ಸಿಯ ಅಪಮೌಲ್ಯದ ಹಿನ್ನೆಲೆಯಲ್ಲಿ ಭಾರಿ ಕುಸಿತ ಕಂಡಿತು. ನಂತರ, 2016ರ ಫೆಬ್ರವರಿ 11ರಂದು 800 ಅಂಕಗಳ ಕುಸಿತವಾಗಿದೆ. ಬರುವ ದಿನಗಳಲ್ಲಿ ಅದು 20,000ದ ಮಟ್ಟಕ್ಕೆ ಕುಸಿಯಬಹುದೆಂದು ಮಾರುಕಟ್ಟೆ ಪಂಡಿತರು ಆತಂಕ ವ್ಯಕ್ತಪಡಿಸಿದ್ದಾರೆ.

ಎಲ್ಲ ದೇಶಗಳಲ್ಲೂ ಷೇರು ಮಾರುಕಟ್ಟೆಗಳು ಬೀಳುತ್ತಿವೆ. ಮುಂದುವರೆಯುತ್ತಿರುವ ಬಂಡವಾಳಶಾಹಿ ಬಿಕ್ಕಟ್ಟನ್ನು ಅದು ಭಾಗಶ: ಪ್ರತಿಬಿಂಬಿಸುತ್ತಿದೆ ಎನ್ನಬಹುದು. ವಿಶೇಷವಾಗಿ, ಅಮೆರಿಕದಲ್ಲಿ ಬಡ್ಡಿದರಗಳನ್ನು ಸ್ವಲ್ಪ ಮಟ್ಟಿಗೆ ಏರಿಸಿರುವುದರಿಂದ ಡಾಲರ್ ಹೂಡಿಕೆದಾರರು ವಿಶ್ವದ ಉಳಿದ ಭಾಗಗಳಿಂದ ತಮ್ಮ ಹೂಡಿಕೆಯನ್ನು ಅಮೆರಿಕದತ್ತ ತಿರುಗಿಸುತ್ತಾರೆ. ಇದು, ಭಾರತದಂತಹ ಷೇರು ಮಾರುಕಟ್ಟೆಗಳ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಹಾಗಾಗಿ, ಬಂಡವಾಳಶಾಹಿ ಬಿಕ್ಕಟ್ಟಿನ ಬಿಸಿ ತಟ್ಟದಂತೆ ನೋಡಿಕೊಂಡ ಎರಡನೆಯ ಅಂಶವೂ ತನ್ನ ಬಲ ಕಳೆದುಕೊಂಡಿದೆ.

ಅಪಾಯದಲ್ಲಿ ಬ್ಯಾಂಕ್‌ಗಳು

ಆರ್ಥಿಕ ಬಿಕ್ಕಟ್ಟಿನ ತಾಪ ತಕ್ಷಣ ತಟ್ಟದಂತೆ ತಡೆದ ಮೂರನೆ ಅಂಶ, ಮೂಲ ಸೌಕರ್ಯಗಳ ಮೇಲಿನ ಹೂಡಿಕೆ. ಮೂಲ ಸೌಕರ್ಯಗಳನ್ನು ನಿರ್ಮಿಸಲು ಸರ್ಕಾರ ಖಾಸಗಿ ಕ್ಷೇತ್ರದ ಮೊರೆ ಹೋಗಿತ್ತು. ಅವರಿಗೆ ಸಾರ್ವಜನಿಕ ಕ್ಷೇತ್ರದ ಬ್ಯಾಂಕ್‌ಗಳಿಂದ ಬೃಹತ್ ಪ್ರಮಾಣದ ಸಾಲ ಕೊಡಿಸಿತು. ಮೂಲ ಸೌಕರ್ಯಗಳ ಅನೇಕ ಯೋಜನೆಗಳು ಪೂರ್ಣಗೊಂಡಿವೆ. ಅವುಗಳ ಸಾಮರ್ಥ್ಯ ಪೂರ್ಣ ಪ್ರಮಾಣದಲ್ಲಿ ಬಳಕೆಯಾಗುತ್ತಿಲ್ಲ. ಹಾಗಾಗಿ, ಮೂಲ ಸೌಕರ್ಯ ಅಭಿವೃದ್ಧಿ ಕ್ಷೇತ್ರದಲ್ಲಿ ತೊಡಗಿರುವ ಖಾಸಗಿ ಕಂಪೆನಿಗಳು ಬ್ಯಾಂಕ್‌ಗಳಿಂದ ಪಡೆದ ಸಾಲದ ಬಡ್ಡಿಯನ್ನೂ ಕಟ್ಟುವ ಪರಿಸ್ಥಿತಿಯಲ್ಲಿಲ್ಲ. ಇನ್ನು ಅಸಲು ಮರುಪಾವತಿಯ ಮಾತೆಲ್ಲಿ? ಮೂಲ ಸೌಕರ್ಯ ವಲಯದಲ್ಲಿ ವಸೂಲಾಗದ ಸಾಲಗಳ ಪ್ರಮಾಣ ಅಗಾಧವಾಗಿದೆ. ಆದ್ದರಿಂದ, ಅವುಗಳಿಗೆ ಸಾಲ ಕೊಟ್ಟಿರುವ ಬ್ಯಾಂಕ್‌ಗಳ ಪರಿಸ್ಥಿತಿ ಅಪಾಯದಲ್ಲಿದೆ. ಹಾಗಾಗಿ, ಆರ್ಥಿಕ ಹಿಂಜರಿತವನ್ನು ಹಿಮ್ಮೆಟ್ಟಿಸಲು ಸಮರ್ಥವಾಗಿದ್ದ ಈ ದಾರಿಯೂ ಬಂದ್ ಆಗಿದೆ, ಸರ್ಕಾರದ ಪಾಲಿಗೆ.

ಈ ಎಲ್ಲ ವಿವರಗಳು ಒಂದು ಮುಖ್ಯವಾದ ಅಂಶವನ್ನು ವ್ಯಕ್ತಪಡಿಸುತ್ತವೆ. ಬಂಡವಾಳಶಾಹಿ ಜಾಗತಿಕ ಬಿಕ್ಕಟ್ಟಿನ ತಾಪ ಭಾರತದ ಅರ್ಥವ್ಯವಸ್ಥೆಗೆ ಈ ವರೆಗೆ ತಟ್ಟದಂತೆ ತಡೆದಿದ್ದ ಊರುಗೋಲುಗಳು ಒಂದೊಂದಾಗಿ ಉರುಳುತ್ತಿರುವುದರಿಂದ ಈಗ ಅದು ಆರ್ಥಿಕ ಹಿಂಜರಿತಕ್ಕೊಳಗಾಗುತ್ತಿದೆ.

ಇಕ್ಕಟ್ಟಿಗೆ ಸಿಕ್ಕಿಹಾಕಿಕೊಂಡಿರುವ ಮೋದಿ ಸರ್ಕಾರವು 'ಮೇಕ್ ಇನ್ ಇಂಡಿಯಾ' ಪ್ರಚಾರದಲ್ಲಿ ತೊಡಗಿದೆ. ಸರಕುಗಳನ್ನು ಭಾರತದಲ್ಲಿ ಉತ್ಪಾದಿಸಿ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರುವಂತೆ ವಿದೇಶಿ ಬಂಡವಾಳವನ್ನು ಕೋರುತ್ತಿದೆ ಮತ್ತು ಹೂಡಿಕೆದಾರರನ್ನು ಆಕರ್ಷಿಸಲು ಅನೇಕ ರಿಯಾಯ್ತಿಗಳ ಆಮಿಷ ಒಡ್ಡಿದೆ.

ಅಸಂಬದ್ಧ ಅಂಗಲಾಚನೆ

ಭಾರತದ ಅರ್ಥವ್ಯವಸ್ಥೆಯನ್ನು ತನ್ನ ಅಧೀನಕ್ಕೊಳಪಡಿಸಿಕೊಂಡಿದ್ದ ವಿದೇಶಿ ಬಂಡವಾಳವನ್ನು ದೇಶದಿಂದ ಕಿತ್ತೊಗೆಯುವುದು ವಸಾಹತುಶಾಹಿ–ವಿರೋಧಿ ರಾಷ್ಟ್ರೀಯ ಚಳವಳಿಯ ಉದ್ದೇಶವಾಗಿತ್ತು. ಅದೇ ವಿದೇಶಿ ಬಂಡವಾಳದ ಮುಂದೆ ಈಗ ಕೆಲವು ಮಂದಿ ಅಸಂಬದ್ಧವಾಗಿ ಅಂಗಲಾಚುತ್ತಿದ್ದಾರೆ. ಯಾರನ್ನಾದರೂ "ರಾಷ್ಟ್ರ ವಿರೋಧಿ" ಎಂದು ಕರೆದು, ಅವರ ಮೇಲೆ ರಾಜದ್ರೋಹದ ಕೇಸು ಜಡಿಯುವುದರಿಂದ ಹಿಡಿದು ದೈಹಿಕ ಹಲ್ಲೆ ಮಾಡುವವರೆಗೂ ಹೇಸದ ಮಂದಿ ಇಂತಹ ಅಸಂಬದ್ಧ ಅಂಗಲಾಚನೆ ಮಾಡುತ್ತಿದ್ದಾರೆ. ಇವರ ಯೋಜನೆ ದೇಶದ ಆರ್ಥಿಕ ಸ್ವಾತಂತ್ರ್ಯದ ಬುನಾದಿಯನ್ನು ಅಲುಗಾಡಿಸುವುಷ್ಟೇ ಅಲ್ಲ; ಅದು ಸೋಲುವುದೂ ಅಷ್ಟೇ ಖಚಿತ.

ಈ ಪರಿಸ್ಥಿತಿಯಲ್ಲಿ, ಸಂಪತ್ತಿನ ಒಡೆಯರು ಸಂಪತ್ತನ್ನು ಹಣದ ರೂಪದಲ್ಲಿ ಇಟ್ಟುಕೊಳ್ಳಲು ಬಯಸುತ್ತಾರೆ. ಆದ್ದರಿಂದ, ಎಲ್ಲೆಡೆಯಲ್ಲೂ ಹೂಡಿಕೆ ಕುಗ್ಗುತ್ತದೆ. ಆದ್ದರಿಂದ, ಭಾರತದಲ್ಲಿ ದೊಡ್ಡ ಮೊತ್ತದ ವಿದೇಶಿ ಹೂಡಿಕೆಯಾಗುತ್ತದೆಂದು ನಿರೀಕ್ಷಿಸುವುದು ಹಗಲುಗನಸಿನ ಮಾತಾಗುತ್ತದೆ.

ನಮ್ಮ ಬಡ ಜನತೆಯ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ ಮೂಲಕ ಬಿಕ್ಕಟ್ಟಿನಿಂದ ಹೊರಬರಲು ಸಾಧ್ಯವಿದೆ. ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆ ವಿಧಿಸಿ, ಬಡವರಿಗೆ ಉಚಿತ ಆರೋಗ್ಯ, ಶಿಕ್ಷಣ ಮುಂತಾದ ಸೌಲಭ್ಯಗಳನ್ನು ಒದಗಿಸುವ ಮೂಲಕ ಅದನ್ನು ಸಾಧಿಸಬಹುದು.

'ಮೇಕ್ ಇನ್ ಇಂಡಿಯಾ' ಪ್ರಚಾರ ಇದ–ಕ್ಕೆ ವಿರುದ್ಧವಾಗಿದೆ. ಅದರ ಸಲುವಾಗಿ ದೇಶದ ಸಂಪನ್ಮೂಲಗಳು ವ್ಯಯವಾಗುವುದರಿಂದ ಬಡವರು ಇನ್ನೂ ಹೆಚ್ಚು ಬಡವರಾಗುತ್ತಾರೆ ಮತ್ತು ಬಿಕ್ಕಟ್ಟು ಮತ್ತಷ್ಟು ಬಿಗಡಾಯಿಸುತ್ತದೆ.

ಆಧಾರ: ಪ್ರೊ. ಪ್ರಭಾತ್‌ಪಟ್ನಾಯಕ್ ಅವರ ಲೇಖನ

ಅಸೆಂಬ್ಲಿ ಚುನಾವಣಾ ಎಕ್ಸ್‌ಪ್ರೆಸ್ – **ಮೋದಿ ಸರಕಾರದ 2016ರ ರೈಲ್ವೆ ಬಜೆಟ್ ಕುರಿತು**
'ದಿ ಹಿಂದೂ'ನಲ್ಲಿ ಸುರೇಂದ್ರನ್ ಅವರ ವ್ಯಂಗ್ಯ



@DrunkVinodMehta

ಬಾಬಾ ರಾಮದೇವ್ ಮುಂದಿನ
3 ವರ್ಷಗಳಲ್ಲಿ ದೆಹಲಿಯಲ್ಲಿ
ಒಂದು ವಿ.ವಿ. ತೆರೆಯಬೇಕೆಂದಿದ್ದಾರಂತೆ.
ಅಷ್ಟರೊಳಗೆ ಜೆ.ಎನ್.ಯು. ಮುಚ್ಚಬೇಕೆಂದು
ಮೋದಿ ಬಯಕೆ.
ಪತಂಜಲಿ ನೂಡಲ್ಸ್ ಬಿಡುಗಡೆ ಮಾಡುವ
ಮೊದಲು ಮ್ಯಾಗ್ಗಿ ನೂಡಲ್ಸ್ ನಿಷೇಧಿಸಿದ ಹಾಗೆ

– ಕುಡಿದ ವಿನೋದ ಮೆಹತಾ
(ಒಂದು ಅಣಕು ಫೇಸ ಬುಕ್ ಅಕೌಂಟ್)



ಮೇಜರ್ ಜೈಪಾಲ್ ಸಿಂಗ್ ಜನ್ಮಶತಾಬ್ಧಿ



"ಕಾಮ್ರೇಡ್ ಮೇಜರ್‌ಕೋ ಲಾಲ್‌ಸಲಾಂ", "ಕಾಮ್ರೇಡ್ ಮೇಜರ್ ಅಮರ್ ರಹೇ"– ಈ ಘೋಷಣೆಗಳು ದೆಹಲಿಯ ಕಾನ್‌ಸ್ಟಿಟ್ಯೂಷನ್ ಕ್ಲಬ್‌ನಲ್ಲಿ ಫೆಬ್ರವರಿ 11 ರಂದು ಅನುರಣಿಸಿದವು. ಸಂದರ್ಭ ಕಾಮ್ರೇಡ್ ಮೇಜರ್ ಜೈಪಾಲ್ ಸಿಂಗ್ ಅವರ ಜನ್ಮಶತಾಬ್ದಿ ಕಾರ್ಯಕ್ರಮ. ದಂತಕಥೆಯಾದ ಹಿರಿಯ ಕಮ್ಯೂನಿಸ್ಟ್ ನಾಯಕ ಜೈಪಾಲ್ ಸಿಂಗ್‌ರ ಜನ್ಮಶತಾಬ್ದಿಯನ್ನು ಆಚರಿಸಲು ಸಿಪಿಐ(ಎಂ) ದೆಹಲಿ ರಾಜ್ಯ ಸಮಿತಿ ಆಯೋಜಿಸಿತ್ತು. ಅಪಾರ ಸಂಖ್ಯೆಯಲ್ಲಿ ಜನರು ಸೇರಿ ಸ್ವಾತಂತ್ರ್ಯ ಸಂಗ್ರಾಮದ ವೇಳೆ ಬ್ರಿಟಿಷ್ ಸಾಮ್ರಾಜ್ಯಶಾಹಿಗಳನ್ನು ನಡುಗಿಸಿದ, ತದನಂತರ ಸ್ವತಂತ್ರ ಭಾರತದಲ್ಲಿ ಸಮರಶೀಲ ತೆಲಂಗಾಣ ಹೋರಾಟಕ್ಕೆ ಶಸ್ತ್ರಾಸ್ತ್ರ ತರಬೇತಿ ನೀಡಿ ಸ್ಫೂರ್ತಿ ತುಂಬಿದ ಸಂಗಾತಿಗೆ ಗೌರವ ಸಲ್ಲಿಸಿದರು. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ ಯೆಚುರಿ, ಪಾಲಿಟ್‌ಬ್ಯೂರೋ ಸದಸ್ಯೆ ಬೃಂದಾ ಕಾರಟ್, ಕೇಂದ್ರ ಕಾರ್ಯದರ್ಶಿ ಮಂಡಲಿ ಸದಸ್ಯರಾದ ಜೋಗಿಂದರ್ ಶರ್ಮಾ ಮತ್ತು ಕೇಂದ್ರ ಸಮಿತಿ ಸದಸ್ಯ ಪುಷ್ಪಿಂದರ್ ಸಿಂಗ್ ಮೊದಲಾದವರು ಕಾರ್ಯಕ್ರಮದಲ್ಲಿ ಮಾತನಾಡಿದರು. ಪಕ್ಷದ ರಾಜ್ಯಸಮಿತಿ ಕಾರ್ಯದರ್ಶಿ ಕೆ.ಎಂ. ತಿವಾರಿ ಅಧ್ಯಕ್ಷತೆ ವಹಿಸಿದ್ದರು.

ಪಕ್ಷದೊಳಗೆ ಮತ್ತು ಅಭಿಮಾನಿಗಳ ನಡುವೆ ಮೇಜರ್ ಎಂದೇ ಖ್ಯಾತರಾಗಿದ್ದ ಜೈಪಾಲ್ ಸಿಂಗ್ ಪಕ್ಷದ ದೆಹಲಿ ರಾಜ್ಯ ಕಾರ್ಯದರ್ಶಿಯಾಗಿದ್ದುದು ಮಾತ್ರವಲ್ಲದೆ ಪಶ್ಚಿಮ ಉತ್ತರ ಪ್ರದೇಶ ಮತ್ತು ಹರ್ಯಾಣದಲ್ಲಿ ಕೂಡ ಪಕ್ಷವನ್ನು ಕಟ್ಟಲು ಶ್ರಮಿಸಿದ್ದರು. ಅದ್ಭುತ ಸಂಘಟಕರಾಗಿದ್ದ ಅವರು ತುಂಬಾ ಸರಳಜೀವಿಯಾಗಿದ್ದರು. ಅದೇ ಹೊತ್ತಿಗೆ ಅಷ್ಟೇ ಆಕರ್ಷಕ ವ್ಯಕ್ತಿತ್ವವನ್ನೂ ಹೊಂದಿದ್ದರು. ಜೀವನದಲ್ಲಿ ಅಪಾರ ಸಂಕಷ್ಟಗಳನ್ನು ಎದುರಿಸಿದ್ದರೂ ಮೇಜರ್ ಎಂದಿಗೂ ಲಕ್ಸುರಿ ಎನಿಸುವ ಯಾವುದೇ ಸೌಲಭ್ಯಕ್ಕೆ ಮಾರುಹೋಗಲಿಲ್ಲ. ವಿಜಯವಾಡದಲ್ಲಿ 1982ರಲ್ಲಿ ನಡೆದ ಪಕ್ಷದ 11ನೇ ಮಹಾಧಿವೇಶನದ ಸಂದರ್ಭದಲ್ಲಿ ಕಾಮ್ರೇಡ್ ಮೇಜರ್ ನಿಧನರಾದರು.

ಸಭೆಯಲ್ಲಿ ಮಾತನಾಡಿದ ಪ್ರತಿಯೊಬ್ಬರ ಮಾತಿನಲ್ಲೂ ಪ್ರಸ್ತಾವವಾದ ಒಂದು ಸಾಮಾನ್ಯ ಅಂಶವೆಂದರೆ ಅದು ಮೇಜರ್‌ರ ಸರಳತೆ. "ಕಾ. ಜೈಪಾಲ್ ಸಿಂಗ್ ನಮ್ಮ ನಾಯಕ ಮಾತ್ರವಲ್ಲದೆ ಗೆಳೆಯರೂ ಆಗಿದ್ದರು' ಎಂದು ಕಾಮ್ರೇಡ್ ಯೆಚುರಿ ಹೇಳಿದರು. ಸರಕಾರದ ನೀತಿಗಳನ್ನು ಟೀಕಿಸುವುದರ ಜತೆಯಲ್ಲಿ ಜನರ ಮುಂದೆ ಪರ್ಯಾಯ ನೀತಿಗಳನ್ನು ಮಂಡಿಸಬೇಕೆಂಬ ಪಾಠವನ್ನು ಅವರು ಕಲಿಸಿದ್ದರು ಎಂದರು. ದೇಶದಲ್ಲಿ ಸಂಪನ್ಮೂಲಗಳ ಕೊರತೆಯಿಲ್ಲ, ಆದರೆ ಪರ್ಯಾಯ ನೀತಿಗಳ ಅಗತ್ಯವಿದೆ ಎಂದು ಯೆಚುರಿ ನುಡಿದರು. ಹೆಚ್ಚಿದ ಕೋಮು ಉದ್ವಿಗ್ನತೆ, ಗಣರಾಜ್ಯದ ಒಕ್ಕೂಟ ಸ್ವರೂಪದ ಮೇಲೆ ದಾಳಿ, ಹೆಚ್ಚುತ್ತಿರುವ ಸರ್ವಾಧಿಕಾರಿ ಪ್ರವೃತ್ತಿ– ಇವೇ ಮುಂತಾದ ಸಮಸ್ಯೆಗಳು ದೇಶವನ್ನು ಇಂದು ಕಾಡುತ್ತಿದ್ದು ಎಡ ಶಕ್ತಿಗಳನ್ನು ಬಲಗೊಳಿಸುವುದೇ ಅವನ್ನು ಎದುರಿಸಲು ಇರುವ ಏಕೈಕ ಮಾರ್ಗವಾಗಿದೆ ಎಂದು ಯೆಚುರಿ ಪ್ರತಿಪಾದಿಸಿದರು. ಆ ನಿಟ್ಟಿನಲ್ಲಿ ಒಂದು ಉತ್ತಮ ಭಾರತ ನಿರ್ಮಾಣಕ್ಕಾಗಿ ಜನರನ್ನು ಅಣಿನೆರೆಯಿಸಲು ಸಮರ್ಥವಾಗುವಂತೆ ನಮ್ಮ ಪಕ್ಷವನ್ನು ಕಟ್ಟಬೇಕಾಗಿದೆ ಎಂದರು.

ಮೇಜರ್‌ರ ಕೊಡುಗೆಗಳನ್ನು ಸ್ಮರಿಸಿದ ಕಾ. ಬೃಂದಾ ಕಾರಟ್, ಅವರು ಈ ಭಾಗದಲ್ಲಿ ಪಕ್ಷವನ್ನು ಕಟ್ಟಿದರು ಎಂದರು. ಅವರು ಸದಾ ಕೋಮುವಾದಕ್ಕೆ ವಿರುದ್ಧವಾಗಿದ್ದರು. ಸೇನೆಯಲ್ಲಿದ್ದಾಗಲೂ ಸೇನೆಯಲ್ಲಿ ಕೋಮುವಾದ ಹರಡುವುದನ್ನು ತಡೆಯಲು ಹೋರಾಡಿದ್ದರು ಎಂದರು. ಪ್ರಜಾಪ್ರಭುತ್ವ ಚಳವಳಿಯಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಮಹತ್ವವನ್ನು ಪ್ರತಿಪಾದಿಸುತ್ತಿದ್ದ ಮೇಜರ್, ದೆಹಲಿಯಲ್ಲಿ ಜೆಎಂಎಸ್ ಕಟ್ಟುವಲ್ಲಿ ದೊಡ್ಡ ಪಾತ್ರ ನಿರ್ವಹಿಸಿದ್ದರು ಎಂದು ನೆನಪಿಸಿದರು.

ಕಾ. ಮೇಜರ್ ಬಹುಮುಖ ವ್ಯಕ್ತಿತ್ವವನ್ನು ಹೊಂದಿದ್ದರು. ಬೇರೆ ಬೇರೆ ರೀತಿಯ ಜನರು ಮಾರ್ಗದರ್ಶನಕ್ಕಾಗಿ ಅವರನ್ನು ಸಂಪರ್ಕಿಸುತ್ತಿದ್ದರು. ಚಳವಳಿಗಾಗಿ ಮಾಡಿದ ಯಾವುದೇ ಕೊಡುಗೆಗಳಿಗೂ ಅವರು ಕ್ರೆಡಿಟ್ ತೆಗೆದುಕೊಳ್ಳಲಿಲ್ಲ ಎಂದು ಕಾ. ಜೋಗಿಂದರ್ ಶರ್ಮಾ ಹೇಳಿದರು.

ಮೇಜರ್ ಒಬ್ಬ ತಂದೆ, ಒಬ್ಬ ಸಂಗಾತಿ ಮತ್ತು ಒಬ್ಬ ಗೆಳೆಯ ಆಗಿದ್ದರು ಎಂದು ಕಾ. ಪಿ.ಎಸ್. ಗ್ರೆವಾಲ್ ವರ್ಣಿಸಿದರು. ಗೆರಿಲ್ಲಾ ಹೋರಾಟಗಾರರಾಗಿದ್ದ ಅವರು ತೆಲಂಗಾಣ ರೈತ ಬಂಡಾಯದ ವೇಳೆ ರೈತರಿಗೆ ತರಬೇತಿ ನೀಡುವಲ್ಲಿ ದೊಡ್ಡ ಪಾತ್ರ ನಿರ್ವಹಿಸಿದ್ದರು ಎಂದರು. ಅವರು ಬ್ರಿಟಿಷ್ ಸೇನೆಯ 'ಬಾಘಿ' (ಬಂಡಾಯಗಾರ) ಆಗಿದ್ದರು. ಅವರು ಸೇನೆಯಲ್ಲಿದ್ದ ಸಂದರ್ಭ ಭಾರತೀಯ ನಾಯಕರನ್ನು ಹತ್ಯೆಮಾಡುವ ಬ್ರಿಟಿಷ್ ಸಂಚನ್ನು ಬಯಲು ಮಾಡಿದ್ದರು. ಅದಕ್ಕಾಗಿ ಬ್ರಿಟಿಷರು ಅವರ ಮೇಲೆ ಮೊಕದ್ದಮೆ ಹೂಡಿದ್ದರು. ಆದರೆ, ಸ್ವಾತಂತ್ರ್ಯ ಬಂದ ಮೇಲೆ ಅವರ ಧೈರ್ಯಕ್ಕಾಗಿ ಅವರನ್ನು ಸನ್ಮಾನಿಸುವ ಬದಲು ನೆಹರೂ ಸರಕಾರ ಮೇಜರ್‌ರನ್ನು ಬ್ರಿಟಿಷರು ಹೂಡಿದ್ದ ಅದೇ ಕೇಸ್ ಆಧಾರದಲ್ಲಿ ಶಿಕ್ಷಿಸಿತು ಎಂದು ಗ್ರೆವಾಲ್ ವಿಷಾದಿಸಿದರು.

ಮಹಾನ್ ಜವಳಿ ಮುಷ್ಕರದ ವೇಳೆ ಜವಳಿ ಮಿಲ್‌ಗಳಿಗೆ ಭೇಟಿಕೊಟ್ಟ ಮೇಜರ್, ಗೇಟ್ ಮೀಟಿಂಗ್‌ಗಳಲ್ಲಿ ಮಾತನಾಡಿದ್ದನ್ನು ನಾಥು ಪ್ರಸಾದ್ ನೆನಪಿಸಿಕೊಂಡರು.

ಪಕ್ಷದ ಆಂತರಿಕ ಹೋರಾಟವನ್ನು ಹೇಗೆ ನಡೆಸಬೇಕು ಎಂಬುದನ್ನು ಮೇಜರ್ ನಮಗೆ ಕಲಿಸಿದ್ದರು ಎಂದವರು ಕೆ.ಎಂ. ತಿವಾರಿ. 'ನಾನು ಮೇಜರ್‌ರ ಮೂಲಕ ಪಕ್ಷಕ್ಕೆ ಬಂದವನು ಎನ್ನುವುದಕ್ಕೆ ಹೆಮ್ಮೆಯಾಗುತ್ತದೆ' ಎಂದವರು ಹೇಳಿದರು.

ಅನುಭವಗಳ ದಾಖಲು...

ಕಾಮ್ರೇಡ್ ಜೈಪಾಲ್ ಸಿಂಗ್ ತಮ್ಮ ಹೋರಾಟಮಯ ಬದುಕಿನ ಅನುಭವಗಳನ್ನು –ದೇಶದ ಸ್ವಾತಂತ್ರ್ಯಕ್ಕಾಗಿ ಹಾಗೂ ನಂತರ ತೆಲಂಗಾಣ ಹೋರಾಟ– 'ಇನ್ ದ ಬ್ಯಾಟಲ್ ಫಾರ್ ಲಿಬರೇಷನ್' ಕೃತಿಯಲ್ಲಿ ದಾಖಲಿಸಿದ್ದಾರೆ. ಅದನ್ನು 'ವಿಮೋಚನೆಯ ಸಮರಕ್ಕಾಗಿ' ಎಂಬ ಶೀರ್ಷಿಕೆಯಡಿ ಕ್ರಿಯಾ ಪ್ರಕಾಶನ ಪ್ರಕಟಿಸಿದ್ದು 2009ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅತ್ಯುತ್ತಮ ಅನುವಾದ ಪುಸ್ತಕ ಪ್ರಶಸ್ತಿ ಬಂದಿರುವುದನ್ನು ಮೇಜರ್‌ರ ಜನ್ಮಶತಾಬ್ದಿಯ ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದಾಗಿದೆ. ■

ಸರಕಾರಿ ಕಚೇರಿಗಳ ಮುತ್ತಿಗೆ: ಮಹಾರಾಷ್ಟ್ರ ಕಿಸಾನ್ ಸಭಾ ಕರೆ

ಅಖಿಲ ಭಾರತ ಕಿಸಾನ್ ಸಭಾದ ಮಹಾರಾಷ್ಟ್ರ ರಾಜ್ಯ ಮಟ್ಟದ ಸಮಾವೇಶ ಜನವರಿ 28 ರಂದು ನಾಸಿಕ್ ನಗರದಲ್ಲಿ ನಡೆಯಿತು. ರಾಜ್ಯದ 21 ಜಿಲ್ಲೆಗಳಿಂದ 700ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಮಾರ್ಚ್ 29ರಿಂದ ಮಹಾರಾಷ್ಟ್ರದಾದ್ಯಂತ ಸರಕಾರಿ ಕಚೇರಿಗಳಿಗೆ ಮುತ್ತಿಗೆ ಹಾಕುವ ಹೋರಾಟದ ಕಾರ್ಯಕ್ರಮಕ್ಕೆ ಸಮಾವೇಶ ಕರೆ ನೀಡಿತು. ನಾಲ್ಕು ತಿಂಗಳಿಂದ ರಾಜ್ಯದಾದ್ಯಂತ ನಡೆದ ಪ್ರಚಾರಾಂದೋಲನದ ಅಂತಿಮ ಘಟ್ಟವಾಗಿ ಪಿಕೆಟಿಂಗ್‌ಗೆ ಕರೆ ನೀಡಲಾಗಿದ್ದು ಸುಮಾರು ಒಂದು ಲಕ್ಷ ರೈತರು ಮುತ್ತಿಗೆ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಮಾಡಲು ಅತ್ಯುತ್ಸಾಹದಿಂದ ಸಿದ್ಧತೆಗಳನ್ನು ಮಾಡಲಾಗುತ್ತಿದೆ.

ಸರಿಯಾಗಿ ಹತ್ತು ವರ್ಷಗಳ ಹಿಂದೆ ಜನವರಿ 28ರಿಂದ 31ರವರೆಗೆ ನಡೆದ ಎಐಕೆಎಸ್‌ನ 31ನೇ ಅಖಿಲ ಭಾರತ ಸಮ್ಮೇಳನದ ಅಂಗವಾಗಿ ಇದೇ ನಾಸಿಕ್ ನಗರದಲ್ಲಿ ಸುಮಾರು ಒಂದು ಲಕ್ಷ ರೈತರು ಪಾಲ್ಗೊಂಡಿದ್ದ ಬೃಹತ್ ರ್‍ಯಾಲಿ ನಡೆದಿತ್ತು. ಕಾಕತಾಳೀಯವೋ ಎನ್ನುವಂತೆ ಅದೇ ಜನವರಿ 28ರಂದು ಸಮಾವೇಶ ನಡೆಯಿತು.

ಮುಂಬಯಿಯ ಟಾಟಾ ಸಮಾಜ ವಿಜ್ಞಾನಗಳ ಸಂಸ್ಥೆಯ ಅಭಿವೃದ್ಧಿ ಅಧ್ಯಯನಗಳ ಶಾಲೆಯ (ಸ್ಕೂಲ್ ಆಫ್ ಡೆವಲಪ್‌ಮೆಂಟ್ ಸ್ಟಡೀಸ್) ಡೀನ್ ಡಾ. ಆರ್. ರಾಮ್‌ಕುಮಾರ್ ಸಮಾವೇಶವನ್ನು ಉದ್ಘಾಟಿಸಿದರು. ದೇಶ ಮತ್ತು ರಾಜ್ಯವನ್ನು ಕಾಡುತ್ತಿರುವ ಕೃಷಿ ಬಿಕ್ಕಟ್ಟಿನ ಬಗ್ಗೆ ಅವರು ಅಧ್ಯಯನಪೂರ್ಣ ವಿಚಾರಗಳನ್ನು ಮಂಡಿಸಿದರು. ಕಿಸಾನ್ ಸಭಾದ ಮರಾಠಿ ಪತ್ರಿಕೆ 'ಕಿಸಾನ್ ಸಂಘರ್ಷ'ವನ್ನು ನಾಸಿಕ್ ಜಿಲ್ಲೆಯ ಕಲ್ವಾನ್ ಕ್ಷೇತ್ರದಿಂದ ಏಳು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ, ಕಿಸಾನ್ ಸಭಾದ ಮಾಜಿ ರಾಜ್ಯ ಅಧ್ಯಕ್ಷ ಜೆ.ಪಿ. ಗವಿತ್ ಬಿಡುಗಡೆ ಮಾಡಿದರು.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ. ಡಿ.ಎಲ್. ಕರಾಡ್, ಎಐಡಿಡಬ್ಲ್ಯುಎ ರಾಜ್ಯ ಅಧ್ಯಕ್ಷೆ ಮರಿಯಮ್ ಧವಲೆ, ಡಿವೈಎಫ್‌ಐ ರಾಜ್ಯ ಅಧ್ಯಕ್ಷ ಸುನಿಲ್ ಧನ್ವಾ ಮತ್ತು ಎಸ್‌ಎಫ್‌ಐ ರಾಜ್ಯ ಅಧ್ಯಕ್ಷ ಮೋಹನ್ ಜಾಧವ್ ಸಮಾವೇಶಕ್ಕೆ ಶುಭಕೋರಿ ಮಾತನಾಡಿದರು. ಮುಂದಿನ ಹೋರಾಟಗಳಿಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಅವರು ಘೋಷಿಸಿದರು.

ಪ್ರಚಾರಾಂದೋಲನದ ಭಾಗವಾಗಿ ಕಳೆದ ವರ್ಷ ಅಕ್ಟೋಬರ್‌ನಿಂದ ನವೆಂಬರ್ ಹತ್ತರವರೆಗೆ ರಾಜ್ಯವ್ಯಾಪಿಯಾಗಿ ಎಐಕೆಎಸ್ ರೈತ ಹಕ್ಕುಗಳ ಜಾಗೃತಿ ಆಂದೋಲನ, ಡಿಸೆಂಬರ್‌ನಲ್ಲಿ 15 ಜಿಲ್ಲೆಗಳಲ್ಲಿ 50000 ಕ್ಕೂ ಹೆಚ್ಚು ರೈತರಿಂದ ಪ್ರತಿಭಟನೆಗಳು, ಇದೇ ಜನವರಿ 7 ಮತ್ತು 8 ರಂದು ಸಾಲ ಮನ್ನಾ ಮತ್ತು ಬರ ಪರಿಹಾರ ಬೇಡಿಕೆಗಳ ಆಧಾರದಲ್ಲಿ ವಿವಿಧೆಡೆ ಎರಡು ಸಮಾವೇಶಗಳು, ಜನವರಿ 12 ರಂದು ದೇವಸ್ಥಾನಗಳ ಜಮೀನಿನಲ್ಲಿ ಉಳುಮೆ ಮಾಡುತ್ತಿರುವ ರೈತರ ಸಮಾವೇಶ– ಇವೇ ಮೊದಲಾದ ಕಾರ್ಯಕ್ರಮಗಳನ್ನು ನಡೆಸಲಾಯಿತು.

ರಾಷ್ಟ್ರೀಯ ಅಪರಾಧ ದಾಖಲು ಬ್ಯೂರೋದ ಅಂಕಿ ಅಂಶ ಪ್ರಕಾರ ಮಹಾರಾಷ್ಟ್ರದಲ್ಲಿ 2015ರಲ್ಲಿ 3228 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 1995ರ ನಂತರ ಕಳೆದ 20 ವರ್ಷಗಳಲ್ಲಿ ಮಹಾರಾಷ್ಟ್ರ ಒಂದರಲ್ಲೇ 65000ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದು ಕಳವಳಕಾರಿ ಸಂಗತಿ. ಈ ಪ್ರಶ್ನೆಯನ್ನು ಮುಂದಿಟ್ಟು ರೈತರ ಪರಿಸ್ಥಿತಿ ಸುಧಾರಣೆಗಾಗಿ ಕ್ರಮಗಳನ್ನು ಕೈಗೊಳ್ಳುವಂತೆ ಆಗ್ರಹಿಸುವ ಮುಖ್ಯ ಅಜೆಂಡಾದೊಂದಿಗೆ ಪಿಕೆಟಿಂಗ್ ಚಳವಳಿಯನ್ನು ಹಮ್ಮಿಕೊಳ್ಳಲಾಗಿದೆ. ■

ಪಂಚವಾದ್ಯದ ಮೂಲಕವೇ ಒಂದು ಸಾಂಸ್ಕೃತಿಕ ಚರಿತ್ರೆ ಬರೆಯುವ ಅಗತ್ಯವಿದೆ – ಚಿನ್ನಪ್ಪಗೌಡ

"ಕಲೆಯೇ ಇಲ್ಲದ ಯುವ ಸಮುದಾಯವೂ ಇಲ್ಲ. ಒಂದಲ್ಲ ಒಂದು ರೀತಿಯ ಜಾನಪದ ಕಲೆಯನ್ನು ಅದು ರೂಢಿಸಿಕೊಂಡಿರುತ್ತದೆ. ಆದರೆ ಈಗ ಕಾಲದ ಬದಲಾವಣೆಯಿಂದಾಗಿ, ಉದ್ಯೋಗ–ಶಿಕ್ಷಣ ಇತ್ಯಾದಿ ಕಾರಣದಿಂದಾಗಿ ಆ ಕಲೆಯ ಮುಂದುವರಿಕೆ ಹೊಸರೂಪ ಪಡೆದುಕೊಳ್ಳುತ್ತಿವೆ. ಕಲಾ ಪ್ರಕಾರದ ಒಳಗಿನ ಸಮುದಾಯ ಅದರಿಂದ ಹೊರಬರುತ್ತಿವೆ. ಹೊರಗಿನವರು ಆಸಕ್ತಿಯಿಂದ ಒಳಬರುತ್ತಿದ್ದಾರೆ. ಈ ಪ್ರಕ್ರಿಯೆಯನ್ನು ಕಲಾ ಪ್ರಕಾರದ ಒಳಗಿನವರಾಗಿ ಮತ್ತು ಕಲಾಪ್ರಕಾರದ ಹೊರಗಿನವರಾಗಿ ನಿಂತು ಈ ಕಲೆಯನ್ನು ಬೆಳೆಸುವ ಅಗತ್ಯ ಇದೆ. ಪಂಚವಾದ್ಯದಂತಹ ಸಮರ್ಥ, ವೈವಿಧ್ಯಪೂರ್ಣ ಕಲೆಯನ್ನು ಮುಂದಿನ ತಲೆಮಾರಿಗೆ ಒಯ್ಯುವುದು ಹೇಗೆ ಎಂದು ಆಲೋಚಿಸಬೇಕಾಗಿದೆ" ಎಂದು ಜಾನಪದ ವಿಶ್ವವಿದ್ಯಾನಿಲಯದ ಕುಲಪತಿಯವರಾದ ಡಾ. ಕೆ. ಚಿನ್ನಪ್ಪಗೌಡ ಅವರು ಹೇಳಿದರು. ಅವರು ಇತ್ತೀಚೆಗೆ ಕೆರೆಕೋಣದ ಸಹಯಾನದಲ್ಲಿ ಉ.ಕ. ಜಿಲ್ಲೆ ಭಂಡಾರಿ ಸಮಾಜ ಸುಧಾರಣಾ ಸಂಘ, ಕರ್ನಾಟಕ ಜಾನಪದ ಅಕಾಡೆಮಿ ಮತ್ತು ಸಹಯಾನ ಕೆ–ರೆಕೋಣ ಇವರು ಜಂಟಿಯಾಗಿ ಹಮ್ಮಿಕೊಂಡ 2ನೇ ಪಂಚವಾದ್ಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ್ದರು.

ಒಂದು ಕಾಲ ಮತ್ತು ವಾತಾವರಣ ನಿರ್ವಹಣೆಯಲ್ಲಿ ಕಲೆಗೆ ವಾದ್ಯ ಒಂದು ವಿಶೇಷವಾದ ಪರಿಕರವಾಗಿದೆ. ತನ್ನ ನಾದದ ಮೂಲಕ ನಿರ್ದಿಷ್ಟ ಅವರಣ ನಿರ್ಮಿಸಿಕೊಡುತ್ತದೆ. ಹಾಗಾಗಿ ಜನಪದದಲ್ಲಿ ನಾದಕ್ಕೆ ವಿಶೇಷ ಮಹತ್ವ ಇದೆ. ಪಂಚವಾದ್ಯದಂತಹ ಕಲೆ ಕೇವಲ ಮನೋರಂಜನೆಯಲ್ಲ. ಈ ಸಮುದಾಯದ ಜನ ವಾದ್ಯಗಳ ಮೂಲಕವೇ ತಮ್ಮ ನೋವು ನಲಿವುಗಳನ್ನು ಹೊರಹಾಕಿದ್ದಾರೆ. ಹಾಗಾಗಿ ಈ ವಾದ್ಯ ಅವರ ಬದುಕಿನ ಕ್ರಮ. ಅಭಿವ್ಯಕ್ತಿಯ ಹೊಸ ಸಾಧ್ಯತೆ. ಹಾಗಾಗಿ ಭಂಡಾರಿ ಸಮುದಾಯದ ಚರಿತ್ರೆ ಬರೆಯುವುದಿದ್ದರೆ ಅದು ಪಂಚವಾದ್ಯದ ಚರಿತ್ರೆಯ ಮೂಲಕವೇ ನಡೆಯಬಹುದು. ಆಧುನಿಕ ತಂತ್ರಜ್ಞಾನವು ಇಂದು ಮನುಷ್ಯ ವಿರೋಧಿ ಅಲ್ಲ. ಆ ತಂತ್ರಜ್ಞಾನವನ್ನು ಹೇಗೆ ಉಪಯೋಗಿಸಿಕೊಂಡು ಜಾನಪದವನ್ನು ಉಳಿಸುವ, ಬೆಳೆಸುವ ಕಾರ್ಯ ಮಾಡಬೇಕಾಗಿವೆ ಎಂದರು. ಮುದುವರಿದು "ಪಂಚವಾದ್ಯದಂತಹ ಒಂದು ಮುಖ್ಯ ಜಾನಪದ ಕಲೆಯನ್ನು ಅಧ್ಯಯನ ಮಾಡುವುದಕ್ಕೆ, ಕಲಾವಿದರನ್ನು ಗುರುತಿಸಿ ಸೂಕ್ತವಾಗಿ ಗೌರವಿಸುವುದಕ್ಕೆ ಜಾನಪದ ಅಕಾಡೆಮಿ ಬದ್ಧವಾಗಿದೆ" ಎಂದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ಎಂ.ಆರ್. ಭಂಡಾರಿ ಮಾತನಾಡಿ ಒಂದು ಹೆಮ್ಮೆಯ ಕಲೆಯನ್ನು ಹೊಸ ತಲೆಮಾರಿಗೆ ದಾಟಿಸುವ ಭಾಗವಾಗಿ ನಡೆದ ಈ ಸಮ್ಮೇಳನ ಮಹತ್ವ ಪೂರ್ಣವಾದದ್ದು ಎಂದರು. ಇನ್ನೊಬ್ಬ ಅತಿಥಿ ಸಿನಿಮಾ ನಿರ್ದೇಶಕ ಸಂಜೋತಾ ಬಿ.ಜಿ. ಮತ್ತು ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಶಿವರುದ್ರಪ್ಪನವರು ಮಾತನಾಡಿದರು.

ಭಂಡಾರಿ ಸಮುದಾಯ ವಾದ್ಯ, ಯಕ್ಷಗಾನ, ಹಾಡುಗಾರಿಕೆ ಇತ್ಯಾದಿಯಲ್ಲಿದ್ದಾರೆ. ಅವರು ಸಾಂಸ್ಕೃತಿಕ ನೇಕಾರಿಕೆ ವಹಿಸಿದ್ದರು. ಇದೊಂದು ದೇಶಿಯ ವಾದ್ಯ" ಎಂದು ಅಧ್ಯಕ್ಷತೆ ವಹಿಸಿದ ಡಾ. ಎನ್ನಾರ್ ನಾಯಕ್ ಹೇಳಿದರು.

ಯಾವುದೇ ಕಲೆ ಜಾತಿ ಕವಚ ಬಿಟ್ಟು ಆಚೆ ಬರಬೇಕಾಗಿದೆ. ಕಲಾವಿದರು ಗುರುತಿಸಿ ಗೌರವಿಸುವ ಕೆಲಸ ಆಗಬೇಕಾಗಿದೆ ಎಂದು ಪ್ರಾಸ್ತಾವಿಕವಾಗಿ ಮಾತನಾಡಿದ ವಿಠಲ ಭಂಡಾರಿ ಹೇಳಿದರು.

ಗೌರೀಶ ಭಂಡಾರಿ ವಂದಿಸಿದರು. ವಿಠ್ಠಲ ಭಂಡಾರಿ ಕಾರ್ಯಕ್ರಮವನ್ನು ವೈವಿಧ್ಯ ಶೈಲಿಯಲ್ಲಿ ನುಡಿಸಿ ಕಾವ್ಯ ಕಲಾಗಾರಿಕೆಯನ್ನು ಮೆರೆದರು. ಇದೇ ಸಂದರ್ಭದಲ್ಲಿ ಜಾನಪದ ಅಕಾಡೆಮಿಯ ಪ್ರಶಸ್ತಿ ನೀಡಿ ಗೌರವಿಸಿದರು. ●

ಪಂಚವಾದ್ಯ ಕಲೆಗೆ ಆವರಿಸಿದ ಜಾತಿ ಮೋಡ



ಡಾ. ವಿಠ್ಠಲ ಭಂಡಾರಿ, ಕೆರೆಕೋಣ

(ಉತ್ತರ ಕನ್ನಡ ಜಿಲ್ಲೆಯ ಕೆರೆಕೋಣದ ಸಹಯಾನದಲ್ಲಿ ರಾಜ್ಯಮಟ್ಟದ ಎರಡನೆ ಪಂಚವಾದ್ಯ ಸಮ್ಮೇಳನ ನಡೆದ ಹಿನ್ನೆಲೆಯಲ್ಲಿ ಈ ಲೇಖನ)

ಪಂಚವಾದ್ಯವನ್ನು, ವಾಲಗವೆಂದೂ, ಮಂಗಲವಾದ್ಯವೆಂದೂ ಕರೆಯುತ್ತಾರೆ. ಇದು ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಚಲಿತವಿದ್ದ ಒಂದು ಜನಪದ ವಾದ್ಯ ಪ್ರಕಾರ. ಮೋವರಿ (ಮೌರಿ) ಶೃತೆ, ದೋಳು, ತಾಸ್ಮೋರು, ತಾಳ ಇವುಗಳು ಪಂಚವಾದ್ಯದ ಘಟಕಗಳಾಗಿವೆ. ಮದುವೆ ಮತ್ತಿತರ ಶುಭ ಕಾರ್ಯದಲ್ಲಿ ಅನಿವಾರ್ಯವೆಂಬಷ್ಟರ ಮಟ್ಟಿಗೆ ಜಿಲ್ಲೆಯಲ್ಲಿ ಇದು ಬಳಕೆಯಲ್ಲಿದೆ.

ಇದರ ಇತಿಹಾಸ ತೀರಾ ಹಿಂದಿನದೆ. ಮೊದಲು ಇದು ದೇವಾಲಯದಲ್ಲಿ ಆರಾಧನೆಯ ಭಾಗವಾಗಿಯೇ ಬಂದಿದ್ದು. ದೇವಸ್ಥಾನದ ಪರಿಚಾರಿಕ ಕೆಲಸ ಮಾಡುತ್ತಿರುವವರೇ ಈ ಪಂಚವಾದ್ಯದ ಜನಕರೂ ಇರಬಹುದು. ಹಿಂದೆ ಹಲವು ಸಂದರ್ಭದಲ್ಲಿ ದೇವಸ್ಥಾನದಲ್ಲಿ ದೇವದಾಸಿಯಾಗಿರುವ ಕುಟುಂಬಗಳು ಈ ಪಂಚವಾದ್ಯದಲ್ಲಿ ನಿರತ ಆಗಿದ್ದರು.

'ದೋಳು' ಮತ್ತು 'ತಾಸ್ಮೋರು' ಚರ್ಮ ವಾದ್ಯ. ಮರದ ಕಲಶಕ್ಕೆ ಚರ್ಮದ ಹೊದಿಕೆ ಹಾಕಿ ಹಗ್ಗದಿಂದ ಬಿಗಿದಿರುತ್ತಾರೆ. ಆಕಳು, ಕುರಿಯ ಚರ್ಮವನ್ನು ಇದಕ್ಕೆ ಉಪಯೋಗಿಸುತ್ತಾರೆ. 'ಮೋವರಿ' ಮತ್ತು 'ಶೃತೆ'ಯು ಮರದಿಂದ ಕಡೆಯಲ್ಪಟ್ಟ ನಳಿಕೆ, ಮೇಲೆ ತಾಳೆಗರಿಯಿಂದ ಮಾಡಿದ 'ಜೀವಾಳ' ಉಪಯೋಗಿಸುತ್ತಾರೆ. ಪೂರ್ಣ ಪ್ರಮಾಣದಲ್ಲಿ ಜನಪದರು ನಿರ್ಮಿಸಿದ ವಾದ್ಯ ಪರಿಕರವೇ ಆಗಿದೆ.

ಉತ್ತರಕನ್ನಡದಲ್ಲಿ ಪಂಚವಾದ್ಯ ಉಪವೃತ್ತಿಯಾಗಿಸಿದವರು

ಉತ್ತರಕನ್ನಡದಲ್ಲಿ ಮುಖ್ಯವಾಗಿ ಭಂಡಾರಿ (ಕನ್ನಡ ಮಾತೃಭಾಷೆ), ದೇಶಭಂಡಾರಿ (ಕೊಂಕಣಿ ಮಾತೃಭಾಷೆ) ಆಗೇರರು (ದಲಿತರು) ಈ ವಾಲಗವನ್ನು ನುಡಿಸುತ್ತಾರೆ. ಭಂಡಾರಿ ಸಮುದಾಯದಲ್ಲಿ ಸುಮಾರು 40–50 ತಂಡಗಳಿವೆ; ದೇಶಭಂಡಾರಿ ಸಮುದಾಯದಲ್ಲಿ ಸುಮಾರು 10–15 ತಂಡಗಳಿವೆ; ಆಗೇರ ಸಮುದಾಯದಲ್ಲಿ 8–10 ತಂಡಗಳು ಪಂಚವಾದ್ಯದಲ್ಲಿ ನಿರತರಾಗಿವೆ. ವಾಲಗವನ್ನೇ ತಮ್ಮ ಉಪವೃತ್ತಿಯಾಗಿಸಿಕೊಂಡ 'ಭಂಡಾರಿ' ಸಮುದಾಯದಲ್ಲಿ ಇರುವವರೇ 5–7 ಸಾವಿರ ಜನರು. ಕಲಾವಿದರಿಲ್ಲದ ಕುಟುಂಬವೇ ಇಲ್ಲವೇನೋ ಅನ್ನುವಷ್ಟು ವ್ಯಾಪಕವಾಗಿ ಪಂಚವಾದ್ಯ ಕಲೆ ಇವರಿಗೆ ಮೈಗೊಂಡಿದೆ. ವಾದ್ಯ ಮಾಡುವುದು ಮಾತ್ರವಲ್ಲ, ವಾದ್ಯದ ಪರಿಕರ ತಯಾರಿಸುವುದು, ಮಣ್ಣಿನ ಮೂರ್ತಿ ತಯಾರಿಸುವುದು, ಯಕ್ಷಗಾನದ ಮುಮ್ಮೇಳ–ಹಿಮ್ಮೇಳದಲ್ಲಿ ಕಲಾವಿದರಾಗಿ ಸೇವೆ....... ಇತ್ಯಾದಿ ಕಲೆಗಳಲ್ಲಿ ಕೂಡ ಇವರು ಪರಿಣತರು. ಉತ್ತರಕನ್ನಡ ಜಿಲ್ಲೆಯಲ್ಲಿ ಸುಮಾರು 40–50 ತಂಡಗಳು (5–5 ಕಲಾವಿದರಂತೆ ಒಂದು ತಂಡ; ತೀರಾ ಬೇಡಿಕೆ ಇದ್ದರೆ 4–4 ಜನರ ತಂಡ ಮಾಡುತ್ತಾರೆ. ಕೆಲಸ ಮಾಡುತ್ತವೆ. ವಾದ್ಯದ ಮೇಳವೊಂದಕ್ಕೆ (ವಾದ್ಯದ ತಂಡಕ್ಕೆ 'ಮೇಳ' ಎನ್ನುತ್ತಾರೆ) ಒಂದು ಸಾವಿರದಿಂದ ನಾಲ್ಕು ಸಾವಿರದವರೆಗು ಸಂಭಾವನೆ ಇದೆ. ಆದರೆ ಇಡೀ ವರ್ಷಕ್ಕೆ ಹೆಚ್ಚೆಂದರೆ 40–50 ದಿನ ಕೆಲಸ ಸಿಗಬಹುದು.

ತೀರಾ ಮಹತ್ವದ ಕಲಾವಿದರು ಈ ಸಮುದಾಯದಲ್ಲಿ ಆಗಿ ಹೋಗಿದ್ದಾರೆ. ಪಾಂಡುರಂಗ ಭಂಡಾರಿ, ಮಂಜ ಭಂಡಾರಿ, ಸಾಂಬ ಭಂಡಾರಿ, ಕನ್ನಯ್ಯ ಭಂಡಾರಿ, ಸೀತಾರಾಂ ಭಂಡಾರಿ, ಸುಬ್ರಾಯ ಭಂಡಾರಿ, ರಾಮಕೃಷ್ಣ ಭಂಡಾರಿ, ಕೃಷ್ಣ ಭಂಡಾರಿ, ಭೈರವ ಭಂಡಾರಿ, ದತ್ತ ಭಂಡಾರಿ ಮುಂತಾದವರು ಪಂಚವಾದ್ಯದ ಕಸುಬುದಾರರೆಂದೇ ಹೆಸರು ಪಡೆದಿದ್ದಾರೆ. ದುರಂತವೆಂದರೆ ಈ ವಾದ್ಯಕ್ಕೊಂದು 'ಜಾತಿ'ಯ ಮುಸುಕಿರುವುದರಿಂದ ಸ್ವತಃ ಕಲಾವಿದರೂ ತಮ್ಮದೊಂದು 'ಕಲೆ' ಎಂದುಕೊಳ್ಳುವ ಬದಲು ಇದೊಂದು ಸಂಪ್ರದಾಯ ಮತ್ತು ಆರಾಧನೆಯ ಭಾಗ ಅಂದುಕೊಂಡಿದ್ದಾರೆ. ಹೊರಗಿನವರೂ ಇದೇ ಗುಣವನ್ನು ರೂಢಿಸಿಕೊಂಡಿದ್ದಾರೆ. ಭಂಡಾರಿ ಜಾತಿಯಲ್ಲಿಯೇ ಮದುವೆಯಾದರೆ ಮದುವೆಗೆ ಬಂದ ಸಂಬಂಧಿಕರಲ್ಲಿ ಅತ್ಯುತ್ತಮ ಕಲಾವಿದರೆಲ್ಲಾ ಸೇರಿ ವಾದ್ಯ ನುಡಿಸುವುದನ್ನು ಕೇಳುವುದೇ ಒಂದು ಸೊಬಗು. ಒಬ್ಬರನ್ನು ಒಬ್ಬರು ಮೀರಿಸುವ ರೀತಿಯಲ್ಲಿ ಇದು ನಡೆಯುತ್ತದೆ; ಜನ ಅವರನ್ನು ಸುತ್ತುವರಿದು ಕೇಳಿ ಆನಂದಿಸುತ್ತಾರೆ. ಅವರು ಮಾಡಿದ ಸರಿ ತಪ್ಪುಗಳ ಬಗ್ಗೆ ದೀರ್ಘ ಚರ್ಚೆ ದಿನವಿಡೀ ನಡೆ–ಯುತ್ತದೆ. ಒಂದು ರೀತಿಯಲ್ಲಿ ಈ ಚರ್ಚೆಯೇ ಹೊಸಬರಿಗೆ ಪಾಠ ಕೂಡ.

ಸಂಗೀತದ ಬಗ್ಗೆ ಸ್ವಲ್ಪ ಆಸಕ್ತಿ ಇರುವ ಜನರು ಮದುವೆ–ಮುಂಜಿಗಳಿಗೆ ಅತ್ಯುತ್ತಮವಾದ ಕಲಾವಿದರಿದ್ದ ಮೇಳವನ್ನೇ ಆಯ್ಕೆ ಮಾಡಿ ಕರೆಸುತ್ತಾರೆ. ಇದು ಸಾಂಪ್ರದಾಯಿಕ ವಾದ್ಯ ಅನ್ನೋದಕ್ಕಿಂತ ಇದೊಂದು ಸಂಗೀತ ಕಾರ್ಯಕ್ರಮವೆಂದೇ ಪರಿಗಣಿಸುವವರೂ ಕೆಲವರಿದ್ದಾರೆ.

ಪಂಚವಾದ್ಯ ಜಾನಪದ ಕಲೆಯೆಂದು ಪರಿಗಣಿಸಿಲ್ಲ

ಆದರೆ ಪಂಚವಾದ್ಯವನ್ನು ಈ ನೆಲದ ಮಹತ್ವದ ಜಾನಪದ ಕಲೆಯೆಂದು ಅಕಾಡೆಮಿಗಳಾಗಲೀ, ಸಂಸ್ಕೃತಿ ಇಲಾಖೆಯಾಗಲೀ, ಪರಿಗಣಿಸಲೇ ಇಲ್ಲ. ರಾಜ್ಯದ ಯಾವುದೇ ಉತ್ಸವದಲ್ಲಿಯೂ (ಜಿಲ್ಲೆಯ ಹೊರಗೆ) ಈ ಕಲೆ ಪ್ರದರ್ಶನಗೊಂಡಿಲ್ಲ. ಯಾವೊಬ್ಬ ಕಲಾವಿದರಿಗೂ ಅಕಾಡೆಮಿಯಿಂದ, ಸಂಸ್ಕೃತಿ ಇಲಾಖೆಯಿಂದ ಪ್ರಶಸ್ತಿಯನ್ನಾಗಲೀ, ಮಾಸಾಶನವನ್ನಾಗಲೀ ನೀಡಿಲ್ಲ. ಸಂಪೂರ್ಣವಾಗಿ ಕಡೆಗಣಿಸಲಾಗಿದೆ.

ಪಂಚವಾದ್ಯವೆನ್ನುವ ಜಾನಪದ ಕಲೆಯ ಆಧುನಿಕ ಸಾಧ್ಯತೆಗಳ ಬಗ್ಗೆ ಚಿಂತನೆ ನಡೆದಿಲ್ಲ. ಸಾವಕಾಶವಾಗಿ ಅದು ತನ್ನ ಜಾನಪದ ಮಟ್ಟನಿಂದ ಹೊರಬರುತ್ತಿದೆ. 'ಮೋವರಿ' ಎನ್ನುವುದು 'ಶಹನಾಯಿ' ಯ ರೂಪ ಪಡೆದು ಕೊಂಡು 'ಹಿಂದೂಸ್ಥಾನಿ'ಯನ್ನು ಅನುಸರಿಸುತ್ತಿದೆ. ಹೊಸತಲೆಮಾರು ಈ ಕಲೆಯ ಕಡೆಗೆ ಉತ್ಸುಕವಾಗಿಲ್ಲ. 'ಸಾಂಪ್ರದಾಯಿಕತೆ' ಮತ್ತು 'ಕಲೆ' ಯ ಒಟ್ಟಂದವಾಗಿ ಬೆಳೆದು ಬಂದ ಪಂಚವಾದ್ಯ ತನ್ನೊಳಗಿರುವ ಕಲೆಯ ಅಸ್ತಿತ್ವವನ್ನು ಕಳೆದುಕೊಂಡು ಕೇವಲ 'ಸಂಪ್ರದಾಯಿಕ' ವಾದ್ಯವಾಗಿ ಮಾತ್ರ ಹಾಗೋ ಹೀಗೋ ಉಳಿದು ಬಿಡುವ ಅಪಾಯವೂ ಇದೆ. ಯಾವುದೇ ಜಾನಪದ ಕಲೆಯಾಗಲಿ, ನಿರ್ದಿಷ್ಟ ಸಮುದಾಯ ಕೇಂದ್ರಿತ ಕಲೆಯಾಗಲೀ ತನ್ನ ಅನನ್ಯತೆಯನ್ನು ಉಳಿಸಿಕೊಂಡೇ ಕಾಲಕಾಲಕ್ಕೆ ಹೊಸರೂಪವನ್ನು ಪಡೆದುಕೊಳ್ಳುತ್ತಿರಬೇಕು. ಹೊಸ ತಲೆಮಾರು ಇದರಲ್ಲಿ ತೊಡಗಿಕೊಳ್ಳಬೇಕು. ವರ್ತಮಾನದ ಬದಲಾವಣೆಯ ಜೊತೆ ಅರ್ಥಪೂರ್ಣವಾದ, ಮೌಲಿಕವಾದ ಅನುಸಂಧಾನ ಸಾಧ್ಯ ಇಲ್ಲದಿದ್ದರೆ ಯಾವುದೇ ಕಲೆ 'ಮ್ಯೂಸಿಯಂ'ನ ಒಂದು ಸಂಗತಿ ಆಗಿ ಬಿಡುವ ಅಪಾಯ ಕೂಡ ಇದೆ. ಪಂಚವಾದ್ಯದ ಹಳೆಯ ಮಟ್ಟುಗಳೆಲ್ಲ ಮರೆಯಾಗಿ ಇದು ಕೂಡ 'ಮ್ಯೂಸಿಯಂ' ಸೇರುವ ಅಪಾಯ ಕಾಣುತ್ತಿದೆ.

ಪಂಚವಾದ್ಯ ವಿಸ್ತಾರ ಆಗದಿರಲು ಕಾರಣಗಳು

ಈವರೆಗೆ ಪಂಚವಾದ್ಯವನ್ನು ಹೊಸ ತಲೆಮಾರಿಗೆ ಕಲಿಸುವ ಯಾವ ವ್ಯವಸ್ಥೆಯೂ ಇಲ್ಲ. ಇದು ವಂಶಪಾರಂಪರ್ಯವಾಗಿ ಬೆಳೆದು ಬಂದಿದೆ. ಅಜ್ಜನಿಂದ ಅಪ್ಪನಿಗೆ, ಅಪ್ಪನಿಂದ ಮಗನಿಗೆ.......... ಹೀಗೆ ತಲೆಮಾರಿನಿಂದ ತಲೆಮಾರಿಗೆ ಬಳುವಳಿಯಾಗಿ. ಈ ಪಂಚವಾದ್ಯ ಇನ್ನಷ್ಟು ಹೆಚ್ಚು ವಿಸ್ತಾರ ಆಗದಿರಲು, ಹೊಸ ಹೊಸ ಪ್ರಯೋಗಗಳು ನಡೆದು ಜನಪ್ರಿಯವಾಗದಿರಲು ಬಹುಶಃ ಎರಡು ಕಾರಣಗಳನ್ನು ಗುರುತಿಸಬಹುದು.

1) ಈಗಿರುವ ಸ್ಥಿತಿಯಲ್ಲಿ ಇದನ್ನೇ ನಂಬಿ ಬದುಕು ಕಟ್ಟಿಕೊಳ್ಳುವುದು ಸಾಧ್ಯವಿಲ್ಲ. ಕುಟುಂಬ ನಿರ್ವಹಣೆಗೆ ಬೇಕಾದ ಆರ್ಥಿಕದ ಶಕ್ತಿಯನ್ನು ಕೂಡ ಇದು ನೀಡಲಾರದು. ಇದು 'ಸೀಸನ್ ಬೆಸ್ಡ್' ವೃತ್ತಿಯಾಗಿರುವುದರಿಂದ ಈ ಕಲಾವಿದರೆಲ್ಲಾ ಜೀವನ ನಿರ್ವಹಣೆಗೆ ಕೂಲಿ, ಕೃಷಿ ಕೂಲಿ ಇತ್ಯಾದಿಗಳನ್ನು ಅವಲಂಬಿಸಬೇಕಾಗಿದೆ. ಇನ್ನು ವಾದ್ಯ ಕಟ್ಟಲು, ಸೂಕ್ತ ಚರ್ಮವೂ ಸಿಗುತ್ತಿಲ್ಲ. ಮರಗಳೂ ಸಿಗುತ್ತಿಲ್ಲ. ವಾದ್ಯಗಳೆಲ್ಲಾ 'ರೆಡಿಮೇಡ್' (ಸಿಂಥಟಿಕ್) ಬಂದಿರುವುದರಿಂದ ಆ ಕೆಲಸವೂ ಇಂದು ಆರ್ಥಿಕವಾಗಿ ಲಾಭದ್ದಲ್ಲ. ಹಾಗಾಗಿ ಹೊಸ ತಲೆಮಾರಿಗೆ ಇದರಲ್ಲಿ ಆಕರ್ಷಣೆ ಉಳಿದಿಲ್ಲ.

   ಸಾಮಾಜಿಕ ಮನ್ನಣೆಯ ಪ್ರಶ್ನೆ ಕೂಡ ಇಲ್ಲಿದೆ. ಯಾಕೆಂದರೆ ಪಂಚವಾದ್ಯ 'ಭಂಡಾರಿ' ಜಾತಿ ಕಸುಬು ಎನ್ನುವ ಹಣೆಪಟ್ಟಿಯಲ್ಲಿ ಬೆಳೆಯುತ್ತಿದೆ. ಹಾಗಾಗಿ ಬೇರೆ ಜಾತಿಯ ಸಮುದಾಯದ ಜನರು ಇದರಲ್ಲಿ ಸೇರುತ್ತಿಲ್ಲ. ಭಂಡಾರಿ ಶೂದ್ರವರ್ಣದ ಒಂದು ಜಾತಿ. ಬಹುತೇಕ ದೇವಸ್ಥಾನದ ಚಾಕರಿ ಮಾಡುತ್ತಾ ಬೆಳೆದವನು. ಬ್ರಾಹ್ಮಣರು ಇವರನ್ನು ಕೀಳು ಜಾತಿಯವರೆಂದು ಸಹ ಪಂಕ್ತಿಗೆ, ವೈವಾಹಿಕ ಸಂಬಂಧಕ್ಕೆ ಅನರ್ಹರೆಂದು ಪರಿಗಣಿಸಿದ್ದಾರೆ. ಪೂಜಾರಿಗಳು ಗರ್ಭಗುಡಿಯ ಒಳಗಡೆ ಇದ್ದರೆ ಇವರು ಗರ್ಭಗುಡಿಯ ಆಚೆಗೆ ನಿಂತು ದೇವಸ್ಥಾನ ಸ್ವಚ್ಛ ಮಾಡುವುದು, ಪೂಜೆಯಾಗುವಾಗ 'ವಾದ್ಯ' ಮಾಡುವುದು, ಪೂಜಾ ಸಾಮಗ್ರಿಯನ್ನು ತೊಳೆದು ಶುಚಿಗೊಳಿಸುವುದು ದೇವಕಾರ್ಯವಾದರೆ ಬ್ರಾಹ್ಮಣರ ಊಟದ ನಂತರ ಎಲ್ಲಾ ಪಾತ್ರೆ ತೊಳೆದು, ಪಾತ್ರೆಯ ತಳದಲ್ಲಿರುವುದನ್ನು (ಇದ್ದ–ರೆ) ಊಟ ಮಾಡುವುದು ಸಾಂಪ್ರದಾಯಿಕವಾದ ಕ್ರಮ.

   ಬ್ರಾಹ್ಮಣರ ಮನೆಗೆ ಮದುವೆಗೆ ಹೋದರೂ (ಈಗ ಕಲ್ಯಾಣ ಮಂಟಪದ ಮದುವೆಯಾದ್ದರಿಂದ ರೀತಿ ರಿವಾಜು ಸ್ವಲ್ಪ ಭಿನ್ನ) ಮದುವೆ ಅಂಗಳದ ಕೊನೆಗೆ ಇವರ ಸ್ಥಳ. ಎಲ್ಲರ ಊಟ ಆದ ಮೇಲೆ ಅಂಗಳದ ಕೊನೆಗೆ ಇವರಿಗೆ ಊಟ. ತಾವೇ ಬಾಳೆ ತೆಗೆದು ಸಗಣಿ ಹಾಕಿ ಸ್ವಚ್ಛ ಮಾಡಿ ಬರಬೇಕು. ತನ್ನದೇ ತರಗತಿಯಲ್ಲಿ ಓದಿದ ಒಬ್ಬ ದಡ್ಡ ಸಹಪಾಠಿಯ ಮನೆಗೆ ಹೋದರೂ ಹೀಗೆ; ಹೊರಗೆ ಕುಳಿತೆ ಊಟ ಮಾಡಬೇಕು. ಭಂಡಾರಿಗಳ ಕತೆಯೇ ಹೀಗಾದರೆ ಇನ್ನು ದಲಿತ ವರ್ಗಕ್ಕೆ ಸೇರಿದ ಆಗೇರರ ಸ್ಥಿತಿಯನ್ನು ನಾನು ಪ್ರತ್ಯೇಕವಾಗಿ ವರ್ಣಿಸಬೇಕಾಗಿಲ್ಲ. ಹಾಗಾಗಿ ಜಾತಿಯ ಕಾರಣದಿಂದ 'ಕಲೆ'ಯ ಅಂಶ ನಗಣ್ಯವಾಗಿ 'ಜಾತಿ' ಮುಖ್ಯವಾಗುವುದು ಹೊಸ ಹುಡುಗರಿಗೆ ಅವಮಾನ ಅನ್ನಿಸದೇ ಇರದು.

2. ಆಶ್ಚರ್ಯವೆಂದರೆ 'ಭಂಡಾರಿ'ಗಳು ಗಳು ತಾವು ಉಳಿದೆಲ್ಲಾ ಬ್ರಾಹ್ಮಣೇತರ ಜಾತಿಗಳಿಗಿಂತ ಶ್ರೇಷ್ಠ 'ಜಾತಿ' ಎಂದು ಕೊಳ್ಳುತ್ತಾರೆ. ಹಿಂದೆಲ್ಲಾ ಬ್ರಾಹ್ಮಣೇತರ ಜಾತಿಗಳ ಮದುವೆಗೆ ಹೋದರೆ ಅವರ ಮನೆಯಲ್ಲಿ ಊಟ ಮಾಡುತ್ತಿರಲಿಲ್ಲ. ಅಕ್ಕಿ, ಕಾಯಿ, ಬೇಳೆ ಪಡೆದು ತೋಟದಲ್ಲಿ 3 ಕಲ್ಲು ಹೂಡಿ ಅಡಿಗೆ ಮಾಡಿಕೊಳ್ಳುತ್ತಿದ್ದರು. ಬಡಿಸಿಕೊಳ್ಳಲು ತಲೆಯನ್ನು ಒಡೆಯಲು ಕಾಲನ್ನು ಹೊಂದಿದ ಸ್ಥಿತಿ ಇವರು.

ಜಾತಿ ಆವರಣ ಬಿಟ್ಟು ಬರಬೇಕು

ಹೀಗೆ 'ಪಂಚವಾದ್ಯ' ಒಂದು ಜಾತಿ ಕಸುಬು ಎಂದು ಮುದ್ರೆ ಒತ್ತಿರುವುದರಿಂದ ಬೇರೆ ಜಾತಿ ಸಮುದಾಯದವರು ಇದರಲ್ಲಿ ಪ್ರವೇಶವನ್ನು ಮಾಡಿಲ್ಲ. ಮಹತ್ವದ ಒಂದು ಕಲೆ 'ಜಾತಿ'ಯ ಚೌಕಟ್ಟಿನ ಕಾರಣಕ್ಕೆ ಸೊರಗುವ ಸ್ಥಿತಿ ಬಂದಿದೆ. ಹಲವು ಮಹತ್ವದ ಜನಪದ ಕಲೆಗಳ ಸ್ಥಿತಿಯೂ ಹೀಗೆ ಆಗಿದೆ. ಈ ಕಲೆಗಳ ಹುಟ್ಟು ಎಂದೂ ಜಾತಿ ಕೇಂದ್ರಿತವಾಗಿರಲಿಲ್ಲ. ಒಂದು ಸಮುದಾಯದ ಒಟ್ಟಂದದ ಕೊಡುಗೆ ಇದು. ಜಾನಪದದ ಪ್ರತಿಭೆಯ ಹೆಗ್ಗುರುತುಗಳಿವು. ಒಂದು ಪ್ರದೇಶದಲ್ಲಿ ಬದುಕುತ್ತಿರುವ ಜನಪದರ ಸಾಂಸ್ಕೃತಿಕ ಮೈಲುಗಲ್ಲಿದು. ಆದರೆ ಒಂದು ಘಟ್ಟದಲ್ಲಿ ಇದು 'ಜಾತಿ' ಕೇಂದ್ರಿತವಾಗಿ ತನ್ನ ಬೆಳವಣಿಗೆಯನ್ನು ತಾನೆ ಕುಂಟಿತಗೊಳಿಸಿಕೊಂಡಿತು.

ಹಾಗಾಗಿ ಇಂತಹ ಕಲೆಗಳು 'ಜಾತಿ' ಆವರಣವನ್ನು ಬಿಟ್ಟು ಆಚೆ ಬಂದು ಎಲ್ಲರೂ ಪಾಲ್ಗೊಳ್ಳುವಂತಾಗಬೇಕು. ಇಂತಹ ಕಲೆಗೆ ಆರ್ಥಿಕ ಮನ್ನಣೆಯೂ, ಸಾಮಾಜಿಕ ಮನ್ನಣೆಯೂ ಲಭ್ಯವಾಗಬೇಕು. ಹೀಗಾಗುವಾಗ ಮೊದಲು ಸಮಾಜದಲ್ಲಿ ಇಂದಿಗೂ ಪ್ರಬಲವಾಗಿ ಅಸ್ತಿತ್ವದಲ್ಲಿದ್ದ 'ಜಾತಿ' ಪದ್ಧತಿ ನಾಶವಾಗಬೇಕಾಗಿದೆ. ಜಾತಿ ಪದ್ಧತಿಯನ್ನು ವಿವಿಧ ರೂಪದಲ್ಲಿ ಹಾಗೆಯೇ ಇಟ್ಟುಕೊಂಡು 'ಜಾತಿ ಕಸುಬಿನ' ಹಣೆಪಟ್ಟಿಯಲ್ಲಿರುವ 'ಕಲೆ' ಯನ್ನು ಉಳಿಸಲು ಜನಪ್ರಿಯಗೊಳಿಸಲು ಸಾಧ್ಯವಿಲ್ಲ.

●

JANASHAKTHI KANNADA VARA PATRIKE MAR 6, 2016 Price : Rs. 10/-
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026
RNI No. KARKAN /2006/17926 Posted on every Satuarday
Licensed to Post without prepayment License No. WPP-283

ಜನತೆಯ ಸಂವಿಧಾನಿಕ ಹಕ್ಕುಗಳ ರಕ್ಷಣೆಗಾಗಿ ಎಡಪಕ್ಷಗಳ ಜಂಟಿ ಆಂದೋಲನ

ದೇಶದಲ್ಲಿ ತಾಲಿಬಾನ್, ಹಿಟ್ಲರ್ ಸಂಸ್ಕೃತಿ ಹುಟ್ಟಿಕೊಳ್ಳುತ್ತಿದೆ – ದೇವನೂರು ಮಹಾದೇವ



ರಾಜ್ಯದಲ್ಲಿನ ಐದು ಎಡಪಕ್ಷಗಳು ಅಂದರೆ, ಸಿಪಿಐ(ಎಂ), ಸಿಪಿಐ, ಎಸ್‌ಯುಸಿಐ(ಸಿ), ಸಿಪಿಐ(ಎಂಎಲ್) ಮತ್ತು ಎಐಎಫ್‌ಬಿ ಪಕ್ಷಗಳು, ಜನತೆಗೆ ಸಂವಿಧಾನ ಕೊಡಮಾಡಿರುವ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಒಂದು ಆಂದೋಲನದ ಭಾಗವಾಗಿ ಫೆಬ್ರವರಿ 25ರಂದು ರಾಜ್ಯದ ವಿವಿದೆಡೆ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದವು.

ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಹಿರಿಯ ಸಾಹಿತಿ ಕೆ.ಮರುಳಸಿದ್ದಪ್ಪನವರು "ವಿಭಿನ್ನ ಚಿಂತನೆಗಳ ಮೂಲಕ ಗಮನ ಸೆಳೆದಿರುವ ದೆಹಲಿಯ ಜೆಎನ್‌ಯು ವಿಶ್ವವಿದ್ಯಾಲಯದ ಮೇಲೆ ಬಿಜೆಪಿ ಮತ್ತು ಅದರ ಅಂಗಸಂಸ್ಥೆಗಳು ದೇಶಪ್ರೇಮ ಮತ್ತು ಹಿಂದುತ್ವದ ಹೆಸರಿನಲ್ಲಿ ಹತೋಟಿ ಸಾಧಿಸಲು ಮುಂದಾಗಿವೆ ಎಂದರು. ಪುರಾವೆಗಳು ಇಲ್ಲದಿದ್ದರೂ ಜೆಎನ್‌ಯು ವಿದ್ಯಾರ್ಥಿ ಮುಖಂಡ ಕನ್ಹಯ್ಯ ಕುಮಾರ್‌ನನ್ನು ದೇಶದ್ರೋಹ ಆರೋಪದ ಅಡಿ ಬಂಧಿಸಿರುವುದು ಎನ್‌ಡಿಎ ಸರ್ಕಾರದ ನಿಜಮುಖ



ಮತ್ತೊಮ್ಮೆ ಬಯಲಾಗಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿರವರು ತಿಳಿಸಿದರು.

ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಎಸ್‌ಯುಸಿಐ(ಸಿ) ಕಾರ್ಯದರ್ಶಿ ಬಿ.ಆರ್.ಮಂಜುನಾಥ್, ಸಿಪಿಐ(ಎಂ) ಬೆಂ.ಉತ್ತರ ಕಾರ್ಯರ್ಶಿ ಮೀನಾಕ್ಷಿ ಸುಂದರಂ, ಬೆಂ.ದಕ್ಷಿಣ ಕಾರ್ಯದರ್ಶಿ ಕೆ.ಎನ್.ಉಮೇಶ್, ಸಿಪಿಐ ರಾಜ್ಯ ಕಾರ್ಯದರ್ಶಿ ಪಿ.ವಿ.ಲೋಕೇಶ್, ಜೆಡಿಯು ಮುಖಂಡರಾದ ರವಿಚಂದ್ರ, ಸಿಪಿಐ(ಎಂ), ಸಿಪಿಐ, ಫಾರ್ವಡ್ ಬ್ಲಾಕ್, ಎಸ್‌ಯುಸಿಐ(ಸಿ), ಸಿಪಿಐ(ಎಂಎಲ್), ಜೆಡಿಯು ಮುಖಂಡರು, ಕಾರ್ಯಕರ್ತರು ಭಾಗಹಿಸಿದರು.

ಮೈಸೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಹಿರಿಯ ಸಾಹಿತಿ ದೇವನೂರು ಮಹಾದೇವ ರವರು ಮಾತನಾಡಿ "ಪ್ರಭುತ್ವಕ್ಕೆ ಬೇಡವಾದ ವಿಚಾರವನ್ನೂ ಯಾರು ಮಾತನಾಡುವಂತಿಲ್ಲ ಎಂಬ ವಾತಾವರಣ ನಿರ್ಮಾಣವಾಗಿದೆ. ಪ್ರಭುತ್ವ ಹಾಗೂ ಅವರ ಸಿದ್ಧಾಂತ ವಿರೋಧಿಸುವವರ ಬಗೆಗೆ ಅಸಹನೆ ಹೆಚ್ಚಾಗುತ್ತಿದೆ. ಇದು ಅಸಹಿಷ್ಣುತೆಗೆ ಕಾರಣವಾಗುತ್ತಿದೆ. ಇದ-ರಿಂದ ದೇಶದಲ್ಲಿ ತಾಲಿಬಾನ್, ಹಿಟ್ಲರ್ ಸಂಸ್ಕೃತಿ ಹುಟ್ಟಿಕೊಳ್ಳುತ್ತಿದೆ" ಎಂದು ಹೇಳಿದರು.



ಪ್ರತಿಭಟನೆಯಲ್ಲಿ ಪ್ರೋ. ಅರವಿಂದ ಮಾಲಗತ್ತಿ, ರಂಗಕರ್ಮಿ ಪ್ರೋ.ಎಸ್.ಆರ್. ರಮೇಶ್, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಬಸವರಾಜು, ಎಐಡಿವೈಒ ರಾಜ್ಯ ಉಪಾಧ್ಯಕ್ಷರಾದ ಉಮಾದೇವಿ, ಜಿಲ್ಲಾ ಅ ಧ್ಯಕ್ಷರಾದ ಚಂದ್ರಶೇಖರ್, ಎಸ್‌ಡಿಪಿಐ ಮುಖಂಡರಾದ ದೇವನೂರು ಪುಟ್ಟನಂಜಯ್ಯ, ಸಮತಾ ವೇದಿಕೆಯ ರತಿರಾವ್ ಮುಂತಾದ ಮುಖಂಡರು ಭಾಗವಹಿಸಿದ್ದರು.

ತುಮಕೂರು, ಮಂಗಳೂರು, ಹಾಸನ, ಮಂಡ್ಯ, ಉಡುಪಿ, ಭದ್ರಾವತಿ ಸೇರಿದಂತೆ ಎಡಪಕ್ಷಗಳ ನೇತೃತ್ವದಲ್ಲಿ ಪ್ರತಿಭಟನೆಗಳು ನಡೆದಿದೆ.



ಫೆ. 26 : ಅತಿಥಿ ಉಪನ್ಯಾಸಕರಿಂದ ಶೈಕ್ಷಣಿಕ ಬಂದ್

ಕರ್ನಾಟಕ ರಾಜ್ಯ ಅತಿಥಿ ಉಪನ್ಯಾಸಕರ ಸಂಘಟನೆ, ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ), ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್.ಐ) ಸಂಘಟನೆಯ ನೇತೃತ್ವದಲ್ಲಿ ಫೆ.26ರಂದು ಹಮ್ಮಿಕೊಂಡಿದ್ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಬಂದ್ ಯಶಸ್ವಿಯಾಗಿರುವ ವರದಿಗಳು ರಾಜ್ಯದ ಹಲವು ಕಡೆಗಳಿಂದ ಬಂದಿದೆ.


ಶೈಕ್ಷಣಿಕ ಬಂದ್‌ನ್ನು ವಿಧಾನ ಪರಿಷತ್ ಸದಸ್ಯರಾದ ಬಸವರಾಜ ಹೊರಟ್ಟಿ, ಪುಟ್ಟಣ್ಣರವರು ಬೆಂಬಲಸಿದ್ದಾರೆ. ಅದೇ ರೀತಿಯಲ್ಲಿ ಬೆಂಗಳೂರು, ಹಾವೇರಿ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಶೈಕ್ಷಣಿಕ ಬಂದ್ ಭಾಗವಾಗಿ ಅತಿಥಿ ಉಪನ್ಯಾಸಕರು ಮತ್ತು ಹೋರಾಟವನ್ನು ಬೆಂಬಲಿಸಿದ ಸಂಘಟನೆಗಳು, ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.



ಈ ಹೋರಾಟಗಳ ಒತ್ತಡದ ಫಲವಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಸಂಘದ ನಾಯಕರು, ಬರಗೂರು ರಾಮಚಂದ್ರಪ್ಪ, ಬಸವರಾಜ ಹೊರಟ್ಟಿ, ಪುಟ್ಟಣ ಅವರುಗಳನ್ನು ಫೆ. 26ರಂದು ಮಾತುಕತೆಗೆ ಆಹ್ವಾನಿಸಿದ್ದಾರೆ. ಇದು ಅತಿಥಿ ಉಪನ್ಯಾಸಕರ ಹೋರಾಟಕ್ಕೆ ಒಂದು ಹಂತದ ಜಯ ಎಂದು ಹೇಳಬಹುದು.

ಚಿತ್ರ ಮಾಹಿತಿ

ಹೆಚ್.ಆರ್. ನವೀನ್‌ಕುಮಾರ್



"ಜೆ.ಎನ್.ಯು, ಮೇಲೆ ದ್ಾಳಿ, ಭಾರತದ ಮೇಲೆ ದಾಳಿ"

ಜೆ.ಎನ್.ಯು, ಮೆಲಿನ ದಾಳಿಯ ಸುತ್ತ ಬರೆಯಲಾದ ಹಲವು ಪತ್ರಿಕಾ ಲೇಖನಗಳು, ಅದರ ವಿರುದ್ಧ ಚಳುವಳಿಯಲ್ಲಿ ಮಾಡಲಾದ ಭಾಷಣಗಳ ಸಂಗ್ರಹವನ್ನು 'ಕ್ರಿಯಾ ಪುಸ್ತಕ' "ಜೆ.ಎನ್.ಯು, ಮೇಲೆ ದಾಳಿ, ಭಾರತದ ಮೇಲೆ ದಾಳಿ" ಎಂಬ ತಲೆಬರಹದೊಂದಿಗೆ ಪ್ರಕಟಿಸಿದೆ.



JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**